ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 29 ಭಾನುವಾರ 2026

ಸಂಪುಟ: 46 | ಸಂಚಿಕೆ: 337 | ಪುಟಗಳು: 12


₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



ಕಲ್ಯಾಣ ಮಂಟಪ, ಅಪಾರ್ಟ್‌ಮೆಂಟ್‌ಗಳಲ್ಲಿ ಬಯೋಗ್ಯಾಸ್ ಪ್ಲಾಂಟ್ ಬೆಸ್ಟ್ ಐಡಿಯಾ!?




ಮೆಹುಲ್ ಪಟೇಲ್

ಎಲ್‌ಪಿಜಿ ಸಂಕಷ್ಟಕ್ಕೆ ಇದುವೇ ಪರಿಹಾರ

ಮೈಸೂರು, ಮಾ.28– ಕಲ್ಯಾಣ ಮಂಟಪಗಳು ಹಾಗೂ ವಸತಿ ಸಮುಚ್ಚಯ(ಅಪಾರ್ಟ್‌ಮೆಂಟ್)ಗಳಲ್ಲಿ ಬಯೋಗ್ಯಾಸ್ ಪ್ಲಾಂಟ್ ಅಳವಡಿಕೆಯನ್ನು ಕಡ್ಡಾಯಗೊಳಿಸಿದರೆ ಅಡುಗೆ ಅನಿಲ ಸಮಸ್ಯೆಯನ್ನು ಗಣನೀಯವಾಗಿ ಪರಿಹರಿಸಿಕೊಳ್ಳಬಹುದು ಎಂದು ಭಾರತೀಯ ಎಲ್‌ಪಿಜಿ ವಿತರಕರ ಸಂಘದ (ಎಲ್‌ಡಿಎಐ) ರಾಜ್ಯಾಧ್ಯಕ್ಷ ಮೆಹುಲ್ ಜೆ.ಪಟೇಲ್ ಅಭಿಪ್ರಾಯಿಸಿದ್ದಾರೆ.

ಅಮೆರಿಕ, ಇಸ್ರೇಲ್ ಹಾಗೂ ಇರಾನ್ ನಡುವಿನ ಸಂಘರ್ಷದಿಂದಾಗಿ ಭಾರತ ಸೇರಿದಂತೆ ಹಲವು ರಾಷ್ಟ್ರಗಳಲ್ಲಿ ಎಲ್‌ಪಿಜಿ ಸಮಸ್ಯೆ ಸೃಷ್ಟಿಯಾಗಿದೆ. ಈಗಾಗಲೇ ವಾಣಿಜ್ಯ ಸಿಲಿಂಡರ್ ವಿತರಣೆಯಲ್ಲಿ ಭಾರೀ ವ್ಯತ್ಯಯವಾಗಿದೆ. ಕಲ್ಯಾಣ ಮಂಟಪಗಳಿಗೆ ಸಿಲಿಂಡರ್ ಪೂರೈಕೆ ಆಗುತ್ತಿಲ್ಲ. ಏಪ್ರಿಲ್ 1ರಿಂದ ವಾಣಿಜ್ಯ ಸಿಲಿಂಡರ್ ಬೆಲೆಯನ್ನು ಮತ್ತಷ್ಟು ಹೆಚ್ಚಿಸುವ ಸಾಧ್ಯತೆ ಇದೆ. ಇಂತಹ ಪರಿಸ್ಥಿತಿ ಮುಂದೆಯೂ ಎದುರಾಗಬಹುದು. ಆದ್ದರಿಂದ ಪರ್ಯಾಯ ವ್ಯವಸ್ಥೆ ಬಗ್ಗೆ ಕ್ರಮ ವಹಿಸುವುದು ಅತ್ಯವಶ್ಯ ಎಂದಿದ್ದಾರೆ.

ಸಿಎಫ್‌ಟಿಆರ್‌ಐನಲ್ಲಿ ಡ್ರಮ್ ಬಳಸಿಕೊಂಡು ಬಯೋಗ್ಯಾಸ್ ಉತ್ಪಾದನೆ ಮಾಡಿಕೊಳ್ಳಲಾಗುತ್ತಿದೆ. ಅದೇ ಮಾದರಿಯಲ್ಲಿ ಎಲ್ಲಾ ಕಲ್ಯಾಣ ಮಂಟಪಗಳು ಹಾಗೂ ದೊಡ್ಡ ಅಪಾರ್ಟ್‌ಮೆಂಟ್‌ಗಳಲ್ಲಿ ಬಯೋಗ್ಯಾಸ್ ಪ್ಲಾಂಟ್‌ಗಳನ್ನು ಅಳವಡಿಸಿಕೊಳ್ಳಬೇಕು. ಕಲ್ಯಾಣ ಮಂಟಪಗಳಲ್ಲಿ ಬಯೋಗ್ಯಾಸ್ ವ್ಯವಸ್ಥೆ ಮಾಡಿಕೊಂಡರೆ ತರಕಾರಿ ತ್ಯಾಜ್ಯ, ಉಳಿಯುವ ಆಹಾರ ಹಾಗೂ ಬಾಳೆ ಎಲೆಗಳನ್ನೇ ಬಳಸಿಕೊಂಡು ಕಡಿಮೆ ಖರ್ಚಿನಲ್ಲಿ ಅಡುಗೆ ಅನಿಲ ತಯಾರಿಸಿಕೊಳ್ಳಬಹುದು. ಅಪಾರ್ಟ್‌ಮೆಂಟ್‌ಗಳಲ್ಲೂ ಎಲ್ಲಾ ಮನೆಗಳಿಂದ ಹಸಿ ತ್ಯಾಜ್ಯ ಸಂಗ್ರಹಿಸಿದರೆ ಅಗತ್ಯದಷ್ಟು ಅಡುಗೆ ಅನಿಲ ಉತ್ಪಾದಿಸಿಕೊಳ್ಳಬಹುದು ಎಂದು ತಿಳಿಸಿದ್ದಾರೆ.

ದೇಶದಾದ್ಯಂತ ಕಲ್ಯಾಣ ಮಂಟಪಗಳು ಹಾಗೂ ಅಪಾರ್ಟ್‌ಮೆಂಟ್‌ಗಳಲ್ಲಿ ಬಯೋಗ್ಯಾಸ್ ಪ್ಲಾಂಟ್ ಅಳವಡಿಕೆಯನ್ನು ಕಡ್ಡಾಯಗೊಳಿಸಿದರೆ ಎಲ್‌ಪಿಜಿ ಸಮಸ್ಯೆ ಸಾಕಷ್ಟು ತಗ್ಗುತ್ತದೆ. ಇದರೊಂದಿಗೆ ವಿದೇಶಗಳಿಂದ ಕಚ್ಚಾ ತೈಲ ಆಮದು ಪ್ರಮಾಣವೂ ಶೇ.15–20ರಷ್ಟು ಕಡಿಮೆಯಾಗುತ್ತದೆ. ಈ ಕ್ರಮದಿಂದ ಎಲ್‌ಪಿಜಿ ಪೂರೈಕೆಯಲ್ಲಿ ವ್ಯತ್ಯಾಸವಾದರೂ ಹೆಚ್ಚು ತೊಂದರೆಯಾಗುವುದಿಲ್ಲ. ಸರ್ಕಾರಗಳು ಹಾಗೂ ಸ್ಥಳೀಯ ಸಂಸ್ಥೆಗಳು ಇದನ್ನು ಗಂಭೀರವಾಗಿ ಪರಿಗಣಿಸಿ, ಸೂಕ್ತ ಕ್ರಮ ವಹಿಸಬೇಕು ಎಂದು ಮನವಿ ಮಾಡಿದ್ದಾರೆ.

ಬಯೋಗ್ಯಾಸ್ ಪ್ಲಾಂಟ್ ಅಳವಡಿಕೆಗೆ ಅಧಿಕ ವೆಚ್ಚವಾಗುವುದಿಲ್ಲ. ಬಯೋಗ್ಯಾಸ್‌ಗೆ ವಿನ್ಯಾಸಗೊಳಿಸಲಾಗಿರುವ ಬರ್ನರ್ ಅಳವಡಿಸಿಕೊಂಡರೆ ಎಲ್‌ಪಿಜಿಗೆ ಬಳಸುವ ಸ್ಟೌವ್‌ಗಳನ್ನೇ ಬಳಸಿಕೊಳ್ಳಬಹುದು. ಬಯೋಗ್ಯಾಸ್ ಪ್ಲಾಂಟ್ ಅಳವಡಿಕೆಗೆ ಗಾತ್ರ ಹಾಗೂ ಸಾಮರ್ಥ್ಯದ ಆಧಾರದಲ್ಲಿ ಸಬ್ಸಿಡಿಯೂ ಲಭ್ಯವಿದೆ. ಎಲ್‌ಪಿಜಿ ಸಿಲಿಂಡರ್ ಸಮಸ್ಯೆಯಿಂದ ನಷ್ಟ ಅನುಭವಿಸುವ ಬದಲು ಈ ಪರ್ಯಾಯ ಕ್ರಮಕ್ಕೆ ಕಲ್ಯಾಣ ಮಂಟಪಗಳ ಮಾಲೀಕರು ಚಿಂತನೆ ಮಾಡುವುದು ಒಳ್ಳೆಯದು ಎಂದು ಸಲಹೆ ನೀಡಿದ್ದಾರೆ.

ಅಭಿನಂದನೆ...



ಮೈಸೂರಿನ ಸೇಂಟ್ ಫಿಲೋಮಿನಾ ಕಾಲೇಜಿನ ಒಳಾಂಗಣದಲ್ಲಿ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಹೊಸಹಳ್ಳಿ ಗ್ರಾಪಂ ಮಾಜಿ ಸದಸ್ಯರೂ ಆದ ಉಳ್ಳಿಕೆರೆಂಯ ಆರೋಗ್ಯ ಮಾತೆ ಚರ್ಚ್‌ನ ಸದಸ್ಯೆ ರಾಣಿ ಸೇರಿದಂತೆ ವಿವಿಧ ಕ್ಷೇತ್ರದ ಸಾಧಕಿಯರನ್ನು ಮೈಸೂರು ಡಯಾಸಿಸ್ ವತಿಯಿಂದ ಅಭಿನಂದಿಸಲಾಯಿತು. ಈ ವೇಳೆ ಮೈಸೂರು ಬಿಷಪ್ ರೆವರೆಂಡ್ ಫ್ರಾನ್ಸಿಸ್ ಸೆರಾವೋ ಎಸ್.ಜೆ. ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ರಿಂಗ್ ರಸ್ತೆಯುದ್ದಕ್ಕೂ ವಿಶೇಷ ಸ್ವಚ್ಛತಾ ಅಭಿಯಾನ

36 ಜೆಸಿಬಿ, 32 ಟ್ರಾಕ್ಟರ್, 8 ಟಿಪ್ಪರ್, 11 ಡೋಜರ್, ನೂರಾರು ಸಿಬ್ಬಂದಿ ಬಳಕೆ



ಮೈಸೂರಿನ ರಿಂಗ್ ರಸ್ತೆ ಸ್ವಚ್ಛತಾ ವಿಶೇಷ ಅಭಿಯಾನಕ್ಕೆ ದೊಡ್ಡಕೆರೆ ಮೈದಾನದಲ್ಲಿ ಪಾಲಿಕೆ ಆಯುಕ್ತ ಆಸಿಫ್ ಚಾಲನೆ ನೀಡಿದರು.



ಮೈಸೂರಿನ ರಿಂಗ್ ರಸ್ತೆಯಲ್ಲಿ ಸ್ವಚ್ಛತಾ ಅಭಿಯಾನದಲ್ಲಿ ಪಾಲ್ಗೊಂಡಿರುವ ನಗರಪಾಲಿಕೆ ಸಿಬ್ಬಂದಿ.

ಮೈಸೂರು,ಮಾ.28(ಎಂಟಿವೈ)– ಮೈಸೂರಿನ ರಿಂಗ್ ರಸ್ತೆಯ ಎರಡೂ ಬದಿ ರಾಶಿ ರಾಶಿ ಬಿದ್ದಿರುವ ಕಟ್ಟಡ ತ್ಯಾಜ್ಯ ಸೇರಿದಂತೆ ಕಸ ತೆರವು ಮಾಡಿ, ಸ್ವಚ್ಛಗೊಳಿಸುವ ಎರಡು ದಿನಗಳ ವಿಶೇಷ ಅಭಿಯಾನವನ್ನು ಮೈಸೂರು ಮಹಾನಗರಪಾಲಿಕೆ ಆರಂಭಿಸಿದೆ.

ಮೈಸೂರಿನ ದೊಡ್ಡಕೆರೆ ಮೈದಾನದಲ್ಲಿ ಶನಿವಾರ ಬೆಳಗ್ಗೆ ನಡೆದ ಹೊರ ವರ್ತುಲ (ರಿಂಗ್ ರಸ್ತೆ) ರಸ್ತೆಯ ಸ್ವಚ್ಛತಾ ಅಭಿಯಾನಕ್ಕೆ ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಚಾಲನೆ ನೀಡಿದರು. ರಿಂಗ್ ರಸ್ತೆಯ ಉದ್ದಗಲಕ್ಕೂ ಸ್ವಚ್ಛತೆಗೆ ತಂಡಗಳನ್ನು ನಿಯೋಜಿಸಿದ್ದು, ತಂಡದಲ್ಲಿರುವ ಸ್ವಚ್ಛತಾ ಸಿಬ್ಬಂದಿ ರಿಂಗ್ ರಸ್ತೆ ಪಕ್ಕದಲ್ಲಿರುವ ಕಟ್ಟಡ ತ್ಯಾಜ್ಯ ಒಳಗೊಂಡಂತೆ ಕಸ ಹಾಗೂ ಇನ್ನಿತರ ನಿರುಪಯುಕ್ತ ತ್ಯಾಜ್ಯ ತೆರವುಗೊಳಿಸಲಿದ್ದಾರೆ.

ಸಾರ್ವಜನಿಕರ ಸಹಕಾರ ಅಗತ್ಯ: ಸ್ವಚ್ಛತಾ ಅಭಿಯಾನಕ್ಕೆ ಚಾಲನೆ ನೀಡಿದ ಬಳಿಕ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಮಾತನಾಡಿ, ಮೈಸೂರು ನಗರವನ್ನು ಮತ್ತೆ ಸ್ವಚ್ಛತೆಯಲ್ಲಿ ಮುಂಚೂಣಿ ನಗರವಾಗಿಸಲು ಮೈಸೂರು ಮಹಾನಗರ ಪಾಲಿಕೆ ವಿವಿಧ ಕ್ರಮ ಕೈಗೊಂಡಿದೆ. ಇಂದಿನಿಂದ ಎರಡು ದಿನಗಳ ಕಾಲ ರಿಂಗ್ ರಸ್ತೆಯ ಆಸುಪಾಸಿನಲ್ಲಿ ಸುರಿದಿರುವ ಕಟ್ಟಡ ತ್ಯಾಜ್ಯ, ಪ್ಲಾಸ್ಟಿಕ್ ಮತ್ತು ಇನ್ನಿತರ ತ್ಯಾಜ್ಯವನ್ನು ತೆರವುಗೊಳಿಸಿ ರಿಂಗ್ ರಸ್ತೆಯ ಪರಿಸರವನ್ನು ಸ್ವಚ್ಛವಾಗಿಡುವ ಉದ್ದೇಶದಿಂದ ವಿಶೇಷ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಈ ಅಭಿಯಾನಕ್ಕೆ ವಿವಿಧ ಸ್ವಯಂ ಸೇವಾ ಸಂಸ್ಥೆ ಹಾಗೂ ಸಾರ್ವಜನಿಕರು ಸಹಕಾರ ನೀಡಿದ್ದಾರೆ ಎಂದು ತಿಳಿಸಿದರು.

ರಿಂಗ್ ರಸ್ತೆಯು ನಾಲ್ಕು ಪಟ್ಟಣ ಪಂಚಾಯಿತಿ, ಒಂದು ನಗರ ಸಭೆ, ಒಂದು ಗ್ರಾಪಂ ವ್ಯಾಪ್ತಿಗೆ ಸೇರುತ್ತದೆ. ಈ ಸ್ಥಳೀಯ ಸಂಸ್ಥೆಗಳೊಂದಿಗೆ ಮೈಸೂರು ಮಹಾನಗರಪಾಲಿಕೆ ಸಮನ್ವಯತೆ ಸಾಧಿಸಿ ಸ್ವಚ್ಛತಾ ಅಭಿಯಾನ ಆರಂಭಿಸಿದ್ದು, ಇದರಲ್ಲಿ 36 ಜೆಸಿಬಿ, 32 ಟ್ರಾಕ್ಟರ್, 8 ಟಿಪ್ಪರ್, 11 ಡೋಜರ್ ಹಾಗೂ ಹಲವು ಸ್ವಚ್ಛತಾ ಸಿಬ್ಬಂದಿಗಳನ್ನು ಬಳಸಿಕೊಳ್ಳಲಾಗುತ್ತಿದೆ.

ಸ್ವಚ್ಛ ಸರ್ವೇಕ್ಷಣೆಯಲ್ಲಿ ಮೈಸೂರು ಮಹಾನಗರ ಪಾಲಿಕೆಗೆ ಹೆಚ್ಚು ಅಂಕ ದೊರೆಯಬೇಕಾದರೆ ಸಾರ್ವಜನಿಕರ ಸಹಕಾರ ಅಗತ್ಯ. ಇನ್ನು ಮುಂದೆ ಯಾದರೂ ಮೈಸೂರು ನಗರ ಹಾಗೂ ಹೊರ ವರ್ತುಲ ರಸ್ತೆಯಲ್ಲಿ ಎಲ್ಲೆಂದರಲ್ಲಿ ಕಸ ಎಸೆಯದೆ, ಕಟ್ಟಡ ತ್ಯಾಜ್ಯ ಸುರಿಯುವುದನ್ನು ನಿಲ್ಲಿಸಬೇಕು. ಕಸವನ್ನು ನಗರಪಾಲಿಕೆಯ ಕಸ ಸಂಗ್ರಹ ವಾಹನಕ್ಕೆ ನೀಡಬೇಕು. ಪಾಲಿಕೆಯೊಂದಿಗೆ ಜನ ಸಹಕರಿಸಿದಾಗ ಮಾತ್ರ ಮೈಸೂರು ಸ್ವಚ್ಛ ನಗರಿ ಹೆಗ್ಗಳಿಕೆಗೆ ಪಾತ್ರವಾಗಲಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಸೂಪರಿಂಟೆಂಡೆಂಟ್ ಇಂಜಿನಿಯರ್ ಸಿ.ಎಸ್. ಮಂಜು, ಯುಜಿಡಿ ಎಇಇಗಳಾದ ಅಶ್ವಿನ್, ಶ್ರೀನಿವಾಸ್, ಜೆಡಿಟಿಪಿ ನಾಯಕ್, ಜೆಎಸ್‌ಎಸ್ ಫೌಂಡೇಷನ್ ಮುಖ್ಯಸ್ಥ ಶ್ರೀಹರಿ, ವಿವಿಧ ವಲಯ ಕಚೇರಿಗಳ ಸಹಾಯಕ ಆಯುಕ್ತರು, ಪಾಲಿಕೆ ಇಂಜಿನಿಯರ್‌ಗಳು, ಪರಿಸರ ಅಭಿಯಂತರರು ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಮೈಸೂರಲ್ಲಿ ಹೆಚ್ಚುವರಿ ಸಿಗ್ನಲ್; ಭವಿಷ್ಯದ ಮೈಸೂರಿಗೆ ಪೂರಕ

ಸಮಸ್ಯೆಗಳಿರುವೆಡೆ ಸರಿಪಡಿಸಬಹುದು; ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ



ಮೈಸೂರಿನ ಬನ್ನಿಮಂಟಪದಲ್ಲಿ ನೂತನ ಬಸ್ ನಿಲ್ದಾಣ ಕಾಮಗಾರಿಯನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಶನಿವಾರ ಪರಿಶೀಲಿಸಿದರು. ಈ ವೇಳೆ ಶಾಸಕ ತನ್ವೀರ್‌ಸೇಠ್, ಜಿಲ್ಲಾಧಿಕಾರಿ ಲಕ್ಷ್ಮಿಕಾಂತರೆಡ್ಡಿ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಕೆಎಸ್‌ಆರ್‌ಟಿಸಿ ಮೈಸೂರು ಗ್ರಾಮೀಣ ವಿಭಾಗದ ನಿಯಂತ್ರಣಾಧಿಕಾರಿ ಶ್ರೀನಿವಾಸ್ ಮತ್ತಿತರರಿದ್ದರು.

ಮೈಸೂರು,ಮಾ.28(ಪಿಎಂ)– ಹೆಚ್ಚುವರಿ ಸಿಗ್ನಲ್ ಲೈಟ್‌ಗಳ ಅಳವಡಿಕೆಯು ವೈಜ್ಞಾನಿಕವಾಗಿದ್ದು, ಅಪಘಾತ ತಡೆಗಟ್ಟಲು, ಸುಗಮ ಸಂಚಾರಕ್ಕೆ ಅನುಕೂಲವಾಗಲಿದೆ. ಜೊತೆಗೆ ಭವಿಷ್ಯದ ಮೈಸೂರು ನಗರಕ್ಕೆ ಹೆಚ್ಚಿನ ಅನುಕೂಲ. ಏನಾದರೂ ಸಮಸ್ಯೆಗಳಿರುವ ಕಡೆಗಳಲ್ಲಿ ಸರಿಪಡಿಸಬಹುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ತಿಳಿಸಿದರು.

ಮೈಸೂರು ವಿಮಾನ ನಿಲ್ದಾಣದಲ್ಲಿ ಶನಿವಾರ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದ ಅವರು, ಸಿಗ್ನಲ್ ಲೈಟ್‌ಗಳ ಸಂಬಂಧ ಪರಿಶೀಲನೆ ಮಾಡಿದ್ದೇನೆ. ಇದಲ್ಲದೆ, ವೈಟ್ ಟಾಪಿಂಗ್, ನೂತನ ಗ್ರಾಮಾಂತರ ಬಸ್ ನಿಲ್ದಾಣ ಕಾಮಗಾರಿ, ಡಾ.ಬಿ.ಆರ್.ಅಂಬೇಡ್ಕರ್ ಭವನದ ಕಾಮಗಾರಿಯನ್ನು ಪರಿಶೀಲನೆ ಮಾಡಿದ್ದೇನೆ ಎಂದರು.

ವೈಜ್ಞಾನಿಕ ರೀತಿಯಲ್ಲಿ ಹೆಚ್ಚುವರಿ ಸಿಗ್ನಲ್ ಲೈಟ್ ಅಳವಡಿಸಲಾಗಿದೆ. ಈ ಸಂಬಂಧ ಪೊಲೀಸ್ ಆಯುಕ್ತರು ವಿವರ ನೀಡಿದ್ದಾರೆ. ಹೆಜ್ಜೆ ಹೆಜ್ಜೆಗೂ ಏನೂ ಹಾಕಿಲ್ಲ. ವೈಜ್ಞಾನಿಕವಾಗಿ ಅಳವಡಿಸಿದ್ದಾರೆ. ತೊಂದರೆಯಾಗಿದ್ದರೆ ಮತ್ತೊಮ್ಮೆ ಪರಿಶೀಲನೆ ಮಾಡುತ್ತೇವೆ. ಆದರೆ ಹೆಚ್ಚುವರಿಯಾಗಿ ಅಳವಡಿಸಿರುವುದು ಜನತೆ ಹಿತದೃಷ್ಟಿಯಿಂದಲೇ ಆಗಿದೆ. ಸಿಗ್ನಲ್ ಸಂಬಂಧ ಸ್ಟ್ರೀಮ್‌ಲೈನ್ ಹಾಗೂ ರೆಗ್ಯೂಲೆಟ್ ಮಾಡಲಾಗಿದೆ. ಏನಾದರೂ ಸಮಸ್ಯೆಗಳಿದ್ದರೆ, ಅದನ್ನು ಸರಿಪಡಿಸಬಹುದು. ಈ ಹೆಚ್ಚುವರಿ ಸಿಗ್ನಲ್ ಭವಿಷ್ಯದ ಮೈಸೂರಿಗೆ ತುಂಬ ಅನುಕೂಲ ಆಗಲಿದೆ ಎಂದು ಹೇಳಿದರು. ಇದಕ್ಕೆ ದನಿಗೂಡಿಸಿದ ಶಾಸಕ ಕೆ.ಹರೀಶ್‌ಗೌಡ, ಹೆಚ್ಚುವರಿ ಸಿಗ್ನಲ್ ಅಳವಡಿಕೆ ನಂತರ ರಿಂಗ್ ರಸ್ತೆಯಲ್ಲಿ ಅಪಘಾತ ಕಡಿಮೆಯಾಗಿವೆ ಎಂದರು.

ಆಗಸ್ಟ್‌ಗೆ ಪೂರ್ಣ: ಮೈಸೂರಿನಲ್ಲಿ ನಿರ್ಮಾಣ ಹಂತದಲ್ಲಿ ಇರುವ ಡಾ.ಬಿ. ಆರ್.ಅಂಬೇಡ್ಕರ್ ಭವನದ ಕಾಮಗಾರಿಯನ್ನು ಆಗಸ್ಟ್ ವೇಳೆಗೆ ಪೂರ್ಣಗೊಳಿಸಲು ಕಾಲಮಿತಿ ನೀಡಿದ್ದೇವೆ ಎಂದು ಡಾ.ಹೆಚ್.ಸಿ.ಮಹದೇವಪ್ಪ ತಿಳಿಸಿದರು. ಬೃಹತ್ ಸ್ಮಾರಕ ಮಾದರಿಯಲ್ಲಿ ಭವನ ನಿರ್ಮಾಣಗೊಳ್ಳುತ್ತಿದ್ದು, ರಾಷ್ಟ್ರೀಯ–ಅಂತಾರಾಷ್ಟ್ರೀಯ ಸಮ್ಮೇಳನ ಹಾಗೂ ವಿಚಾರ ಸಂಕಿರಣ ಆಯೋಜನೆಗೂ ಅವಕಾಶವಾಗಲಿದೆ. ಸುಮಾರು 1,800 ಮಂದಿ ಅಲ್ಲಿ ಆಸೀನರಾಗಬಹುದು ಎಂದು ಹೇಳಿದರು. ಮೈಸೂರು ನಗರದಲ್ಲಿ 46 ಕಿ.ಮೀ. ವಿಸ್ತೀರ್ಣದಲ್ಲಿ 12 ರಸ್ತೆಗಳು ಒಳಗೊಂಡಂತೆ ವೈಟ್ ಟಾಪಿಂಗ್ ಮಾಡಲಾಗುತ್ತಿದೆ. ಇದರಿಂದ ರಸ್ತೆಯು ಬಾಳಿಕೆಯಲ್ಲಿ 30 ವರ್ಷ ಗ್ಯಾರಂಟಿ ಇರಲಿದೆ ಎಂದು ತಿಳಿಸಿದರು.

ನೇಪಾಳ ನೂತನ ಪ್ರಧಾನಿ ಪ್ರಮಾಣದ ಬೆನ್ನಲ್ಲೇ ಮಾಜಿ ಪ್ರಧಾನಿ ಬಂಧನ


ಶರ್ಮಾ ಓಲಿ

ಕಠ್ಮಂಡು: ನೇಪಾಳದ ನೂತನ ಪ್ರಧಾನಿಯಾಗಿ ಬಾಲೇಂದ್ರ ಶಾ ಪ್ರಮಾಣ ವಚನ ಸ್ವೀಕಾರ ಮಾಡಿದ 24 ಗಂಟೆಯೊಳಗೆ ಮಾಜಿ ಪ್ರಧಾನಿ ಕೆ.ಪಿ.ಶರ್ಮಾ ಅಲಿ ಅವರನ್ನು ಪೊಲೀಸರು ಬಂಧಿಸಿದ್ದಾರೆ.

ಕಳೆದ ವರ್ಷ 'ಜೆನ್–ಜೆ' ಪ್ರತಿಭಟನೆ ವೇಳೆ ನಡೆದ ಹಿಂಸಾಚಾರ ಮತ್ತು ಸಾವು–ನೋವುಗಳಿಗೆ ಸಂಬಂಧಿಸಿದಂತೆ ಶರ್ಮಾ ಓಲಿ ಅವರನ್ನು ಬಂಧಿಸಲಾಗಿದ್ದು, ಇಲ್ಲಿನ ರಾಜಕೀಯ ಇತಿಹಾಸದಲ್ಲಿ ಇಂದು ನಡೆದಿರುವ ಅತ್ಯಂತ ಮಹತ್ವದ ಮತ್ತು ನಾಟಕೀಯ ಬೆಳವಣಿಗೆ ದಕ್ಷಿಣ ಏಷ್ಯಾದ ಗಮನ ಸೆಳೆದಿದೆ. ಕರ್ನಾಟಕದಲ್ಲಿ ಇಂಜಿನಿಯರಿಂಗ್ ಪದವಿ ಪಡೆದಿರುವ 35 ವರ್ಷದ ಬಾಲೇಂದ್ರ ಶಾ, ಅತ್ಯಂತ ಕಿರಿಯ ವಯಸ್ಸಿನಲ್ಲೇ ನೇಪಾಳದ ಪ್ರಧಾನಿಯಾಗಿ ಶುಕ್ರವಾರ ಮಧ್ಯಾಹ್ನ ಪ್ರಮಾಣ ವಚನ ಸ್ವೀಕರಿಸಿದ ಬಳಿಕ ನಡೆದ ಮೊದಲ ಸಚಿವ ಸಂಪುಟ ಸಭೆಯಲ್ಲಿ, ಜೆನ್–ಜೆ ಹಿಂಸಾಚಾರ ಕುರಿತು ತನಿಖೆ ನಡೆಸಿದ್ದ ಉನ್ನತ ಮಟ್ಟದ ಸಮಿತಿಯ ವರದಿಯನ್ನು ಜಾರಿಗೆ ತರಲು ನಿರ್ಧರಿಸಲಾಯಿತು. ಈ ವರದಿಯು ಓಲಿ ಮತ್ತು ಮಾಜಿ ಗೃಹ ಸಚಿವರ ನಿರ್ಲಕ್ಷ್ಯ ಹಾಗೂ ಪ್ರತಿಭಟನಕಾರರನ್ನು ಹತ್ತಿಕ್ಕಲು ಬಲಪ್ರಯೋಗ ಮಾಡಿರುವುದನ್ನು ಸ್ಪಷ್ಟಪಡಿಸಿ, ಕನಿಷ್ಠ 10 ವರ್ಷಗಳ ಜೈಲು ಶಿಕ್ಷೆಗೆ ಶಿಫಾರಸು ಮಾಡಿದೆ. ಈ ಹಿನ್ನೆಲೆಯಲ್ಲಿ ಮಾಜಿ ಪ್ರಧಾನಿ ಶರ್ಮಾ ಓಲಿಯನ್ನು ಬಂಧಿಸಲಾಗಿದೆ.

ಕರವೇ ಸ್ವಾಭಿಮಾನಿ ಬಳಗದಿಂದ ಮಹಿಳಾ ದಿನಾಚರಣೆ

ಮೈಸೂರು, ಮಾ.28(ಜಿಎ)–ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಬಳಗದ ವತಿಯಿಂದ ಮಾ.31ರಂದು ಬೆಳಗ್ಗೆ 11 ಗಂಟೆಗೆ ರೋಟರಿ ವೆಸ್ಟ್ ಸಭಾಂಗಣದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ನೂತನ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ರಾಜ್ಯಾಧ್ಯಕ್ಷ ಡಾ.ಎಂ.ಲಿಂಗರಾಜು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಹಿಳಾ ಘಟಕದ ರಾಜ್ಯಾಧ್ಯಕ್ಷರಾದ ಕಮಲಾ ನಟರಾಜ್ ಅಧ್ಯಕ್ಷತೆ ವಹಿಸುವರು. ಕಾರ್ಯಕ್ರಮವನ್ನು ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಉದ್ಘಾಟಿಸುವರು. ವಿಶೇಷ ಅತಿಥಿಗಳಾಗಿ ಮೈಸೂರು ವಿವಿ ಕುಲಸಚಿವೆ ಎಂ.ಕೆ.ಸವಿತಾ ಆಗಮಿಸಲಿದ್ದಾರೆ. ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧಕರಾದ ಡಾ.ಪ್ರಿಯಾಂಕ ರವಿಕುಮಾರ್, ಮಾಲಿನಿ ಪಾಲಾಕ್ಷ, ಸಬಿತ ಬಾಯಿ, ಸೌಮ್ಯ, ಭವಾನಿ, ರಾಧ, ಬನ್ನಮ್ಮ, ಮಮತ, ಶ್ರೀದೇವಿ, ಕುಪ್ಪಮ್ಮ, ಲಕ್ಷ್ಮಿ ಹಾಗೂ ಇನ್ನಿತರರನ್ನು ಸನ್ಮಾನಿಸಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ಕಮಲಾ ನಟರಾಜ್, ಸೋಮೇಗೌಡ, ರವಿಪ್ರಸಾದ್, ಮೈತ್ರಿರಾಜ್, ಚರಣ್ ರಾಜ್ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9 ರಿಂದ ಪಿಸಿಓಡಿ ತೊಂದರೆ, ಬೊಜ್ಜು ನಿವಾರಣೆ, ಪಾರ್ಕಿನ್‌ಸನ್ಸ್ ಕಾಯಿಲೆ, ವಸಂತ ವಮನ ದೇಹಶುದ್ಧಿ, ಮೈಗ್ರೇನ್, ತಲೆನೋವು, ಕಿಡ್ನಿ ತಪಾಸಣೆ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಆಲನಹಳ್ಳಿ.

■ **ಶ್ರೀ ವೀರಶೈವ ಸಾರ್ವಜನಿಕ ಸೇವಾ ಸಂಸ್ಥೆ :** ಶ್ರೀ ಆದಿಜಗದ್ಗುರು ರೇಣುಕಾಚಾರ್ಯರ ಜಯಂತ್ಯೋತ್ಸವ, ಬೆಳಗ್ಗೆ 11ಕ್ಕೆ ಸಭಾ ಕಾರ್ಯಕ್ರಮ, ಸಾನ್ನಿಧ್ಯ: ಅರಮನೆ ಜಪದಕಟ್ಟೆ ಮಠದ ಶ್ರೀ ಮುಮ್ಮಡಿ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಶ್ರೀ ಚನ್ನಸಿದ್ದೇಶ್ವರ ಶಿವಾಚಾರ್ಯ ಸ್ವಾಮೀಜಿಗಳಿಂದ ಉಪನ್ಯಾಸ, ಸಮ್ಮುಖ : ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ, ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸ್ಥಳ: ಶ್ರೀ ಆದಿಜಗದ್ಗುರು ರೇಣುಕಾಚಾರ್ಯ ದೇವಾಲಯ.

■ **ಕರ್ನಾಟಕ ಬುದ್ಧ ಧಮ್ಮ ಸಮಿತಿ :** ಬುದ್ಧ ಮೂರ್ತಿ ಪ್ರತಿಷ್ಠಾಪನೆ, ಬೆಳಗ್ಗೆ 9ಕ್ಕೆ ಧಾರ್ಮಿಕ ಸಭೆ, ಪರಿತ್ರಾಣ ಪಠಣ, ಪಂಚಶೀಲ ಬೋಧನೆ, ಮೈತ್ರಿಧ್ಯಾನ, ಧಮ್ಮೋಪದೇಶ, ಸಮ್ಮುಖ : ನಾಗಪುರ ಅಲೋಕ ಬುದ್ಧ ವಿಹಾರದ ವಿನಯರಕ್ಷಿತ ಭಂತೇಜಿ, ಉಪಸ್ಥಿತರು : ಮನೋರಕ್ಷಿತ ಭಂತೇಜಿ, ಕರ್ಮರಿಂಪೂಚಿ ಭಂತೇಜಿ, ಭೋದಿರತ್ನ ಭಂತೇಜಿ, ಬುದ್ಧ ಪ್ರಕಾಶ್ ಭಂತೇಜಿ, ಬೋಧಿದತ್ತ ಭಂತೇಜಿ, ಭಂತೆ ಡಾ. ಕಲ್ಯಾಣಸಿರಿ, ಬೆಳಗ್ಗೆ 11.30ಕ್ಕೆ ವೇದಿಕೆ ಕಾರ್ಯಕ್ರಮ, ಸಮ್ಮುಖ: ಉರಿಲಿಂಗ ಪೆದ್ದಿ ಮಹಾಸಂಸ್ಥಾನ, ಗಾಂಧಿನಗರದ ಶ್ರೀಜ್ಞಾನಪ್ರಕಾಶ್ ಸ್ವಾಮೀಜಿ, ಅಧ್ಯಕ್ಷತೆ : ಸಮಿತಿ ಅಧ್ಯಕ್ಷ ಪ್ರೊ.ಡಿ. ನಂಜುಂಡಯ್ಯ, ಪುಸ್ತಕ ಬಿಡುಗಡೆ : ಕರ್ನಾಟಕ ಬುದ್ಧ ಧಮ್ಮ ಸಮಿತಿಗಳ ಒಕ್ಕೂಟದ ಗೌರವ ಅಧ್ಯಕ್ಷ ಬಿ.ಗೋಪಾಲ್, ಸ್ಥಳ: ಸಿದ್ಧಾರ್ಥ ಬುದ್ಧ ವಿಹಾರ, ಡಿ. ಸಂಜೀವಯ್ಯ ಸ್ಮಾರಕ ಶಿಕ್ಷಣ ಸಂಸ್ಥೆ ಆವರಣ, ವಿಜಯನಗರ 1ನೇ ಹಂತ.


■ **ಅನ್ನಪೂರ್ಣ ಐ ಹಾಸ್ಪಿಟಲ್:** ಯುಗಾದಿ ಹಾಗೂ ಅಂತರರಾಷ್ಟ್ರೀಯ ಮಹಿಳಾ ದಿನದ ಅಂಗವಾಗಿ ಉಚಿತ ಕಣ್ಣಿನ ತಪಾಸಣೆ ಶಿಬಿರ, ಸ್ಥಳ: ಅನ್ನಪೂರ್ಣ ಕಣ್ಣಿನ ಆಸ್ಪತ್ರೆ, #199 ಸಾಯಿಪಾದಂ, ನ್ಯೂ ಕಾಂತರಾಜ್ ಅರಸ್ ರಸ್ತೆ, ಶಾರದಾದೇವಿ ನಗರ, ಬೆಳಗ್ಗೆ 10 ರಿಂದ.

■ **ವಿಶ್ವೇಶ್ವರಯ್ಯ ಡೆವಲಪ್‌ಮೆಂಟ್ ಆರ್ಗನೈಜೇಷನ್ :** ಸಾಧಕರ ಸಂಭ್ರಮ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ : ಮೇಯರ್ ಜನರಲ್ ಅಹಮದ್, ಅಧ್ಯಕ್ಷತೆ : ನಿವೃತ್ತ ಮುಖ್ಯ ಇಂಜಿನಿಯರ್ ಶಿವರಾಮು, ಮುಖ್ಯ ಅತಿಥಿಗಳು: ವಿದುಷಿ ಕೆ.ಎಸ್.ಜಯಲಕ್ಷ್ಮಿ, ಮೇಜರ್ ಅಶ್ವಥ್ ಕುಮಾರ್, ಕರ್ನಲ್ ಸಂಜೀವ್ ವೈ.ಕೆ., ಎನ್. ಕೇಶವಮೂರ್ತಿ, ಸೂರ್ಯಕೀರ್ತಿ, ಸ್ಥಳ: ಕಲಾಮಂದಿರ, ಬೆಳಗ್ಗೆ 10ಕ್ಕೆ.

■ **ಜೆಎಸ್‌ಎಸ್ ಮಹಾವಿದ್ಯಾಪೀಠ :** ರಾಜ್ಯ ಮಟ್ಟದ ದೇಸಿ ಕ್ರೀಡಾಕೂಟ, ಉದ್ಘಾಟನೆ : ಕಾಲೇಜು ಶಿಕ್ಷಣ ವಿಭಾಗದ ಸಹಾಯಕ ನಿರ್ದೇಶಕ ಬಿ. ನಿರಂಜನಮೂರ್ತಿ, ಅಧ್ಯಕ್ಷತೆ : ಪ್ರಿನ್ಸಿಪಾಲ್ ಡಾ. ರೇಚಣ್ಣ, ಸ್ಥಳ: ಮಂತ್ರ ಮಹರ್ಷಿ ಸಭಾಂಗಣ, ಬೆಳಗ್ಗೆ 10ಕ್ಕೆ.

■ **ಮೈಸೂರು ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ :** ಡಾ.ಸಿ. ವಾಣಿ ರಾಘವೇಂದ್ರ ಅವರ ಶ್ರೀ ರಾಮಾಯಣ ಚರಿತಾಮೃತವಾಣಿ ಲೇಖನಗಳ ಸಂಕಲನ ಹಾಗೂ ಕೆ. ಪರಮೇಶ ಅವರ ಅಕ್ಷರ ಜ್ಯೋತಿ ಲೇಖನಗಳ ಸಂಕಲನ ಲೋಕಾರ್ಪಣೆ, ಪ್ರಶಸ್ತಿ ಪ್ರದಾನ, ಕವಿಗೋಷ್ಠಿ ಕಾರ್ಯಕ್ರಮ, ಉದ್ಘಾಟನೆ : ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷ ಎಂ. ಚಂದ್ರಶೇಖರ್, ಸ್ಥಳ: ಐಡಿಯಲ್ ಜಾವಾ ರೋಟರಿ ಶಾಲೆ, ಬೆಳಗ್ಗೆ 10ರಿಂದ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಮೈಸೂರು–ಚಾಮರಾಜನಗರ ಆರ್ಯ ಈಡಿಗರ ಸಂಘ:** ಮೋಕ್ಷ ಗುಂಡಂ ವಿಶ್ವೇಶ್ವರಯ್ಯ ದತ್ತಿ ಹಾಗೂ ಮನ್ನಾರ್ ಕೃಷ್ಣಯ್ಯ ದತ್ತಿ ಉಪನ್ಯಾಸ ಕಾರ್ಯಕ್ರಮ, ಉದ್ಘಾಟನೆ : ಸಂಘದ ಅಧ್ಯಕ್ಷ ಡಾ.ಪೋತರಾಜು, ಕಲಾವಿದೆ ಡಾ.ವಿ.ಜಮುನಾರಾಣಿ ಮಿರ್ಲೆ, ಪ್ರೊ. ಕೆ.ಆರ್.ಪ್ರೇಮಲೀಲಾ ಅವರಿಂದ ಉಪನ್ಯಾಸ, ಅಧ್ಯಕ್ಷತೆ : ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸ್ಥಳ: ಸಂಘದ ಮಹಿಳಾ ವಿದ್ಯಾರ್ಥಿ ನಿಲಯ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10.30ಕ್ಕೆ.



ಇಂದಿನ ಪಂಚಾಂಗ

29.3.2026 ಭಾನುವಾರ, ಮಳೆ ನಕ್ಷತ್ರ: ಉತ್ತರಭಾದ್ರ 18.03.2026 ರಿಂದ 30.03.2026 ಪರಾಭವ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ, ತಿಥಿ: ಏಕಾದಶಿ, ನಕ್ಷತ್ರ: ಆಶ್ಲೇಷ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ಮೈಸೂರು ವಿಶ್ವವಿದ್ಯಾನಿಲಯ, ಎನ್‌ಎಸ್‌ಎಸ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ:** ರಾಷ್ಟ್ರೀಯ ಏಕೀಕರಣ ಶಿಬಿರದ ಸಮಾರೋಪ ಸಮಾರಂಭ, ಅಧ್ಯಕ್ಷತೆ : ಮೈಸೂರು ವಿವಿ ಕುಲಸಚಿವೆ ಶ್ರೀಮತಿ ಎಂ.ಕೆ. ಸವಿತಾ, ಸಮಾರೋಪ ಭಾಷಣ: ಮಹಾತ್ಮ ಗಾಂಧಿ ರೂರಲ್ ಡೆವಲಪ್‌ಮೆಂಟ್ ಅಂಡ್ ಪಂಚಾಯತ್ ರಾಜ್ ಯೂನಿವರ್ಸಿಟಿ, ಗದಗ ಕುಲಪತಿ ಪ್ರೊ.ಸುರೇಶ್ ವಿ.ನಾಡಗೌಡರ್, ಸ್ಥಳ: ಎನ್‌ಎಸ್‌ಎಸ್ ಭವನ, ಸಾಹುಕಾರ್ ಚೆನ್ನಯ್ಯ ರಸ್ತೆ, ಸರಸ್ವತಿಪುರಂ, ಬೆಳಗ್ಗೆ 11ಕ್ಕೆ.

■ **ಕರುನಾಡ ಕಲಾ ಸಾಮ್ರಾಜ್ಯ ಟ್ರಸ್ಟ್:** ಪವರ್‌ಸ್ಟಾರ್ ಡಾ.ಪುನೀತ್ ರಾಜ್ ಕುಮಾರ್ ಪ್ರಶಸ್ತಿ ಸಮಾರಂಭ ಹಾಗೂ ಬಣ್ಣದ ಗುಡಿಯಲ್ಲಿ ಬೆಳಕಿನ ರಸಸಂಜೆ, ಮುಖ್ಯ ಅತಿಥಿಗಳು: ಮಾಜಿ ಶಾಸಕ ಎಂ.ಕೆ.ಸೋಮ ಶೇಖರ್, ಮಾಜಿ ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ಮಾಜಿ ಗ್ರಾಪಂ ಅಧ್ಯಕ್ಷೆ ಲಕ್ಷ್ಮಣಪ್ರಭು, ಕೃಷ್ಣರಾಜ ಸಹಕಾರ ಬ್ಯಾಂಕ್‌ನ ಅಧ್ಯಕ್ಷ ಬಸಪ್ಪ, ಶ್ರೀಮತಿ ಪ್ರೇಮಾಶಂಕರೇಗೌಡ, ವಕೀಲರಾದ ಇಂದ್ರಶೇಖರ್, ಜಯಶಂಕರ್, ಸ್ಥಳ: ಮಹಾರಾಜ ಕಾಲೇಜು ಶತಮಾನೋತ್ಸವ ಭವನ, ಮಧ್ಯಾಹ್ನ 2 ರಿಂದ.

■ **ವಿದ್ಯಾವರ್ಧಕ ಕಾನೂನು ಕಾಲೇಜು:** ರಾಷ್ಟ್ರ ಮಟ್ಟದ ಮೂಟ್ ಕೋರ್ಟ್ ಸ್ಪರ್ಧೆ ಸಮಾರೋಪ ಸಮಾರಂಭ, ಸಮಾರೋಪ ಭಾಷಣ: ಹೈಕೋರ್ಟ್ ನ್ಯಾಯಾಧೀಶ ಇ.ಎಸ್. ಇಂದಿರೇಶ್, ಅಧ್ಯಕ್ಷತೆ: ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಮುಖ್ಯ ಅತಿಥಿಗಳು : ಪ್ರೊ.ಸತೀಶ್‌ಗೌಡ, ಸ್ಥಳ: ಪ್ರೊ. ಪಿ.ಎಂ.ಚಿಕ್ಕಬೋರಯ್ಯ ಸಭಾಂಗಣ, ಮಧ್ಯಾಹ್ನ 3ಕ್ಕೆ.

■ **ಅಖಿಲ ಭಾರತೀಯ ಸಾಹಿತ್ಯ ಪರಿಷದ್, ಮೈಸೂರು ಜಿಲ್ಲಾ ಸಮಿತಿ :** ಯುಗಾದಿ ಸಂಭ್ರಮ–2026, ಸಂಸ್ಕೃತ ವಿದ್ವಾನ್ ಡಾ. ಹೆಚ್.ವಿ. ನಾಗರಾಜ ರಾವ್ ಅವರಿಂದ ಸಂಸ್ಕೃತದಲ್ಲಿ ಮುಕ್ತಕಗಳು ಮತ್ತು ಯುಗಾದಿ ಕುರಿತು ವಿಶೇಷ ಉಪನ್ಯಾಸ, ನಂಜನಗೂಡು ಸತ್ಯನಾರಾಯಣ ವಿರಚಿತ ಮೂರು ಪುಸ್ತಕಗಳ ಲೋಕಾರ್ಪಣೆ, ಅಧ್ಯಕ್ಷತೆ : ಸಮಿತಿ ಅಧ್ಯಕ್ಷ ಎಸ್. ಸುಬ್ರಮಣ್ಯ, ಸ್ಥಳ: ವಿಜಯ ವಿಠ್ಠಲ ಪದವಿಪೂರ್ವ ಕಾಲೇಜು ಸಭಾಂಗಣ, ಸಂಜೆ 4.30ಕ್ಕೆ.

■ **ಜೆಎಸ್‌ಎಸ್ ಆಸ್ಪತ್ರೆ :** ಕ್ಯಾತ್‌ಲ್ಯಾಬ್, ಅತ್ಯಾಧುನಿಕ ಎಐ ಆಧಾರಿತ ಸಿಟಿ ಸ್ಕ್ಯಾನರ್, ನರಶಸ್ತ್ರ ಚಿಕಿತ್ಸಾ ಸೂಕ್ಷ್ಮದರ್ಶಕ ಯಂತ್ರ, ತಾಯಿ ಎದೆ ಹಾಲಿನ ಬ್ಯಾಂಕ್‌ಗಳ ಉದ್ಘಾಟನೆ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ, ಸಚಿವ ಡಾ.ಶರಣ ಪ್ರಕಾಶ ಆರ್. ಪಾಟೀಲ, ಶಾಸಕ ಪಿ.ಎಂ. ನರೇಂದ್ರಸ್ವಾಮಿ, ಶಾಸಕ ಟಿ.ಎಸ್. ಶ್ರೀವತ್ಸ, ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮೀ ಚೌಧರಿ, ಸ್ಥಳ: ಶ್ರೀ ರಾಜೇಂದ್ರ ಶತಮಾನೋತ್ಸವ ಭವನ, ಸಂಜೆ 5ಕ್ಕೆ.

■ **ಶ್ರೀ ರಾಜೇಶ್ವರಿ ವಸ್ತ್ರಾಲಂಕಾರ ರಂಗ ತಂಡ :** ನಾಡೋಜ ಬೆಳಗಲ್ಲು ವೀರಣ್ಣನವರ 98ನೇ ಹಾಗೂ ಬಿ. ಪುಟ್ಟಸ್ವಾಮಯ್ಯನವರ 130ನೇ ಸವಿನೆನಪಿನ ಪೌರಾಣಿಕ ರಂಗ ಸಂಭ್ರಮ–2026, ಸಂಜೆ 5.30 ರಿಂದ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ವಿದ್ವಾನ್ ವೈ.ಎಂ. ಪುಟ್ಟಣ್ಣಯ್ಯ ಮತ್ತು ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ವಿದ್ವಾನ್ ಕಿರಗಸೂರು ರಾಜಪ್ಪನವರಿಂದ ರಂಗ ಗೀತೆಗಳು, ಉದ್ಘಾಟನೆ: ಹಿರಿಯ ರಂಗಕರ್ಮಿ ಕಲ್ಪನಾ ನಾಗನಾಥ್, ಉಪಸ್ಥಿತರು: ಕನ್ನಡ–ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಹಿರಿಯ ರಂಗ ನಿರ್ದೇಶಕ ಪ್ರೊ.ಹೆಚ್.ಎಸ್.ಉಮೇಶ್, ರಂಗಕರ್ಮಿ ಸಂಗಾಪುರ ನಾಗರಾಜ್, ರಂಗ ಗೌರವ: ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಉಡಿಗಾಲ ಮಹದೇವಪ್ಪ, ರಂಗ ಗೀತಾಂಜಲಿ ತಂಡ: ವಿದ್ವಾನ್ ಪುಟ್ಟಣ್ಣಯ್ಯ–ಹಾರ್ಮೋನಿಯಂ, ಕೃಷ್ಣ ಚೈತನ್ಯ–ತಬಲ, ಡಿ. ರಾಮು–ಕ್ಲಾರಿಯೋನೆಟ್, ಸಂಜೆ 6.45ಕ್ಕೆ ನಾಟಕ ಗದಾಯುದ್ಧ, ರಚನೆ : ಬಿ. ಪುಟ್ಟಸ್ವಾಮಯ್ಯ, ನಿರ್ದೇಶನ : ಕಾರಸವಾಡಿ ಸುರೇಶ್, ಸ್ಥಳ: ಕಿರುರಂಗ ಮಂದಿರ, ಕಲಾಮಂದಿರ ಆವರಣ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಡಾ.ಎಸ್.ಎಂ.ಹಿರೇಮಠ್, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನಿಮಾಯಾನ–ಜನಮೆಚ್ಚಿದ ಕನ್ನಡ ಚಿತ್ರಗಳ ನೆನಪಿನ ಮಾಲೆ, ಪ್ರಸ್ತುತಿ: ಶ್ರೀನಿವಾಸ್‌ಪ್ರಸಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಕೆ.ಶ್ರೇಯಾ ಹಾಗೂ ನಾಗಲಕ್ಷ್ಮಿ, ವ್ಯಾಖ್ಯಾನ–ಡಾ.ಬಿ.ವಿ. ವಸಂತಕುಮಾರ್, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ–ಕೃಪಾಕರ ಸೇನಾನಿ ಅವರ ಕೆನ್ನಾಯಿಯ ಜಾಡಿನಲಿ ಕೃತಿಯ ಬಾನುಲಿ ಓದು, ಪ್ರಸ್ತುತಿ: ಜಿ ಶಾಂತಕುಮಾರ್, 8.30 ಚಿತ್ರಗೀತೆಗಳು, 9.40 ನಮ್ಮ ಆರೋಗ್ಯ–ಹೈರಿಸ್ಕ್ ಪ್ರೆಗ್ನೆನ್ಸಿ ಅಂದರೆ ಸಂಕೀರ್ಣ ಪ್ರಸವ ಕಾರಣಗಳು ಮತ್ತು ಪರಿಹಾರ ಈ ಕುರಿತು ತಿಳಿಸಿ ಕೊಡುತ್ತಾರೆ ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆ ಹಾಗೂ ನಿರಾಮಯ ಮೆಡಿಕಲ್ ಕೇರ್‌ನ ಪ್ರಸೂತಿ ಮತ್ತು ಸ್ತ್ರೀ ರೋಗ ತಜ್ಞೆ ಡಾ.ಹೇಮ ಪ್ರಿಯಲಾಲ್ ಚಂದ್, ಪ್ರಸ್ತುತಿ–ತೇಜಸ್ವಿನಿ ಗಿರೀಶ್, 10.00 ಕೇಳಿಗಿಳಿಗಳೇ –ಕಥೆ ಹೇಳ್ತಿಯೋ ಹಾಡು ಹೇಳ್ತಿಯೋ ನೇರ ಫೋನ್ ಇನ್ ಕಾರ್ಯಕ್ರಮ, 10.30 ಮಕ್ಕಳ ಮಂಟಪ–ವಿಶ್ರುತ್.ಎ, ಧನ್ಯಾ, ಲಹರಿ.ಎಚ್.ಎಂ, ಮಾನಸಿ .ಯು.ಎಸ್.ಆಚಾರ್ ಹಾಡಿರುವ ವೈವಿಧ್ಯಮಯ ಗೀತೆಗಳು ಹಾಗೂ ಮಾಳವಿ ಮಂಜುನಾಥ್ ಅವರಿಂದ ವಯೋಲಿನ್ ವಾದನ, 11.00 ಮನ್ ಕಿ ಬಾತ್–ಭಾರತದ ಪ್ರಧಾನಿ ನರೇಂದ್ರಮೋದಿಯವರು ರಾಷ್ಟ್ರದ ಜನತೆಯೊಡನೆ ಹಂಚಿಕೊಳ್ಳುವ ಮನದ ಮಾತು **ಮಧ್ಯಾಹ್ನ:** 12.05 ವನಿತಾ ವಿಹಾರ–ಕನಸಿನ ಮನೆಗೆ ವಿನ್ಯಾಸ ಕೊಡುವ ಕೈಗಳು–ಇಂಟೀರಿಯರ್ ಡಿಸೈನರ್ ಅನುಪಮ ದೇವಸ್ಯ ಅವರೊಂದಿಗೆ ಸಂದರ್ಶನ. ಇವರೊಂದಿಗೆ: ಆಶಾ, 12.35 ಭಕ್ತಿಗೀತೆಗಳು, 12.45 ಜನಪದ ಸಂಗೀತ: ಯಳಂದೂರು ತಾಲೂಕು ಹೊನ್ನೂರು ಗ್ರಾಮದ ಜವರಯ್ಯ ಮತ್ತು ಸಂಗಡಿಗರಿಂದ ತತ್ವಪದಗಳು, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ ಪ್ರಧಾನ ಮಂತ್ರಿ ಆತ್ಮನಿರ್ಭರ್ ಎಣ್ಣೆ ಕಾಳು ಅಭಿಯಾನ ಕುರಿತು ಮಾಹಿತಿ ನೀಡುತ್ತಾರೆ ಪತ್ರಕರ್ತೆ ದಿವ್ಯ ಹೆಗಡೆ ಕಬ್ಬಿನ ಗದ್ದೆ, 1.20 ಭಾವಗೀತೆಗಳು– ಎ.ಎನ್. ಶೀಲಾ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ನಕ್ಷತ್ರಲೋಕ–ಸಿನಿ ಸೆಲೆಬ್ರಿಟಿಗಳೊಂದಿಗೆ ಮಾತುಕತೆ. ಕನ್ನಡದ ಹಿರಿಯನಟ ಅಭಿಜಿತ್ ಅವರೊಂದಿಗಿನ ಸಂದರ್ಶನದ ಮರುಪ್ರಸಾರ, ಪ್ರಸ್ತುತಿ– ಶ್ರೀಮಾನ್.ಎಸ್, 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, ಪಂಡಿತ್ ಹರಿಪ್ರಸಾದ್ ಚೌರಾಸಿಯಾ–ಬಾನ್ಸುರಿ ವಾದನ, 4.45 ಚಿತ್ರಗೀತೆಗಳು, 6.51 ಕೃಷಿರಂಗ : ಹಟ್ಟಿಹರಟೆ–ವಾರದ ಗ್ರಾಮೀಣಾ ಚರ್ಚೆ, ಪ್ರಸ್ತುತಿ: ಎನ್.ಕೇಶವಮೂರ್ತಿ, ಆರ್. ಲೋಕೇಶ್ವರಿ, ಡಾ.ಮೈಸೂರು ಉಮೇಶ್, ಕೃಷಿಲೋಕ, ಕೃಷಿ ದರ್ಪಣ–ವಾರದ ಕೃಷಿರಂಗ, ಕಿಸಾನ್ ವಾಣಿ ಕಾರ್ಯಕ್ರಮಗಳ ಮುನ್ನೋಟ, ಪ್ರಸ್ತುತಿ: ಆರ್. ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ –ಬೆಂಗಳೂರು ನಿರ್ಮಾತೃ ಕೆಂಪೇಗೌಡರ ಮಾದರಿ ಕುರಿತು ಮಾತನಾಡುತ್ತಾರೆ ಪ್ರಗತಿಪರ ಚಿಂತಕರು ಹಾಗೂ ಲೇಖಕರಾದ ಡಾ. ಸಿ.ಶಿವಲಿಂಗಪ್ಪ ಮೀರಾಸಾಬಿಹಳ್ಳಿ, 8.00 ಭಾರತದ ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿಯವರು ರಾಷ್ಟ್ರದ ಜನತೆಯೊಡನೆ ಹಂಚಿಕೊಳ್ಳುವ ಮನದ ಮಾತಿನ ಕನ್ನಡ ಅನುವಾದದ ಮರುಪ್ರಸಾರ, 8.30 ಹಿಂದಿ ಚಿತ್ರಗೀತೆಗಳು, 9.15 ಪಾರ್ಲಿಮೆಂಟ್ ರಿವ್ಯೂ, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ – ಸುಮಿತ್ ಆನಂದ್–ಧ್ರುಪದ್–ಧಮಾರ್ ಗಾಯನ

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಸರ್ವಜಯಾನಂದ ಅವರಿಂದ ಶ್ರೀ ಶ್ರೀ ರಾಮಕೃಷ್ಣ ಚರಿತೆ ಕುರಿತು ಉಪನ್ಯಾಸ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ರಂಗಾಯಣ:** ಭಾರತೀಯ ರಂಗ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳಿಂದ ಹಂದಿ–ಮಂದಿ ನಾಟಕ ಪ್ರದರ್ಶನ, ನಿರ್ದೇಶನ : ಶಕೀಲ್ ಅಹ್ಮದ್, ಸ್ಥಳ: ಭೂಮಿಗೀತ, ರಂಗಾಯಣ, ಸಂಜೆ 6.30ಕ್ಕೆ.

■ **ಪರಿವರ್ತನ ರಂಗ ಸಮಾಜ :** ಡಾ. ಯು.ಆರ್. ಅನಂತಮೂರ್ತಿ ಅವರ ಕಥೆ ಆಧಾರಿತ ಕನ್ನಡ ನಾಟಕ ಸೂರ್ಯನ ಕುದುರೆ ಪ್ರದರ್ಶನ, ನಿರ್ದೇಶನ : ರವಿ ಕುಮಾರ್ (ಕಲಾಬ್ರಹ್ಮ), ಸ್ಥಳ: ನಟನ ರಂಗಶಾಲೆ, ರಾಮಕೃಷ್ಣನಗರ, ಸಂಜೆ 6.30ಕ್ಕೆ.

ಶ್ರೀರಾಮ ನವಮಿ ಕಾರ್ಯಕ್ರಮಗಳು



■ **ಶ್ರೀ ರಾಮಮಂದಿರ:** 60ನೇ ವರ್ಷದ ರಾಮೋತ್ಸವ ಕಾರ್ಯಕ್ರಮ, ಬೆಳಗ್ಗೆ 9ಕ್ಕೆ ಶ್ರೀ ಧನ್ವಂತರಿ ಹೋಮ, ಶ್ರೀ ಸತ್ಯನಾರಾಯಣ ಹೋಮ, ಶ್ರೀ ಸುದರ್ಶನ ನಾರಸಿಂಹ ಹೋಮ, ಸಂಜೆ 6.30 ರಿಂದ ವಿದ್ವಾನ್ ಡಾ. ರಾ.ಸ. ನಂದಕುಮಾರ್ ಅವರ ಬ್ರಹ್ಮಾವಿದ್ಯಾ ಸಂಸ್ಥೆ ಕಲಾವಿದರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ಸ್ಥಳ: ಶ್ರೀರಾಮಮಂದಿರ, 16ನೇ ಕ್ರಾಸ್, ಜಯನಗರ.

■ **ಶ್ರೀ ರಾಮ ಸೇವಾ ಮಂಡಲಿ :** 73ನೇ ವರ್ಷದ ಶ್ರೀ ರಾಮೋತ್ಸವ, ಬೆಳಗ್ಗೆ 9 ರಿಂದ ವಿದ್ಯಾರಣ್ಯಪುರಂನ ಶ್ರೀನಿಧಿ ಭಜನಾ ಮಂಡಳಿಯವರಿಂದ ಭಜನೆ, ಬೆಳಗ್ಗೆ 10 ರಿಂದ ಶಿವರಾಂಪೇಟೆ ವಿಜಯ ವಿಠ್ಠಲ ಭಜನಾ ಮಂಡಳಿಯಿಂದ ಭಜನೆ, ಸಂಜೆ 5.30ಕ್ಕೆ ಹರಿಸ್ಮರಣಾ ಭಜನಾ ಮಂಡಳಿಯಿಂದ ಭಜನೆ, ಸಂಜೆ 6.30ಕ್ಕೆ ವಿದುಷಿ ಶ್ರೀಮತಿ ಕೆ.ಪಿ.ರೇವತಿ ಮತ್ತು ವೃಂದದವರಿಂದ ದೇವರನಾಮ ಮತ್ತು ಭಾವಗೀತೆ, ಸ್ಥಳ: ಶ್ರೀ ರಾಮಸೇವಾ ಮಂಡಳಿ, ಶ್ರೀ ಅವನಿಶಂಕರ ಮಠ, 4ನೇ ಮುಖ್ಯ ರಸ್ತೆ, ವಿದ್ಯಾರಣ್ಯಪುರಂ.

■ **ಶ್ರೀ ರಾಮಸೇವಾ ಮಂಡಳಿ ಚಾರಿಟೆಬಲ್ ಟ್ರಸ್ಟ್ ಮೈಸೂರು ಉತ್ತರ :** 32ನೇ ಶ್ರೀರಾಮನವಮಿ ಸಂಗೀತೋತ್ಸವ–2026, ಬೆಳಗ್ಗೆ 10 ರಿಂದ ಶ್ರೀ ರಾಮ ಪಟ್ಟಾಭಿಷೇಕ, ಸಂಜೆ 5.15 ರಿಂದ ಶಾರದಾ–ಜಿ. ಪ್ರಣವಿ–ಸ್ಕಂದ ಭಾರದ್ವಾಜ್ ಅವರಿಂದ ಗಾಯನ, ಸಂಜೆ 6.15ಕ್ಕೆ ವಿದುಷಿಎಂ.ಎಸ್. ಶೀಲಾ ಅವರಿಗೆ ಸಂಗೀತ ಕಲಾರಾಧಕಿ ಪ್ರಶಸ್ತಿ ಪ್ರದಾನ, ವಿದುಷಿ ಎಂ.ಎಸ್. ಶೀಲಾ–ಗಾಯನ, ವಿದುಷಿ ಹೆಚ್.ಎಂ. ಸ್ಮಿತಾ–ಪಿಟೀಲು, ವಿದ್ವಾನ್ ತುಮಕೂರು ಬಿ. ರವಿಶಂಕರ್–ಮೃದಂಗ, ವಿದ್ವಾನ್ ಆರ್. ಶ್ರೀನಿಧಿ ಕೌಂಡಿನ್ಯ–ಘಟಂ, ಸ್ಥಳ: ಶ್ರೀ ಪ್ರಸನ್ನ ಪಾರ್ವತಿ ಕಲ್ಯಾಣ ಮಂಟಪ, ವಿವಿ ಮೊಹಲ್ಲಾ ಮೈಸೂರು.

■ **ಶ್ರೀ ರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್ :** ಶ್ರೀ ರಾಮನವಮಿ ಸಂಗೀತೋತ್ಸವ–2026, ವಿದ್ವಾನ್ ಅನೂರ್ ಅನಂತ ಕೃಷ್ಣ ಶರ್ಮ ಮತ್ತು ವೃಂದದವರಿಂದ ಲಯಲಾವಣ್ಯ, ತಾಳವಾದ್ಯ ಕಛೇರಿ, ಸ್ಥಳ: ಶ್ರೀಮತಿ ಆಲಮ್ಮನವರ ಛತ್ರ, ಕುಂಚಿಟಿಗರ ಸಂಘ, ಶಿವರಾಮಪೇಟೆ, ಸಂಜೆ 6ಕ್ಕೆ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 29 ಭಾನುವಾರ 2026

46

ಸಂಪುಟ: 46 | ಸಂಚಿಕೆ: 337 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4





ನಕ್ಕರೆ ಅದೇ ಸ್ವರ್ಗ

ಹುಡುಗಿ : ಏನ್ ಮಾಡುತ್ತಿದ್ದೀಯಾ?
ಹುಡುಗ : ಸೊಳ್ಳೆ ಹೊಡೆಯುತ್ತಿದ್ದೇನೆ.
ಹುಡುಗಿ : ಇದುವರೆಗೂ ಎಷ್ಟು ಸೊಳ್ಳೆ ಹೊಡೆದೆ?
ಹುಡುಗ : ಐದು... ಮೂರು ಹೆಣ್ಣು, ಎರಡು ಗಂಡು.
ಹುಡುಗಿ : ಹೆಣ್ಣು, ಗಂಡು ಹೇಗೆ ಗೊತ್ತಾಯಿತು.
ಹುಡುಗಿ : ಮೂರು ಸೊಳ್ಳೆಗಳು ಕನ್ನಡಿಯ ಮೇಲೂ, ಎರಡು ಸೊಳ್ಳೆಗಳು ಬಿಯರ್ ಬಾಟಲ್‌ಗಳ ಮೇಲಿದ್ದವು.

ಮೈಸೂರು ಮಿತ್ರ

ಭಾನುವಾರ, ಮಾರ್ಚ್ 29, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಎಲ್ಲಾ ಯುದ್ಧಗಳಲ್ಲಿಯೂ ಗೆಲ್ಲುವ ಸೈನಿಕರೆಂದರೆ ಸಮಯ ಮತ್ತು ಸಹನೆ – ಶ್ರೀ ಕೃಷ್ಣ ಸಂದೇಶ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬುಟ್ಟಿಯಷ್ಟು ಬುದ್ಧಿಗಿಂತ ಮುಷ್ಟಿಯಷ್ಟು ತಾಳ್ಮೆ ಲೇಸು

ನಿಮ್ಮ ಪತ್ರಗಳು

ದ್ವಿತೀಯ ಪಿಯುಸಿ ಮೌಲ್ಯಮಾಪನಕ್ಕೆ ಗೈರು ಹಾಜರಿ : ಶಿಕ್ಷೆ ಇಲ್ಲವೇ?

ಮಾನ್ಯರೆ,

ಪದವಿಪೂರ್ವ ಶಿಕ್ಷಣ ಇಲಾಖೆಯು ನಡೆಸುವ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯ ಮೌಲ್ಯಮಾಪನ ಕಾರ್ಯವು ಕಳೆದ ಮಾರ್ಚ್ 20ನೇ ತಾರೀಖಿನಿಂದ ನಡೆಯುತ್ತಿರುವುದು ಎಲ್ಲರಿಗೂ ಗೊತ್ತಿರುವ ವಿಷಯವೇ ಸರಿ. ಈಗಾಗಲೇ ಅಧ್ಯಾಪಕರು ಮೌಲ್ಯಮಾಪನ ಕಾರ್ಯದಲ್ಲಿ ಭಾಗವಹಿಸಿ ಮೌಲ್ಯಮಾಪನ ಕಾರ್ಯವನ್ನು ಯಶಸ್ವಿಗೊಳಿಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ವಿಜ್ಞಾನ ಹಾಗೂ ವಾಣಿಜ್ಯಶಾಸ್ತ್ರ ಮತ್ತು ಕಲಾ ವಿಭಾಗದಲ್ಲಿ ಬೋಧನೆ ಮಾಡುವ ಉಪನ್ಯಾಸಕರುಗಳು ಪ್ರತಿವರ್ಷವೂ ಮೌಲ್ಯಮಾಪನ ಕಾರ್ಯಕ್ಕೆ ಒಂದಲ್ಲ ಒಂದು ಕಾರಣ ನೀಡಿ ತಪ್ಪಿಸಿಕೊಳ್ಳುತ್ತಿದ್ದಾರೆ. ವಿಜ್ಞಾನ ವಿಷಯದ ಮೌಲ್ಯಮಾಪನ ಬೆಂಗಳೂರಿನಲ್ಲಿ ನಡೆಯುತ್ತಿರುವುದರಿಂದ ಹೆಚ್ಚು ಜನ ಅಂದರೆ ಮೌಲ್ಯಮಾಪನ ಆದೇಶ ಬಂದಿರುವ ಎಲ್ಲಾ ಉಪನ್ಯಾಸಕರು ಮೌಲ್ಯಮಾಪನ ಕಾರ್ಯಕ್ಕೆ ಭಾಗವಹಿಸಿದ್ದರೇ ಬೇಗ 8–10 ದಿನಗಳಲ್ಲಿ ಮುಗಿಯುತ್ತಿತ್ತು. ಆದರೆ ಶೇಕಡಾ 55 ರಷ್ಟು ಉಪನ್ಯಾಸಕರು ಮಾತ್ರ ಮೌಲ್ಯಮಾಪನ ಕಾರ್ಯಕ್ಕೆ ಹಾಜರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇವೆ. ಆದರೆ ಉಳಿದ 45% ರಷ್ಟು ಜನ ಮೌಲ್ಯಮಾಪನ ಕಾರ್ಯಕ್ಕೆ ಬಾರದೆ ಒಂದಲ್ಲ ಒಂದು ಕಾರಣ ನೀಡಿ ತಪ್ಪಿಸಿಕೊಳ್ಳುತ್ತಿದ್ದಾರೆ. ಇಂತಹ ಉಪನ್ಯಾಸಕರಿಗೆ ಶಿಕ್ಷೆ ಇಲ್ಲವೇ? ಗಂಡ, ಹೆಂಡತಿ, ಮಕ್ಕಳನ್ನು ಬಿಟ್ಟು ಬಂದು ನಾವು ಕರ್ತವ್ಯ ನಿರ್ವಹಿಸುತ್ತಿದ್ದರೇ ಉಳಿದ ಉಪನ್ಯಾಸಕರು (ಅನಾರೋಗ್ಯ ಹಾಗೂ ಅಂಗವಿಕಲತೆಯನ್ನು ಹೊರತುಪಡಿಸಿ) ಕುಂಟು ನೆಪ ಹೇಳಿ ತಪ್ಪಿಸಿಕೊಳ್ಳುತ್ತಿದ್ದಾರೆ. ಇದು ಎಷ್ಟರ ಮಟ್ಟಿಗೆ ಸರಿ? ಈಗಾಗಲೇ ಕರ್ನಾಟಕ ಶಿಕ್ಷಣ ಕಾಯ್ದೆ 1983ರ ಕಲಂ 28ರ ಅನ್ವಯ ಎಲ್ಲಾ ಉಪನ್ಯಾಸಕರು ಕಡ್ಡಾಯವಾಗಿ ಮೌಲ್ಯಮಾಪನ ಕಾರ್ಯದಲ್ಲಿ ಭಾಗವಹಿಸಬೇಕೆಂದು ಕೇಳಿಕೊಂಡಿದ್ದರೂ ಕೂಡ ಪ್ರತಿ ವರ್ಷವೂ ಮೌಲ್ಯಮಾಪನ ಕಾರ್ಯಕ್ಕೆ ತಪ್ಪಿಸಿಕೊಳ್ಳುತ್ತಿದ್ದಾರೆ. ಕರ್ನಾಟಕ ಶಿಕ್ಷಣ ಕಾಯ್ದೆ 1983 ರ ಕಲಂ 122 ರ ಅನ್ವಯ ಕ್ರಮಕೈಗೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಪ್ರತಿವರ್ಷವೂ ತಪ್ಪಿಸಿಕೊಳ್ಳುವ ಉಪನ್ಯಾಸಕರ ಸಂಖ್ಯೆ ಹೆಚ್ಚಾಗುತ್ತದೆ. ಆದ್ದರಿಂದ ಇಲಾಖೆಯು ಈಗಲೇ ಎಚ್ಚೆತ್ತುಕೊಂಡು ಕಡ್ಡಾಯವಾಗಿ ಮೌಲ್ಯಮಾಪನ ಕಾರ್ಯದಲ್ಲಿ ಭಾಗವಹಿಸಿ, ವಿದ್ಯಾರ್ಥಿಗಳಿಗೆ ಫಲಿತಾಂಶ ನೀಡುವಲ್ಲಿ ಸಹಕರಿಸಬೇಕೆಂದು ಮನವಿ ಮಾಡುತ್ತಿದ್ದೇವೆ.

–ನೇತ್ರಾವತಿ ಹಾಗೂ ಇತರರು, ಉಪನ್ಯಾಸಕ ವೃಂದ, ಮೈಸೂರು.

ಟ್ರಾಫಿಕ್ ಸಿಗ್ನಲ್ ನಿರ್ವಹಣೆ ಅಗತ್ಯ

ಮಾನ್ಯರೆ,

ಇತ್ತೀಚೆಗೆ ಮೈಸೂರು ನಗರದಲ್ಲಿ ಟ್ರಾಫಿಕ್ ಸಿಗ್ನಲ್ ಅಳವಡಿಕೆ ಹೆಚ್ಚಾಗಿದೆ. ಮೈಸೂರು ನಗರದಲ್ಲಿ ವಾಹನ ದಟ್ಟಣೆ ದಿನದಿಂದ ದಿನಕ್ಕೆ ಜಾಸ್ತಿ ಆಗಿದೆ. ಕೆಲವು ಕಡೆ ಟ್ರಾಫಿಕ್ ಸಿಗ್ನಲ್ಲಿನ ಅವಶ್ಯಕತೆ ಇದೆ ನಿಜ. ಆದರೆ ಕೆಲವೆಡೆ ವಾಹನ ಓಡಾಟ ಹೆಚ್ಚಿರದ ಕಡೆಯೂ ಟ್ರಾಫಿಕ್ ಸಿಗ್ನಲ್ ಅಳವಡಿಸಲಾಗಿದೆ. ಇದರಿಂದ ಉಪಯೋಗದ ಬದಲು ಉಪದ್ರವವೇ ಜಾಸ್ತಿ. ಸಿಗ್ನಲ್‌ನಲ್ಲಿ ನಿಲ್ಲುವ ವಾಹನಗಳಿಂದಲೇ ಟ್ರಾಫಿಕ್ ಜಾಸ್ತಿ ಆಗುತ್ತಿದೆ. ಸುಗಮವಾಗಿ ಆಗುವ ಸಂಚಾರಕ್ಕೇ ಸಂಚಕಾರ ಬಂದಂತಾಗಿದೆ. ಇನ್ನು ಕೆಲವು ಕಡೆ ಟ್ರಾಫಿಕ್ ಸಿಗ್ನಲ್ ಸರಿಯಾಗಿ ಕೆಲಸ ನಿರ್ವಹಿಸುವುದಿಲ್ಲ. ಉದಾಹರಣೆಗೆ ಜೆಪಿ ನಗರದ ಗೊಬ್ಬಳಿ ಮರದ ಸಮೀಪದ ವೃತ್ತ, ಕುಪ್ಪಲೂರು ರಿಂಗ್ ರಸ್ತೆ ಜಂಕ್ಷನ್, ಶನಿದೇವರ ದೇವಸ್ಥಾನದ ಸರ್ಕಲ್ ಮುಂತಾದ ಕೆಲವೆಡೆ ಅವಶ್ಯಕತೆ ಇದ್ದರೂ ಸಿಗ್ನಲ್ ಹಲವು ಬಾರಿ ಸರಿಯಾಗಿ ಕಾರ್ಯ ನಿರ್ವಹಿಸದೇ ಇರುವುದರಿಂದ ಸಾರ್ವಜನಿಕರಿಗೆ ಅದರಲ್ಲೂ ಶಾಲೆ–ಕಾಲೇಜಿಗೆ ಹೋಗುವ ಮಕ್ಕಳ, ವಯಸ್ಸಾದವರ ಓಡಾಟಕ್ಕೆ ಬಹಳ ತೊಂದರೆ ಆಗಿದೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಅಗತ್ಯ ಇರುವ ಕಡೆ ಮಾತ್ರ ಟ್ರಾಫಿಕ್ ಸಿಗ್ನಲ್ ಅಳವಡಿಸಲಿ ಹಾಗೂ ಕಾರ್ಯ ನಿರ್ವಹಿಸದೇ ಇರುವ ಸಿಗ್ನಲ್ ಬಗ್ಗೇನೂ ಸ್ವಲ್ಪ ಗಮನಹರಿಸಲಿ.

–ರಾಘವೇಂದ್ರ ಜೋಯಿಸ್, ಮೈಸೂರು

ವಯೋಮಿತಿ ಇಳಿಕೆ ಸ್ವಾಗತಾರ್ಹ

ಮಾನ್ಯರೇ,

ರಾಜ್ಯ ಸರ್ಕಾರ ಕೆಲ ತಿಂಗಳುಗಳ ಹಿಂದೆ ಒಂದನೇ ತರಗತಿ ಪ್ರವೇಶಕ್ಕೆ ಆರು ವರ್ಷಗಳ ವಯೋಮಿತಿ ನಿಗದಿ ಮಾಡಿದ ಬಗ್ಗೆ ಕೈಗೊಂಡ ನಿರ್ಧಾರ ರಾಜ್ಯಾದ್ಯಂತ ಪೋಷಕರ ಆಕ್ರೋಶಕ್ಕೆ ಕಾರಣವಾಗಿತ್ತು. ಇದೀಗ ಸರ್ಕಾರ ಒತ್ತಾಯಕ್ಕೆ ಮಣಿದು, ಈ ಹಿಂದೆ ತಾನು ಮಾಡಿದ ನಿರ್ಣಯದಂತೆ ಇದ್ದ ವಯೋಮಿತಿಯನ್ನು ಆರು ವರ್ಷ ಅರವತ್ತು ದಿನಗಳು, ಅಂದರೆ ಈ ಹಿಂದಿನಂತೆಯೇ 5ವರ್ಷ ಮತ್ತು ಹತ್ತುತಿಂಗಳಿಗೆ ಶೈಕ್ಷಣಿಕ ವರ್ಷ 2026–27 ರಿಂದಲೇ ಅನ್ವಯವಾಗುವಂತೆ ಸಡಿಲಿಸಿರುವ ನಡೆ ಸ್ವಾಗತಾರ್ಹ. ಸಾಮಾನ್ಯವಾಗಿ ಪೋಷಕರು ಎಲ್‌ಕೆಜಿ ಗೆ ಸೇರಿಸುವಾಗಲೇ ವಯೋಮಿತಿ ಬಗ್ಗೆ ತಲೆ ಕೆಡಿಸಿಕೊಳ್ಳದೇ ನಂತರ ಒಂದನೇ ತರಗತಿಗೆ ಬಂದಾಗ ಪರಿತಪಿಸುವಂತಾಗುತ್ತಿದ್ದು, ಈ ನಿಟ್ಟಿನಲ್ಲಿಯೂ ಕೂಡ ಸರ್ಕಾರ ಒಂದು ತಿದ್ದುಪಡಿ ಮೂಲಕ ಎಲ್‌ಕೆಜಿ ಪ್ರವೇಶಾತಿಗೆ ಮೂರು ವರ್ಷ ಹತ್ತು ತಿಂಗಳೆಂದು ಪರಿಗಣಿಸುವಂತೆ ಮಾಡುತ್ತಿರುವುದಾಗಿ ಶಿಕ್ಷಣ ಸಚಿವರು ಹೇಳಿದ್ದಾರೆ. ನಿಜಕ್ಕೂ ಈ ನಿರ್ಧಾರವೂ ಉತ್ತಮವೂ ಹೌದು. ಇದರಿಂದಾಗಿ ಎಲ್‌ಕೆಜಿಗೆ ಸೇರಿಸಬೇಕಾದರೆ, ಪೋಷಕರು ಅಲ್ಲೇ ಸೂಕ್ತ ನಿರ್ಧಾರ ಕೈಗೊಂಡು ಮುಂದೆ ಮುಜುಗರಕ್ಕೀಡಾಗುವ ಪರಿಸ್ಥಿತಿ ತಪ್ಪಿಸಬಹುದಾಗಿದೆ. ಹಲವಾರು ಕೆಟ್ಟ ನಿರ್ಧಾರಗಳ ಮುಂದೆ ಅಪರೂಪದ ಇಂತಹ ಉತ್ತಮ ನಿರ್ಧಾರಗಳು ಜನರಿಗೆ ಹಾಯ್ ಎನಿಸಿದರೂ, ಸರ್ಕಾರ ಪದೇ ಪದೆ ಜನರಿಗೆ ತೊಂದರೆಯಾಗುವಂತಹ ಇಂತಹ ತಿದ್ದುಪಡಿಗಳನ್ನು ಮಾಡದೇ ಇರುವುದು ಉತ್ತಮವಲ್ಲವೇ.

–ವಿಜಯ್ ಹೆಮ್ಮಿಗೆ, ಮೈಸೂರು

ರಿಂಗ್ ರಸ್ತೆಯಲ್ಲಿ ಫ್ಲೆಕ್ಸ್‌ಗಳ ತೆರವುಗೊಳಿಸಿ

ಮಾನ್ಯರೇ,

ಮೈಸೂರು ರಿಂಗ್ ರೋಡ್‌ನಲ್ಲಿರುವ ಪ್ರತಿ ಲೈಟ್ ಕಂಬಗಳಿಗೂ ಖಾಸಗಿ ಕಂಪನಿಗಳ ಹಾಗೂ ರಾಜಕೀಯ ನಾಯಕರುಗಳ ಫ್ಲೆಕ್ಸ್‌ಗಳು ಗಾಳಿಯ ಬಿರುಸಿಗೆ ರಸ್ತೆಯ ಮೇಲೆ ಬಿದ್ದು ವಾಹನ ಸವಾರರಿಗೆ ತೊಂದರೆಯಾಗುತ್ತಿದೆ. ಮರದ ಪಟ್ಟಿ ಇರುವ ಇಂತಹ ಫ್ಲೆಕ್ಸ್‌ಗಳಿಂದ ದ್ವಿಚಕ್ರ ವಾಹನ ಸವಾರರಿಗೆ ಅಪಘಾತದ ಅಪಾಯವುಂಟು. ಮೈಸೂರು ಮಹಾನಗರ ಪಾಲಿಕೆಯವರು ಇಂತಹ ಫ್ಲೆಕ್ಸ್‌ಗಳನ್ನು ಅಳವಡಿಸಲು ಅನುಮತಿ ನೀಡದೆ, ಈಗಾಗಲೇ ಅಳವಡಿಸಿರುವ ಫ್ಲೆಕ್ಸ್‌ಗಳನ್ನು ತೆರವುಗೊಳಿಸಿ ವಾಹನ ಸವಾರರ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕೆಂದು ಈ ಮೂಲಕ ಮನವಿ.

–ಮಂಜೇಶ್ ದೇವಗಳ್ಳಿ, ಮೈಸೂರು



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ನಾದಲಹರಿ

ಸವಾಲನ್ನ ಎದುರಿಸುವ ಛಲ...

ಮಾರ್ಚ್ ತಿಂಗಳು ಬಂದಿತೆಂದರೆ, ವಿದ್ಯಾರ್ಥಿಗಳ ಎದೆಯಲ್ಲಿ ಅವಲಕ್ಕಿ ಕುಟ್ಟಲು ಆರಂಭ. ಮಾರ್ಚ್ ಮತ್ತು ಏಪ್ರಿಲ್ ಪರೀಕ್ಷೆಗಳ ಸಮಯ. ವರ್ಷವಿಡೀ ಸಂತೋಷದಿಂದ ಉತ್ಸಾಹದಿಂದ ಲವಲವಿಕೆಯಿಂದ ಕಾಲ ಕಳೆವ ವಿದ್ಯಾರ್ಥಿಗಳಿಗೆ ಮಾರ್ಚ್–ಏಪ್ರಿಲ್ ಎಂದರೆ ನಡುಕ. ಇಡೀ ವರುಷ ಕೇಳಿದ ಪಾಠಗಳು, ಕಲಿತ ವಿಷಯಗಳು, ಮಾಡಿದ ಪ್ರಯೋಗಗಳು ಇವುಗಳ ಬಗ್ಗೆಯೇ ಪ್ರಶ್ನೆಗಳು ಇರುತ್ತವೆ ಎಂದು ಗೊತ್ತಿದ್ದರೂ ಪರೀಕ್ಷೆ ಎಂಬ ಗುಮ್ಮ ಕಾಡಲು ಆರಂಭಿಸುತ್ತದೆ. ಕೆಲವರಿಗೆ ಎಷ್ಟು ಓದಿದರೂ ನೆನಪಿನಲ್ಲಿ ಉಳಿಯುವುದೇ ಇಲ್ಲ ಎಂಬ ಸಮಸ್ಯೆ ಆದರೆ, ಮತ್ತೆ ಕೆಲವರಿಗೆ ಪರೀಕ್ಷೆಯಲ್ಲಿ ಪ್ರಶ್ನೆ ಪತ್ರಿಕೆ ನೋಡಿದೊಡನೆ ಓದಿದ್ದು, ಕಲಿತದ್ದು ಎಲ್ಲವೂ ತೊಳೆದುಹೋದಂತಾಗಿ ಅಲ್ಲಿ ಉಳಿಯುವುದು ಖಾಲಿ ತಲೆ ಎಂಬ ಅಳಲು.

ನಮ್ಮ ಶಿಕ್ಷಣ ವ್ಯವಸ್ಥೆಯೂ ಹೇಗಿದೆ ಎಂದರೆ, ಅಲ್ಲಿ ಮಕ್ಕಳು ಎಷ್ಟು ಕಲಿತಿದ್ದಾರೆ ಎಂಬುದನ್ನು ಪರೀಕ್ಷಿಸುವುದಕ್ಕಿಂತ ಅವರು ಎಷ್ಟರಮಟ್ಟಿಗೆ ಕಂಠಪಾಠ ಮಾಡಬಲ್ಲರು ಎಂಬುದರ ಪರೀಕ್ಷೆ ನಡೆಯುತ್ತದೇನೋ ಎಂದು ಅನಿಸದೆ ಇರದು. ಬಹಳ ಚೆನ್ನಾಗಿ ಪಾಠದಲ್ಲಿರುವ ವಿಷಯಗಳನ್ನು ಅರ್ಥ ಮಾಡಿಕೊಂಡು, ಯಾವುದೇ ಪ್ರಶ್ನೆಗಳಿಗೆ ಬಾಯಲ್ಲಿ ಉತ್ತರಿಸಬಲ್ಲ ಒಬ್ಬ ಜಾಣ ವಿದ್ಯಾರ್ಥಿಗೆ ಒಂದು ವೇಳೆ ಬರೆಯಲು, ಅಂದರೆ ಉತ್ತರ ಪತ್ರಿಕೆಯಲ್ಲಿ ಉತ್ತರಿಸಲು ಸಮಸ್ಯೆ ಆದಲ್ಲಿ, ಅಂತಹವರ ಬಗ್ಗೆ ಅದಕ್ಕೆ ಎಳ್ಳಷ್ಟೂ ಕನಿಕರವಿಲ್ಲ. ವಿಷಯವನ್ನು ಅವನು ಎಷ್ಟೇ ಚೆನ್ನಾಗಿ ಕಲಿತಿದ್ದರೂ ಪೇಪರಿನ ಮೇಲೆ ಅದನ್ನು ಕಕ್ಕಿದರೆ ಮಾತ್ರ ಅದಕ್ಕೆ ಬೆಲೆ. ಅದರಲ್ಲಿ ಅವನು ಸೋತರೆ, ಅವನು ನಪಾಸು. ಇಂತಹ ಶಿಕ್ಷಣ ವ್ಯವಸ್ಥೆಯಲ್ಲಿ ನಾವು ಇರುವಾಗ ವಿದ್ಯಾರ್ಥಿಗಳು ಪರೀಕ್ಷೆಯನ್ನು ಒಂದು ಗುಮ್ಮ ಎಂದು ಭಾವಿಸಿಕೊಂಡುಬಿಟ್ಟರೆ, ಸಮಸ್ಯೆ ಉಲ್ಬಣಿಸುವುದರಲ್ಲಿ ಸಂದೇಹವೇ ಇಲ್ಲ. ಇದಕ್ಕೆ ಪರಿಹಾರ ಏನು ಎಂಬುದರ ವಿಶ್ಲೇಷಣೆಯು ಕೆಲವರಿಗಾದರೂ ಸಹಾಯವನ್ನು ಮಾಡಿದರೆ, ಅದಕ್ಕಿಂತ ಹೆಚ್ಚಿನದೇನು ಬೇಕು.

ಮೊದಲನೆಯದಾಗಿ ನಿಮಗೆ ಇಟ್ಟಿರುವಂತಹ ಪಠ್ಯಕ್ರಮ ಅಥವಾ ಸಿಲಬಸ್‌ನಿಂದಲೇ ತಾನೆ ಪ್ರಶ್ನೆಪತ್ರಿಕೆ ತಯಾರಾಗುವುದು ಅದನ್ನು ಪದೇ–ಪದೆ ನಿಮ್ಮಲ್ಲಿಯೇ ಹೇಳಿಕೊಂಡು ಖಾತ್ರಿ ಮಾಡಿಕೊಳ್ಳಿ. ನಿಮಗೆ ಇಲ್ಲದೇ ಇರುವ ಬೇರಾವುದೋ ಸಿಲಬಸ್ ನಿಂದ ನಿಮಗೆ ಪ್ರಶ್ನೆಗಳು ಬರುವುದಿಲ್ಲ ಅಥವಾ ಕೊಡುವುದಿಲ್ಲ. ಹೀಗೆ ನಿಮಗೇ ಹೇಳಿಕೊಳ್ಳುವುದರಿಂದ ನಿಮ್ಮಲ್ಲಿ ಧೈರ್ಯ ಬರುತ್ತದೆ. ಇನ್ನು ತರಗತಿಯಲ್ಲಿ ಪಾಠಗಳನ್ನು ಲಕ್ಷ್ಯಗೊಟ್ಟು ಕೇಳಿದಲ್ಲಿ, ಅವು ಅರ್ಥ ಆಗದಿರಲು ಹೇಗೆ ಸಾಧ್ಯ ಒಂದು ವೇಳೆ, ನಿಮ್ಮ ಉಪಾಧ್ಯಾಯರೋ ಉಪನ್ಯಾಸಕರೋ ಪಾಠವನ್ನು ಚೆನ್ನಾಗಿ ಮಾಡಿರುವುದಿಲ್ಲ ಎಂದು ಇಟ್ಟುಕೊಳ್ಳೋಣ. ಅಂತಹ ಸಮಯದಲ್ಲಿ ಆ ಸಮಸ್ಯೆಯ ಪರಿಹಾರವನ್ನು ಮುಂದೂಡದೇ ಅಥವಾ ಶಿಕ್ಷಕರನ್ನು ಟೀಕಿಸುತ್ತಾ ಕೂರುವ ಬದಲು ಅದನ್ನು ಅರ್ಥ ಮಾಡಿಕೊಳ್ಳಬೇಕಾದ ಹಾದಿಯನ್ನು, ಇತರ ಉಪಾಯಗಳನ್ನು ಕುರಿತು ಚಿಂತಿಸಿ, ಕಾರ್ಯಗತ ಮಾಡಿಕೊಳ್ಳುವುದರ ಕಡೆಗೆ ಗಮನ ಕೊಡಿ.

ಮನಸ್ಸಿದ್ದಲ್ಲಿ ಮಾರ್ಗ ಇದ್ದೇ ಇರುತ್ತದೆ, ನೆನಪಿಡಿ. ಒಂದೊಂದು ಪಾಠದ ವಿಷಯ ಮುಗಿಯುತ್ತಿದ್ದಂತೆಯೇ ನಿಮ್ಮದೇ ಆದ ಚಿಕ್ಕ ನೋಟ್ಸ್ ಅಥವಾ ಟಿಪ್ಪಣಿಗಳನ್ನು ಮಾಡಿಕೊಳ್ಳುವುದು ಸೂಕ್ತ. ಇದು ವಿಷಯವನ್ನು ಮನನ ಮಾಡಿಕೊಳ್ಳಲೂ ಸಹಕಾರಿ. ಗೈಡ್ ಇದೆ ಎಂದು ತರಗತಿಗಳನ್ನು ನಿರ್ಲಕ್ಷ್ಯ ಮಾಡುವುದು ಖಂಡಿತಾ ಸೂಕ್ತವಲ್ಲ. ಮತ್ಯಾರೋ ಅಗಿದು ಉಗುಳಿದ್ದನ್ನು ತಿನ್ನುವುದಕ್ಕಿಂತ ನಮ್ಮ ಊಟವನ್ನು ನಾವೇ ಮಾಡುವುದು ಉತ್ತಮ. ಅಂದಂದಿನ ಪಾಠಗಳನ್ನು ಅಂದೇ ಓದಿಕೊಳ್ಳುವುದಂತೂ ಅತ್ಯಂತ ಸೂಕ್ತ ತಯಾರಿ. ವಿಷಯ ನಮಗೆ ಎಷ್ಟರಮಟ್ಟಿಗೆ ಅರ್ಥ ಆಗಿದೆ



> "ಮನಸ್ಸಿದ್ದಲ್ಲಿ ಮಾರ್ಗ ಇದ್ದೇ ಇರುತ್ತದೆ, ನೆನಪಿಡಿ. ಒಂದೊಂದು ಪಾಠದ ವಿಷಯ ಮುಗಿಯುತ್ತಿದ್ದಂತೆಯೇ ನಿಮ್ಮದೇ ಆದ ಚಿಕ್ಕ ನೋಟ್ಸ್ ಅಥವಾ ಟಿಪ್ಪಣಿಗಳನ್ನು ಮಾಡಿಕೊಳ್ಳುವುದು ಸೂಕ್ತ. ಇದು ವಿಷಯವನ್ನು ಮನನ ಮಾಡಿಕೊಳ್ಳಲೂ ಸಹಕಾರಿ. ಗೈಡ್ ಇದೆ ಎಂದು ತರಗತಿಗಳನ್ನು ನಿರ್ಲಕ್ಷ್ಯ ಮಾಡುವುದು ಖಂಡಿತಾ ಸೂಕ್ತವಲ್ಲ. ಮತ್ಯಾರೋ ಅಗಿದು ಉಗುಳಿದ್ದನ್ನು ತಿನ್ನುವುದಕ್ಕಿಂತ ನಮ್ಮ ಊಟವನ್ನು ನಾವೇ ಮಾಡುವುದು ಉತ್ತಮ. ಅಂದಂದಿನ ಪಾಠಗಳನ್ನು ಅಂದೇ ಓದಿಕೊಳ್ಳುವುದಂತೂ ಅತ್ಯಂತ ಸೂಕ್ತ ತಯಾರಿ. ವಿಷಯ ನಮಗೆ ಎಷ್ಟರಮಟ್ಟಿಗೆ ಅರ್ಥ ಆಗಿದೆ ಎಂಬುವುದನ್ನು ತಿಳಿಯಲೂ ಇದು ಸಹಕಾರಿ ಆಗುತ್ತದೆ.

ಎಂಬುವುದನ್ನು ತಿಳಿಯಲೂ ಇದು ಸಹಕಾರಿ ಆಗುತ್ತದೆ.

ಓದುವಾಗ ಏಕಾಗ್ರಚಿತ್ತದಿಂದ ಓದುವ ಅಭ್ಯಾಸ ಮಾಡಿಕೊಳ್ಳಿ. ಒಂದೊಂದು ವಿಷಯ ಮುಗಿದಾಗಲೂ ಕಣ್ಣುಮುಚ್ಚಿ, ಓದಿದುದನ್ನು ನಿಮ್ಮಲ್ಲಿಯೇ ಹೇಳಿಕೊಳ್ಳಿ. ಹತ್ತು ಸಲ ಓದುವುದೂ ಒಂದೆ, ಒಂದು ಸಲ ಬರೆಯುವುದೂ ಒಂದೆ. ಪರೀಕ್ಷೆಯ ಹಿಂದಿನ ತನಕ ನೀವು ಅರ್ಥ ಮಾಡಿಕೊಳ್ಳಬೇಕಾದ ವಿಷಯಗಳು ಇರಬಾರದು. ಪರೀಕ್ಷೆ ಹಿಂದಿನ ದಿನ ನೀವು ನೆಮ್ಮದಿಯಾಗಿ ನಿದ್ದೆ ಮಾಡಿ, ಮರುದಿನ ಶಾಂತಚಿತ್ತರಾಗಿ ಪರೀಕ್ಷೆಯನ್ನು ಎದುರಿಸುವಂತಿರಬೇಕು. ಪರೀಕ್ಷೆ ಎಂದಾಕ್ಷಣ ಅನಾವಶ್ಯಕ ಭಯ, ಗೊಂದಲ ಬೇಕಿಲ್ಲ. ಅದರಿಂದ ಓದಿರುವುದೂ ಮರೆತುಹೋಗುವ ಸಾಧ್ಯತೆ ಇರುತ್ತದೆ. ಶಾಂತರಾಗಿ ಪರೀಕ್ಷೆಯನ್ನು ಎದುರಿಸಿ. ನಿಮ್ಮಲ್ಲಿ ಆತ್ಮವಿಶ್ವಾಸ ಒಂದಿದ್ದರೆ, ಎಂತಹ ಪರೀಕ್ಷೆಗಳನ್ನೂ ಎದುರಿಸಲು ಸಾಧ್ಯ ಎಂಬುದನ್ನು ತಿಳಿಸಲು, ಈ ನಿಜ ಘಟನೆಯನ್ನು ನಿಮ್ಮ ಮುಂದಿಡಲು ಬಯಸುತ್ತೇನೆ. ಇದರಿಂದ ಖಂಡಿತಾ ನಿಮಗೆ ಸ್ಫೂರ್ತಿ ಬರಬಹುದೆಂಬ ವಿಶ್ವಾಸ ನನ್ನದು.

ಆ ಮನೆಯ ಎರಡನೆಯ ಮಗಳಾದ ಅವಳು ಚಿಕ್ಕವಳಿದ್ದಾಗಿನಿಂದಲೂ ಅತ್ಯಂತ ಲವಲವಿಕೆಯ ಹುಡುಗಿ. ಸದಾ ಉತ್ಸಾಹ ಅವಳ ಸಹಜ ಸ್ವಭಾವವೇ ಆಗಿತ್ತು. ಕಲಿಯುವುದರಲ್ಲಿ, ಸ್ನೇಹಿತರನ್ನು ಮಾಡಿಕೊಳ್ಳುವುದರಲ್ಲಿ, ಇತರರಿಗೆ ಕಷ್ಟ ಬಂದಾಗ ನೆರವಾಗುವುದರಲ್ಲಿ, ಪಠ್ಯೇತರ ಚಟುವಟಿಕೆಗಳಲ್ಲಿ, ಎಲ್ಲದರಲ್ಲೂ ಅವಳು ಸದಾ ಮುಂದು. ತರಗತಿಯಲ್ಲಂತೂ ಗುರುಗಳ ಅಚ್ಚುಮೆಚ್ಚು. ಓದಿನಲ್ಲಿ ಸದಾ ಆಸಕ್ತಿ ಇರುವ ವಿದ್ಯಾರ್ಥಿ ಎಂದರೆ ಯಾವ ಶಿಕ್ಷಕರಿಗೆ ತಾನೇ ಇಷ್ಟ ಆಗುವುದಿಲ್ಲ ಅವಳು ಕಾಲೇಜಿಗೆ ಬರುವಾಗ ಮೈಸೂರಿನಲ್ಲಿ ಬಿ.ಎ ಮತ್ತು ಬಿ.ಎಡ್. ಎರಡನ್ನೂ ಸೇರಿಸಿದ ನಾಕು ವರ್ಷಗಳ ಕೋರ್ಸ್ ಒಂದು ಇತ್ತು. ತಾನೂ ಉತ್ತಮ ಶಿಕ್ಷಕಿ ಆಗುವ ಬಯಕೆಯಿಂದ ಅದಕ್ಕೆ ಸೇರಿಕೊಂಡಳು ಹುಡುಗಿ.

ಅದೇಕೋ ಆಗಾಗ್ಗೆ ಸಣ್ಣದಾಗಿ ಬರುತ್ತಿದ್ದ ಹೊಟ್ಟೆನೋವು, ಅವಳು ಕೊನೆಯ ವರ್ಷಕ್ಕೆ ಬರುವಷ್ಟರಲ್ಲಿ ತೀವ್ರ ಸ್ವರೂಪ ಪಡೆದುಕೊಂಡಿತ್ತು. ಸದಾ ಚೈತನ್ಯದ ಚಿಲುಮೆಯಂತಿದ್ದ ಹುಡುಗಿ ಅದು ಬಂದಾಗ ನಿತ್ರಾಣಳಾಗಿ ಹೋಗುತ್ತಿದ್ದಳು. ವೈದ್ಯರಲ್ಲಿ ತಪಾಸಣೆ ಮಾಡಿಸಿದಾಗ ಅವಳ ಹೊಟ್ಟೆಯಲ್ಲಿ ಗಡ್ಡೆ ಇರುವುದು ಪತ್ತೆಯಾಯಿತು. ಆದರೆ ದುರಾದೃಷ್ಟಕ್ಕೆ ಅದು ಲಿವರ್ ಮತ್ತು ಪ್ಯಾಂಕ್ರಿಯಾಸ್ ನಡುವೆ ಇದ್ದುದರಿಂದ ಅದರ ಆಪರೇಷನ್ ವೈದ್ಯರಿಗೆ ಸವಾಲಾಯಿತು, ಸಮಸ್ಯೆ ಆಯಿತು. ಹಿಮಾಂಜಿಯೋಮ ಅಥವಾ ಲಿಂಪೋಂಜಿಯೊಮ ಎಂದು ಕರೆಸಿಕೊಳ್ಳುವ ಇದನ್ನು ಕೊನೆಗೆ ವೆಲ್ಲೂರಿನಲ್ಲಿ ವೈದ್ಯರು ತೆಗೆದರಾದರೂ ಇನ್ನು ಹೆಚ್ಚೆಂದರೆ ಅವಳು ಒಂದು ವರ್ಷ ಬದುಕಬಹುದು ಎಂದು ಹೇಳಿಬಿಟ್ಟರು. ಅದನ್ನು ಅವಳು ಹೇಗೆ ತೆಗೆದುಕೊಂಡಳು ಗೊತ್ತೇ ಒಂದು ಸವಾಲಾಗಿ. ಅದು ಒಂದು ದೊಡ್ಡ ವಿಷಯವೇ ಅಲ್ಲವೇನೋ ಎಂಬಂತೆ ಅವಳು ತನ್ನ ಓದಿನ ಕಡೆಗೆ ಲಕ್ಷ್ಯ ಕೊಟ್ಟಳು. ಅವಳನ್ನು ಪರೀಕ್ಷೆ ಮಾಡಲೆಂದೇ ಅದು ಮತ್ತೆ ಉಲ್ಬಣಿಸತೊಡಗಿತು. ಕುಳಿತು ಓದಲೂ ಆಗದಾದಾಗ ಅವಳ ಸಹಪಾಠಿಗಳು ಅವಳ ಮನೆಗೇ ಬಂದು ಪಾಠಗಳನ್ನು ಓದಿ ಹೇಳುವರು. ಅವಳು ಅದನ್ನು ಕೇಳಿಸಿಕೊಂಡು ಮನದಲ್ಲೇ ತಯಾರಾಗುವಳು.

ಮುಂದಿನದು ಅವಳ ಮತ್ತು ಆ ಹುಡುಗಿಯ ಆತ್ಮವಿಶ್ವಾಸದ ನಡುವಿನ ಹೋರಾಟ ಮಾತ್ರ. ಪರೀಕ್ಷೆ ಹತ್ತಿರ ಬಂದಂತೆ ನೋವೂ ತೀವ್ರವಾಗಿ, ಅವಳನ್ನು ಬೆಂಗಳೂರಿಗೆ ಕರೆದೊಯ್ಯಬೇಕಾಯಿತು. ಅಲ್ಲಿ ಅವಳದು ಒಂದೇ ವರಾತ. ನನಗೆ ಇಂದು ಪರೀಕ್ಷೆ ಇದೆ. ದಯವಿಟ್ಟು ನನ್ನನ್ನು ಮೈಸೂರಿಗೆ ಕಳುಹಿಸಿಕೊಡಿ ಎಂದು. ಹಲವು ವೈದ್ಯರು ತಮ್ಮ ಮಕ್ಕಳನ್ನು ಆಸ್ಪತ್ರೆಗೆ ಕರೆದುಕೊಂಡು ಬಂದು ಇಂತಹ ಮಾದರಿ ವಿದ್ಯಾರ್ಥಿಯನ್ನು ನೋಡಿ ಕಲಿಯಿರಿ ಎಂದರು. ಕೊನೆಗೆ ವೈದ್ಯರು ಅವಳನ್ನು ಪರೀಕ್ಷೆ ಬರೆದು ಬರಲು ಅನುಮತಿ ನೀಡಿದರು. ಕೂಡಲೇ ಮೈಸೂರಿನ ಕಾಲೇಜಿಗೆ ಫೋನಿನಲ್ಲಿ ಅವಳು ಬರುತ್ತಿರುವ ಸುದ್ದಿಯನ್ನು ತಿಳಿಸಲಾಯಿತು. ಅವಳಿಂದ ಕಾಲೇಜಿಗೆ ಒಂದು ರಾಂಕ್ ಬಂದೇ ಬರುತ್ತದೆ ಎಂದು ಗೊತ್ತಿದ್ದ ಕಾಲೇಜಿನ ಸಿಬ್ಬಂದಿಯು ಕೂಡಲೇ ಅವಳಿಗಾಗಿ ಒಂದು ರೂಮನ್ನು ತೆರವು ಮಾಡಿ, ಬರೆಯಲು ಟೇಬಲ್, ಕುರ್ಚಿ ಅಲ್ಲದೆ, ಅವಳಿಗೆ ಸುಸ್ತಾದರೆ ವಿಶ್ರಮಿಸಲು ಒಂದು ಮಂಚವನ್ನೂ ಕೂಡ ಹಾಕಿ ತಮ್ಮ ಮಾನವೀಯತೆಯನ್ನು ಮೆರೆದಿದ್ದರು. ತನ್ನ ನೋವನ್ನು ಕಡೆಗಣಿಸಿ ಪರೀಕ್ಷೆ ಬರೆದ ಅವಳು ಎರಡು ಅಂಕಗಳಲ್ಲಿ ರಾಂಕನ್ನು ತಪ್ಪಿಸಿಕೊಂಡಳು. ಇದೆಲ್ಲವನ್ನೂ ಮುಗಿಸಿಯೇ ಜವರಾಯನ ಕರೆಗೆ ಓಗೊಟ್ಟಳು.

ನಾಳೆ ನೋಡ ಬನ್ನಿ ನಂಜನಗೂಡು ಜಾತ್ರೆ...

ಸರ್ವರ ಭಾವೈಕ್ಯದ ಸಂಗಮ ಕಬಿನಿ ದಂಡೆಯ ಪುಣ್ಯಕ್ಷೇತ್ರ

ಸಾಂಸ್ಕೃತಿಕ ಮತ್ತು ಧಾರ್ಮಿಕ ಮಹತ್ವವನ್ನು ಎತ್ತಿ ಹಿಡಿಯುವ ನಂಜನಗೂಡಿನ ದೊಡ್ಡ ಜಾತ್ರೆ ನದಿ ದಾಟಿ ಊರಗಲಕ್ಕೂ ಪ್ರಸಿದ್ಧಿ ಪಡೆದಿದೆ. ಕೇವಲ ನಮ್ಮ ರಾಜ್ಯವಲ್ಲದೆ ಅಕ್ಕ ಪಕ್ಕದ ತಮಿಳುನಾಡು ಆಂಧ್ರಪ್ರದೇಶಗಳಿಂದಲೂ ನಂಜುಂಡೇಶ್ವರನ ಭಕ್ತರು ದೊಡ್ಡ ಜಾತ್ರೆ ದಿನ ನಂಜನಗೂಡಿನಲ್ಲಿ ಬಂದು ನೆಲೆಸುತ್ತಾರೆ.

'ಉಘೇ ನಂಜುಂಡ' ಎಂಬುದು ರಥವನ್ನು ಎಳೆಯುವಾಗ ಜನರ ಬಾಯಲ್ಲಿ ಬರುವ ಹರ್ಷೋದ್ಗಾರ ಆ ಸಮಯವನ್ನು ವರ್ಣಿಸಲು ಆಗದು ಅಷ್ಟೊಂದು ಆನಂದ..! ನಂಜನಗೂಡಿನ ಐತಿಹಾಸಿಕ 'ಗೌತಮ ಪಂಚ ಮಹಾರಥೋತ್ಸವ' (ದೊಡ್ಡ ಜಾತ್ರೆ) ಪ್ರತಿ ವರ್ಷ ಮಾರ್ಚ್ ಅಥವಾ ಏಪ್ರಿಲ್‌ನಲ್ಲಿ ನಡೆಯುವ ಪ್ರಸಿದ್ಧ ಶ್ರೀಕಂಠೇಶ್ವರ ಸ್ವಾಮಿ ದೇವಾಲಯದ ಆಕರ್ಷಣೆಯಾಗಿದೆ. ಗೌತಮ ಮಹರ್ಷಿ ಸ್ಥಾಪಿಸಿದರೆನ್ನಲಾದ 90 ಅಡಿ ಎತ್ತರದ ಗೌತಮ ರಥದೊಂದಿಗೆ ಗಣೇಶ, ಪಾರ್ವತಿ, ಸುಬ್ರಹ್ಮಣ್ಯ ಮತ್ತು ಚಂಡಿಕೇಶ್ವರರ ರಥಗಳೂ ಸೇರಿ ಒಟ್ಟು 5 ತೇರುಗಳನ್ನು ಎಳೆಯಲಾಗುತ್ತದೆ. (ಇಡೀ ದಕ್ಷಿಣ ಭಾರತದಲ್ಲಿ ಒಂದೇ ದಿನ ಐದು ತೇರುಗಳನ್ನು ಎಳೆಯುವ ಏಕೈಕ ಪುಣ್ಯಕ್ಷೇತ್ರವಿದು.

ಜಾತ್ರಾ ಮಹೋತ್ಸವ: ರಥೋತ್ಸವಕ್ಕೂ ಮುನ್ನ ಮತ್ತು ನಂತರ ಗರಳಪುರಿ ಉತ್ಸವ, ಮೃಗಯಾತ್ರೆ, ದೇವೀ ಪ್ರಣಯ ಕಲಹ, ಚೂರ್ಣೋತ್ಸವ ಮತ್ತು ಕಪಿಲಾ ನದಿಯಲ್ಲಿ ತೆಪ್ಪೋತ್ಸವ ನಡೆಯುತ್ತದೆ.

ಭಕ್ತರ ಪಾಲ್ಗೊಳ್ಳುವಿಕೆ: ರಾಜ್ಯದ ಮೂಲೆಮೂಲೆಗಳಿಂದ ಲಕ್ಷಾಂತರ ಭಕ್ತರು ಬಂದು ರಥ ಎಳೆಯುತ್ತಾರೆ ಮತ್ತು ನಂಜುಂಡೇಶ್ವರನ ತೇರಿಗೆ ಬಾಳೆಹಣ್ಣು ಮತ್ತು ಜವನ ಎಸೆಯುವುದು ಅದರಿಂದ ಒಳಿತಾಗುತ್ತದೆ ಎನ್ನುವುದು ಇಲ್ಲಿನ ಧಾರ್ಮಿಕ ನಂಬಿಕೆ.

ಈ ಪುಣ್ಯ ಕ್ಷೇತ್ರ ಕಪಿಲಾ ನದಿಯ ದಡದಲ್ಲಿ ಇದ್ದು, ಉತ್ತರದ ವಾರಣಾಶಿ ಕ್ಷೇತ್ರಕ್ಕೆ ಹೋಗಲು ಆಗದವರು ದಕ್ಷಿಣದ 'ದಕ್ಷಿಣ ಕಾಶಿ' ಗೆ ಹೋದರೆ ಒಳಿತಾಗುತ್ತದೆ ಎಂಬ ಭಾವನೆ ಉಂಟು..

ಗರಳಪುರಿ/ನಂಜನಗೂಡು ಪ್ರಸಿದ್ಧವಾದ ಧಾರ್ಮಿಕ ಯಾತ್ರಾಸ್ಥಳ ಕರ್ನಾಟಕ ಕಂಡ ಪ್ರಮುಖ ಹಬ್ಬವಾಗಿ ಗುರುತಿಸಿಕೊಂಡಿದೆ.

ಕಪಿಲಾ ನದಿ ಸ್ನಾನ: ಭಕ್ತರು ಪವಿತ್ರ ಕಪಿಲಾ ನದಿಯಲ್ಲಿ ಸ್ನಾನ ಮಾಡಿ ದೇವರ ದರ್ಶನ ಪಡೆಯುವುದು ಶತಮಾನಗಳಿಂದ ನಡೆದುಕೊಂಡು ಬಂದಿರುವಂತಹ ವಾಡಿಕೆ.

ಇತಿಹಾಸದ ಪ್ರಮುಖ ಅಂಶಗಳು

ಪೌರಾಣಿಕ ಹಿನ್ನೆಲೆ: ಗೌತಮ ಮಹರ್ಷಿಗಳು ಈ ದೇವಾಲಯವನ್ನು ಪ್ರತಿಷ್ಠಾಪಿಸಿದರು ಎಂಬ ಉಲ್ಲೇಖವಿದೆ ಹಾಗಾಗಿ ಮುಖ್ಯ ರಥಕ್ಕೆ 'ಗೌತಮ ರಥ' ಎಂದು ಹೆಸರು ಬಂದಿದೆ. ಎಂದು ಹೇಳಲಾಗುತ್ತದೆ!

ಪಂಚರಥಗಳು: ಗೌತಮ ರಥ (ನಂಜುಂಡೇಶ್ವರ), ಪಾರ್ವತಿ, ಗಣೇಶ, ಸುಬ್ರಹ್ಮಣ್ಯ ಮತ್ತು ಚಂಡಿಕೇಶ್ವರ ರಥಗಳು.

ರಥದ ವಿಶೇಷತೆ: ಗೌತಮ ರಥವು ಅಂದಾಜು 90 ಅಡಿ ಎತ್ತರ ಮತ್ತು 110 ಟನ್ ತೂಕವಿದ್ದು, ಅತಿದೊಡ್ಡ ರಥಗಳಲ್ಲಿ ಒಂದಾಗಿದೆ.

ಸಂಭ್ರಮ: ದೊಡ್ಡ ಜಾತ್ರೆಯ ಸಂದರ್ಭದಲ್ಲಿ ರಾಜ್ಯದ ನಾನಾ ಭಾಗಗಳಿಂದ ನಂಜುಂಡೇಶ್ವರನ ಭಕ್ತರು ಲಕ್ಷಾಂತರ ಜನಗಣ ಪಾಲ್ಗೊಳ್ಳುವ ಮುಖೇನ ರಥಬೀದಿಯಲ್ಲಿ ತೇರುಗಳನ್ನು ಎಳೆಯುತ್ತ ದೇವರ ಕೃಪೆಗೆ ಪಾತ್ರರಾಗುತ್ತಾರೆ..!

ಈ ಬಾರಿಯ ದೊಡ್ಡ ಜಾತ್ರೆಯ ವಿಶೇಷತೆಗಳು

ದಿನಾಂಕ ಮತ್ತು ಸಮಯ:

2026ರ ಮಾರ್ಚ್ 30ರಂದು ಬೆಳಿಗ್ಗೆ 5.35 ರಿಂದ 6 ಗಂಟೆಯ ನಡುವೆ ಪಂಚ ಮಹಾ ರಥೋತ್ಸವ ಶುಭ ಮೀನ ಲಗ್ನದಲ್ಲಿ ಆರಂಭವಾಗಿ, ದೇವಾಲಯದ ಸುತ್ತ ರಥಬೀದಿಯಲ್ಲಿ ಸಾಗುತ್ತದೆ.

ಪೂಜಾ ವಿಧಿವಿಧಾನಗಳು: ಜಾತ್ರೆಯು ಮೂರು ದಿನಗಳ ಕಾಲ ನಡೆಯಲಿದ್ದು, ಕಪಿಲಾ ನದಿಯಲ್ಲಿ ತೆಪ್ಪೋತ್ಸವ, ಅವಭೃತ ತೀರ್ಥಸ್ನಾನ ಮತ್ತು ಇತರ ಧಾರ್ಮಿಕ ವಿಧಿವಿಧಾನಗಳು ನಡೆಯುತ್ತವೆ.

ಪ್ರಸಾದ ವಿನಿಯೋಗ: ವಿವಿಧ ಸಮಾಜದ ಬಂಧು ಬಳಗ, ಸ್ಥಳೀಯ ಕೈಗಾರಿಕಾ ಪ್ರದೇಶದಲ್ಲಿ ಇರುವಂತಹ ಕಾರ್ಖಾನೆಗಳು ಜುಬಿಲೆಂಟ್, ನೆಸ್ಲೆ ಸೇವಾ ಸಂಸ್ಥೆಗಳಿಂದ ಭಕ್ತರಿಗೆ ಮಜ್ಜಿಗೆ, ಪಾನಕ, ಚಿತ್ರಾನ್ನ, ಪುಳಿಯೋಗರೆ, ಮುಂತಾದ ಪ್ರಸಾದ ವಿತರಣೆ ಮಾಡಲಾಗುತ್ತದೆ. ಈ ರಥೋತ್ಸವವು ಕರ್ನಾಟಕದ ಅತ್ಯಂತ ಪ್ರಸಿದ್ಧಿ ಪಡೆದಿರುವಂತಹ ಪ್ರಮುಖ ಜಾತ್ರೆಗಳಲ್ಲಿ ಒಂದಾಗಿದೆ.

ಗರಳಪುರಿ ಉತ್ಸವ: ಜಾತ್ರೆಯ ಅಂಗವಾಗಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ಕ್ರೀಡಾ ಕೂಟಗಳನ್ನು ಒಳಗೊಂಡ 'ಗರಳಪುರಿ ಉತ್ಸವ' ಕೂಡ ಇತಿಹಾಸದಲ್ಲಿ ಮೊಟ್ಟ ಮೊದಲ ಬಾರಿಗೆ ನಂಜನಗೂಡು ವಿಧಾನಸಭಾ ಕ್ಷೇತ್ರದ ಶಾಸಕ ದರ್ಶನ್ ಧ್ರುವನಾರಾಯಣ್ ಅವರ ಅಪಾರ ಇಚ್ಛಾಶಕ್ತಿ ಹಾಗೂ ಬದ್ಧತೆಯಿಂದಾಗಿ ಈ ಬಾರಿ ನಡೆಯುತ್ತಿರುವುದು ಇನ್ನೂ ವಿಶೇಷ.

ಇದರಿಂದಾಗಿ ಕಳೆದ ಒಂಭತ್ತು ದಿನಗಳಿಂದ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ದೀಪಗಳಿಂದ ಅಲಂಕಾರ ಕೃತವಾಗಿ ಮತ್ತು ವಿವಿಧ ಸ್ಪರ್ಧೆಗಳ



ಆಯೋಜನೆ ಮಾಡುವ ಮೂಲಕ ಪಟ್ಟಣದ ಹಾಗೂ ಸುತ್ತ ಮುತ್ತಲಿನ ಊರಿನ ಜನರಿಗೆ ಅವರ ಪ್ರತಿಭೆಯನ್ನು ತೋರಿಸಲು ವೇದಿಕೆ ನೀಡಿ ಪ್ರೋತ್ಸಾಹವನ್ನು ಕೊಟ್ಟು ರಸದೌತಣ ನೀಡಲಾಗುತ್ತಿದೆ.

ಅಗತ್ಯ ಸೌಕರ್ಯ ಮಾಡಿರುವ ಸ್ಥಳೀಯ ಆಡಳಿತ

ಈ ಬಾರಿ ಜಾತ್ರೆಗೆ ಬರುವ ಭಕ್ತರ ಅನುಕೂಲಕ್ಕಾಗಿ ಮೈಸೂರು ಮತ್ತು ನಂಜನಗೂಡು ನಡುವೆ ವಿಶೇಷ ರೈಲುಗಳ ವ್ಯವಸ್ಥೆಯನ್ನು ಮಾಡಲಾಗಿದೆ ಹಾಗೂ ಸಾರಿಗೆ ವ್ಯವಸ್ಥೆ ನಿಮಿಷಕ್ಕೊಂದು ಬಸ್ ಸಂಚಾರ ಕೂಡ ನೇರವಾಗಿ ದೇವಸ್ಥಾನದ ಬಳಿ ನೀಡಲಾಗಿದೆ. ಹಾಗೆಯೇ, ತೇರು ಬರುವ ರಸ್ತೆಯಲ್ಲಿ ಉತ್ತಮ ಮರಳನ್ನ ಸಿಂಪಡಿಸಲಾಗಿದ್ದು ತೇರು ಸರಾಗವಾಗಿ ಚಲಿಸಲು ಅನುಕೂಲವಾಗುತ್ತದೆ

ಸಿಸಿಟಿವಿ ವ್ಯವಸ್ಥೆ: ದೇವಸ್ಥಾನ ಹಾಗೂ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಜಾತ್ರೆಗೆ ಬರುವ ಭಕ್ತಾದಿಗಳ ಸಮಸ್ತ ಅನುಕೂಲಕ್ಕಾಗಿ ಯಾವುದೇ ಅಹಿತಕರ ಕಾರ್ಯ ನಡೆಯದಿರಲು ಸರಿಸುಮಾರು 180ಕ್ಕೂ ಹೆಚ್ಚು ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸಲಾಗಿದ್ದು ಜಾಗೃತಿ ಕಾರ್ಯ ನಿರಂತರವಾಗಿ ನಡೆಯುತ್ತಿದೆ.

ಅಪಘಾತಗಳ ತಡೆಗೆ ಸೂಕ್ತ ಕ್ರಮ: ಈ ಬಾರಿ ಸಾಕಷ್ಟು ಎಚ್ಚರ ವಹಿಸಲಾಗಿದ್ದು ಭಕ್ತಾದಿಗಳು ಯಾವುದೇ ಕಾರಣಕ್ಕೂ ನದಿ ಹಾಗೂ ರಸ್ತೆಗೆ ನೇರವಾಗಿ ಹೋಗದೆ ಅಂಡರ್‌ಪಾಸ್‌ನಲ್ಲೇ ಹೋಗಬೇಕು ಎಂಬ ನಿಯಮ ಮಾಡಲಾಗಿದೆ.

ಏಕೆಂದರೆ ಜಾತ್ರೆ ದಿನ ಸಾಕಷ್ಟು ವಾಹನಗಳು ಚಲಿಸುವ ಕಾರಣ ಜನ ಜಂಗುಳಿ ಹೆಚ್ಚಾಗುವ ಕಾರಣ ಇರುವುದರಿಂದ ಅಪಘಾತಗಳು ನಡೆಯುವ ಸಾಧ್ಯತೆ ಕೂಡ ತೀರ ಇರುತ್ತದೆ ಆದ್ದರಿಂದ ಮುನ್ನೆಚ್ಚರಿಕೆ ವಹಿಸಲಾಗಿದೆ. ದೇವಾಲಯದ ಸುತ್ತ ಹಾಗೂ ಬಸ್ ನಿಲ್ದಾಣ, ರೈಲ್ವೆ ನಿಲ್ದಾಣ ಆಸುಪಾಸಿನಲ್ಲಿ ಮಹಿಳಾ ಜಾಗೃತಿಗಾಗಿ ಸಂರಕ್ಷಣೆ ವಹಿಸಿರುವುದರಿಂದ ಶೌಚಾಲಯಗಳನ್ನು ತಾತ್ಕಾಲಿಕವಾಗಿ ನಿರ್ಮಿಸಲಾಗಿದ್ದು ಹಾಗೂ ಪ್ರತಿಯೊಬ್ಬರಿಗೂ ನೀರಿನ ವ್ಯವಸ್ಥೆಯನ್ನು ಕೂಡ ಅಲ್ಲಲ್ಲಿ ಸಾಕಷ್ಟು ಕಡೆ ತಾತ್ಕಾಲಿಕವಾಗಿ ಇಡಲಾಗಿದೆ.

> "ಗೌತಮ ಮಹರ್ಷಿ ಸ್ಥಾಪಿಸಿದರೆನ್ನಲಾದ 90 ಅಡಿ ಎತ್ತರದ ಗೌತಮ ರಥದೊಂದಿಗೆ ಗಣೇಶ, ಪಾರ್ವತಿ, ಸುಬ್ರಹ್ಮಣ್ಯ ಮತ್ತು ಚಂಡಿಕೇಶ್ವರರ ರಥಗಳೂ ಸೇರಿ ಒಟ್ಟು 5 ತೇರುಗಳನ್ನು ಎಳೆಯಲಾಗುತ್ತದೆ. (ಇಡೀ ದಕ್ಷಿಣ ಭಾರತದಲ್ಲಿ ಒಂದೇ ದಿನ ಐದು ತೇರುಗಳನ್ನು ಎಳೆಯುವ ಏಕೈಕ ಪುಣ್ಯಕ್ಷೇತ್ರವಿದು.



–ಅನಿಲ್‌ಕುಮಾರ್,
ನಂಜನಗೂಡು
ಲೇಖಕರು, ಹವ್ಯಾಸಿ ಬರಹಗಾರರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 29 ಭಾನುವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ-ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 337 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮೈಸೂರು ನಗರವಾಯ್ತು; ಈಗ ಜಿಲ್ಲೆಯಲ್ಲಿ ಡ್ರಗ್ಸ್ ಮಾಫಿಯಾ ಕಾರ್ಯಾಚರಣೆ

ಹುಣಸೂರು ಬಳಿ 12 ಕೋಟಿ ಮೌಲ್ಯದ 48 ಕೆ.ಜಿ. ಸಿಂಥೆಟಿಕ್ ಡ್ರಗ್ಸ್ ವಶ

- ಮೈಸೂರಿನ ಇಬ್ಬರ ಬಂಧನ, ನಾಲ್ವರು ಪರಾರಿ
- ಡ್ರಗ್ಸ್ ಕೇಸ್‌ಗೆ ಮುಂಬೈ ಲಿಂಕ್
- ಹುಣಸೂರಿನ ತೋಟದ ಶೆಡ್‌ನಲ್ಲಿ ಡ್ರಗ್ಸ್ ತಯಾರಿಕೆ
- ಡ್ರಗ್ಸ್ ಕಚ್ಚಾ ವಸ್ತುಗಳ ಮುಂಬೈನಿಂದ ತಂದಿದ್ದ ಆರೋಪಿಗಳು
- ವಿವಿಧ ರೀತಿಯ ಡ್ರಗ್ಸ್ ಪ್ಯಾಕೆಟ್ ಮಾಡಿ ಮಾರಾಟಕ್ಕೆ ಸಿದ್ಧರಿದ್ದರು



ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ

ಮೈಸೂರು, ಮಾ.28(ಬಿಎಲ್‌ಯು)- ಭರ್ಜರಿ ಕಾರ್ಯಾಚರಣೆ ನಡೆಸಿರುವ ಮೈಸೂರಿನ ಹುಣಸೂರು ಪೊಲೀಸರು ಬರೋಬರಿ 12 ಕೋಟಿ ಮೌಲ್ಯದ 48 ಕೆ.ಜಿ. ಸಿಂಥೆಟಿಕ್ ಡ್ರಗ್ಸ್ ವಶಪಡಿಸಿಕೊಂಡಿದ್ದಾರೆ. ದೇಶದ ವಾಣಿಜ್ಯ ನಗರಿ ಮುಂಬೈ ಸಂಪರ್ಕ ಹೊಂದಿದ್ದ ಮೈಸೂರಿನ ಇಬ್ಬರು ಆರೋಪಿಗಳನ್ನು ಇದೇ ವೇಳೆ ಪೊಲೀಸರು ಬಂಧಿಸಿದ್ದಾರೆ.

> "ಆರೋಪಿಗಳು ಡ್ರಗ್ಸ್ ತಯಾರಿಸುತ್ತಿದ್ದ ಸ್ಥಳಕ್ಕೆ ಹೋದಾಗ ಡ್ರಗ್ಸ್ ಎಷ್ಟರ ಮಟ್ಟಿಗೆ ಪವರ್ ಫುಲ್ ಆಗಿದೆ ಎಂಬುದು ಸ್ಪಷ್ಟವಾಯಿತು. ನಾನು ಮತ್ತು ನಮ್ಮ ತಂಡ ಮಾಸ್ಕ್ ಹಾಕಿಕೊಂಡು ಪರಿಶೀಲನೆಗೆ ಮುಂದಾದೆವು. ಆದರೆ, ಕಣ್ಣು ಉರಿ, ಘಾಟು ತೀಕ್ಷ್ಣವಾಗಿತ್ತು. ಮೆಫೆಡ್ರೋನ್ ತುಂಬಾ ಪರಿಣಾಮಕಾರಿಯಾದ ಡ್ರಗ್ಸ್. ದೂರದಲ್ಲಿದ್ದರೂ ಅದರ ಎಫೆಕ್ಟ್ ಗೊತ್ತಾಗುತ್ತಿತ್ತು.
> -ಮಲ್ಲಿಕಾರ್ಜುನ ಬಾಲದಂಡಿ, ಎಸ್ಪಿ, ಮೈಸೂರು.

ಪ್ರಕರಣದ ಬಗ್ಗೆ ಸಮಗ್ರ ಮಾಹಿತಿ ನೀಡಿದ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ



ಮೈಸೂರು ಜಿಲ್ಲೆ ಹುಣಸೂರು ತಾಲೂಕಿನ ತೋಟದ ಡ್ರಗ್ಸ್ ತಯಾರಿಕಾ ಘಟಕ (ಎಡಚಿತ್ರ), ಡ್ರಗ್ಸ್ ತಯಾರಿಕಾ ಘಟಕದ ಮೇಲೆ ದಾಳಿ ಮಾಡಿರುವ ಪೊಲೀಸರನ್ನು (ಬಲಚಿತ್ರ) ಕಾಣಬಹುದು.

ಮೈಸೂರಿನ ಸಿದ್ಧಿಖಿ ಮೊಹಲ್ಲಾದ ಮೊಹಮ್ಮದ್ ಇರ್ಫಾನ್ ಹಾಗೂ ಹುಣಸೂರು ಟೌನ್‌ನ ರೆಹಮತ್ ಮೊಹಲ್ಲಾದ ಮೊಹಮ್ಮದ್ ಇರ್ಫಾನ್ ಬಂಧಿತ ಆರೋಪಿಗಳಾಗಿದ್ದಾರೆ. ಮೈಸೂರು ಎಸ್ಪಿ ಕಚೇರಿಯ ಸಭಾಂಗಣದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಕಾರ್ಯಾಚರಣೆ ಬಗ್ಗೆ ಇಂಚಿಂಚು ವಿವರ ನೀಡಿದರು.

ಕಳೆದ ಒಂದು ವರ್ಷದ ಅವಧಿಯಲ್ಲಿ 70 ಡ್ರಗ್ಸ್ ಪ್ರಕರಣಗಳನ್ನು ದಾಖಲಿಸಿಕೊಂಡಿದ್ದೇವೆ. ಇಷ್ಟೊಂದು ಪ್ರಮಾಣದ ಡ್ರಗ್ಸ್ ಪತ್ತೆಯಾಗಿರುವ ಹಿನ್ನೆಲೆಯಲ್ಲಿ ಇದರ ಮೂಲ ಹುಡುಕಲು ಕಾರ್ಯತಂತ್ರ ರೂಪಿಸಿದ್ದೆವು. ಹುಣಸೂರಿನಲ್ಲಿ ಡ್ರಗ್ಸ್ ಸೇವನೆ ಮಾಡಿ ಸಿಕ್ಕಿ ಬಿದ್ದ ಆರೋಪಿಗಳನ್ನು ತೀವ್ರ ವಿಚಾರಣೆಗೊಳಪಡಿಸಿದಾಗ ಈ ಪ್ರಕರಣ ಬೆಳಕಿಗೆ ಬಂದಿತು ಎಂದರು.

ಹುಣಸೂರಿನ ದಾಸನಪುರ ಗ್ರಾಮದ ಪಕ್ಕದ ಆಸ್ಪತ್ರೆ ಕಾವಲ್ ಬಳಿ ಮೊಹಮ್ಮದ್ ಇರ್ಫಾನ್‌ಗೆ ಸೇರಿದ ಜಮೀನಿನ ಶೆಡ್‌ನಲ್ಲಿ ಡ್ರಗ್ಸ್ ತಯಾರಿಸಲಾಗುತ್ತಿದೆ ಎಂದು ಖಚಿತ ಮಾಹಿತಿ ದೊರೆಯಿತು. ಹುಣಸೂರು ಗ್ರಾಮಾಂತರ ಇನ್ಸ್‌ಪೆಕ್ಟರ್ ಸಂತೋಷ್ ಸೇರಿದಂತೆ ಐವರು ಪೊಲೀಸರು ಈ ಜಾಡು ಹಿಡಿದು ಹೊರಟರು. ದಾಸನಪುರದಿಂದ ಸುಮಾರು 2 ಕಿಲೋ ಮೀಟರ್ ದೂರದಲ್ಲಿ ಆ ತೋಟವಿದೆ. ಸುತ್ತಮುತ್ತಲೂ ಮನೆಗಳಿಲ್ಲದ ಆ ಸ್ಥಳವನ್ನು ಡ್ರಗ್ಸ್ ತಯಾರಿಕೆಗೆ ಆರೋಪಿಗಳು ಆಯ್ಕೆ ಮಾಡಿಕೊಂಡಿರುವುದು ಸ್ಪಷ್ಟವಾಯಿತು. ನಿನ್ನೆ ರಾತ್ರಿ ತೋಟದ ಕಚ್ಚಾ ರಸ್ತೆಯಲ್ಲಿ ಸಾಗಿ ನಮ್ಮ ಪೊಲೀಸರು ಈ ಶೆಡ್ ಮೇಲೆ ದಾಳಿ ಮಾಡಿದ್ದರು.

ದಾಳಿ ವೇಳೆ ಮೈಸೂರಿನ ಮೊಹಮ್ಮದ್ ಇರ್ಫಾನ್ ಹಾಗೂ ಹುಣಸೂರಿನ ಮೊಹಮ್ಮದ್ ಇರ್ಫಾನ್ ಸಿಕ್ಕಿ ಬಿದ್ದರು. ಆದರೆ ಡ್ರಗ್ಸ್ ತಯಾರಿಕೆಯಲ್ಲಿ ತಜ್ಞರಾಗಿದ್ದ ಇಬ್ಬರು ಸೇರಿದಂತೆ ನಾಲ್ವರು ಕತ್ತಲೆಯಲ್ಲಿ ಪರಾರಿಯಾದರು ಎಂದು ತಿಳಿಸಿದರು.

ಇಬ್ಬರು ಆರೋಪಿಗಳನ್ನು ವಶಕ್ಕೆ ಪಡೆದು ಇಡೀ ಶೆಡ್ ಜಾಲಾಡಿದಾಗ ಭಾರೀ ಪ್ರಮಾಣದ ಸಿಂಥೆಟಿಕ್ ಡ್ರಗ್ಸ್ ಪತ್ತೆಯಾಯಿತು. ಸುಮಾರು 7.35 ಕೆ.ಜಿ. ತೂಕದ ಮೆಫೆಡ್ರೋನ್ (Mephedrone) ಹಾಗೂ 41 ಕೆ.ಜಿ.ತೂಕದ ಡ್ರಗ್ಸ್ ಕಚ್ಚಾ ವಸ್ತುಗಳು ಸೇರಿದಂತೆ ಒಟ್ಟು 48 ಕೆ.ಜಿ. ಮಾದಕ ವಸ್ತುಗಳು ಪತ್ತೆಯಾಗಿವೆ. ಇದರ ಮೌಲ್ಯ ಸುಮಾರು 12 ಕೋಟಿ ರೂ. ಎಂದು ಮಲ್ಲಿಕಾರ್ಜುನ ಬಾಲದಂಡಿ ಮಾಹಿತಿ ನೀಡಿದರು.

ಮೆಫೆಡ್ರೋನ್ ಸೇರಿದಂತೆ ಇತರೆ ರಾಸಾಯನಿಕ ವಸ್ತುಗಳನ್ನು ಮಿಶ್ರಣ ಮಾಡಿ ಡ್ರಗ್ಸ್ ತಯಾರಿಸಿದ್ದರು. 300 ಗ್ರಾಂ, 350 ಗ್ರಾಂ, 500 ಗ್ರಾಂ ಹಾಗೂ ಒಂದು ಕೆ.ಜಿ.ತೂಕದ ವಿವಿಧ ಡ್ರಗ್ಸ್ ಪ್ಯಾಕೆಟ್‌ಗಳು ಪತ್ತೆಯಾಗಿದ್ದವು. ಆರೋಪಿಗಳು ಕೆಲವು ರಾಸಾಯನಿಕವನ್ನು ಆನ್‌ಲೈನ್‌ನಿಂದ ಖರೀದಿ ಮಾಡಿರುವುದಕ್ಕೆ ದಾಖಲಾತಿಗಳು ದೊರೆತಿವೆ. ಡ್ರಗ್ಸ್ ಕಚ್ಚಾವಸ್ತುಗಳನ್ನು ಬಾಕ್ಸ್‌ಗಳಲ್ಲಿ ತರಲು ಟ್ರ್ಯಾಕ್ಟರ್ ▶ 10ನೇ ಪುಟಕ್ಕೆ



ದಾಸನಪುರದ ತೋಟದ ಶೆಡ್‌ನಲ್ಲಿ ಪತ್ತೆಯಾಗಿರುವ ಡ್ರಗ್ಸ್, ಕಚ್ಚಾ ವಸ್ತುಗಳು.

ಡ್ರಗ್ಸ್ ಜಾಲದ ಮಾಸ್ಟರ್ ಮೈಂಡ್ ಮೈಸೂರಿಗ!

ಮೈಸೂರಿನಲ್ಲಿ ಪತ್ತೆಯಾಗುತ್ತಿರುವ ಡ್ರಗ್ಸ್ ತಯಾರಿಕೆ, ಸಾಗಾಟ, ಮಾರಾಟದ ಮಾಸ್ಟರ್ ಮೈಂಡ್ ಮೈಸೂರಿನವನೇ ಆಗಿದ್ದಾನೆ ಎಂದು ಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದರು. ಕಳೆದ ಆರು ತಿಂಗಳಿನಿಂದ ಈತ ಡ್ರಗ್ಸ್ ತಯಾರಿಕೆ, ಸಾಗಾಣಿಕೆ ಹಾಗೂ ಮಾರಾಟದಲ್ಲಿ ಈತನೆ ಪ್ರಮುಖ ವ್ಯಕ್ತಿಯಾಗಿದ್ದಾನೆ. ಈತನಿಂದಲೇ ಮೈಸೂರಿನ ಹಲವೆಡೆ ಡ್ರಗ್ಸ್ ತಯಾರಾಗುತ್ತಿದೆ. ಈತ ಯಾರೆಂಬ ಮಾಹಿತಿ ಈಗಾಗಲೇ ನಮಗೆ ಲಭ್ಯವಾಗಿದೆ. ಆದರೆ, ಆತ ಇನ್ನು ನಮ್ಮ ಕೈಗೆ ಸಿಕ್ಕಿಲ್ಲ ಎಂದು ಮಾಹಿತಿ ನೀಡಿದರು. ಈತನಿಗೆ ಮುಂಬೈನ ಡ್ರಗ್ಸ್ ಜಾಲದ ದೊಡ್ಡ ನಂಟಿದೆ. ಇದರಿಂದಲೇ ಮೈಸೂರಿನಲ್ಲಿ ಡ್ರಗ್ಸ್ ತಯಾರಿಕೆ ಹೆಚ್ಚಾಗಿ ನಡೆಯುತ್ತಿದೆ. ಈತ ಸಿಕ್ಕಿ ಬಿದ್ದರೆ ಡ್ರಗ್ಸ್ ದಂಧೆಗೆ ಕಡಿವಾಣ ಹಾಕಿದಂತಾಗುತ್ತದೆ ಎಂದರು. ಸದ್ಯ ಆರೋಪಿಗಳಿಂದ ಮೊಬೈಲ್‌ಗಳನ್ನು ವಶಪಡಿಸಿಕೊಂಡಿದ್ದೇವೆ. ಆದರೆ ಲ್ಯಾಪ್ ಟಾಪ್ ಸೇರಿದಂತೆ ಇನ್ನು ಅನೇಕ ವಸ್ತುಗಳು ಜಪ್ತಿ ಆಗಬೇಕಿದೆ. ಆದರೆ, ಇವರಿಂದ ವಶಪಡಿಸಿಕೊಂಡ ಮೊಬೈಲ್ ಮಾಹಿತಿ ಆಧರಿಸಿ ಈ ಪ್ರಕರಣದಲ್ಲಿ ಇನ್ನು ಹಲವರು ಭಾಗಿಯಾಗಿದ್ದಾರೆಯೇ ಎಂದು ಪತ್ತೆ ಹಚ್ಚಬೇಕಿದೆ ಎಂದು ಹೇಳಿದರು.

ಐಪಿಎಲ್-2026; ಕೊಹ್ಲಿ-ಪಡಿಕ್ಕಲ್ ಅರ್ಧ ಶತಕದಾಟ; ಆರ್‌ಸಿಬಿ ಗೆಲುವಿನ ಶುಭಾರಂಭ

ಮೈಸೂರು, ಮಾ.28(ವಿವಿಹೆಚ್)- ರನ್ ಮೆಷಿನ್ ವಿರಾಟ್ ಕೊಹ್ಲಿ ಹಾಗೂ ದೇವ್‌ದತ್ ಪಡಿಕ್ಕಲ್ ಅಮೋಘ ಅರ್ಧ ಶತಕದ ನೆರವಿನಿಂದ ಅತಿಥೇಯ ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು 6 ವಿಕೆಟ್‌ಗಳಿಂದ ಮಣಿಸಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ಇಲ್ಲಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ 19ನೇ ಆವೃತ್ತಿಯ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯ ಉದ್ಘಾಟನಾ ಪಂದ್ಯದಲ್ಲಿ ಹಾಲಿ ಚಾಂಪಿಯನ್ಸ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ಟಾಸ್ ಗೆದ್ದು ಬೌಲಿಂಗ್ ಆಯ್ದುಕೊಂಡಿತು. ಅದರಂತೆ ಮೊದಲು ಬ್ಯಾಟಿಂಗ್ ಮಾಡಿದ ಸನ್ ರೈಸರ್ಸ್ ಹೈದರಾಬಾದ್ 20 ಓವರ್‌ಗಳಲ್ಲಿ ಇಶಾನ್ ಕಿಶನ್ ಅಬ್ಬರದ ಅರ್ಧ ಶತಕದ ನೆರವಿನಿಂದ 9 ವಿಕೆಟ್ ನಷ್ಟಕ್ಕೆ 201 ರನ್ ಕಲೆಹಾಕಿ ಆರ್‌ಸಿಬಿ ತಂಡಕ್ಕೆ 202 ರನ್‌ಗಳ ಗುರಿಯನ್ನು ನೀಡಿತು.

ಈ ಬೃಹತ್ ಮೊತ್ತವನ್ನು ಸರಾಗವಾಗಿ ಬೆನ್ನತ್ತಿದ ಆರ್‌ಸಿಬಿಗೆ ವಿರಾಟ್ ಕೊಹ್ಲಿ ಹಾಗೂ ಕನ್ನಡಿಗ ದೇವ್‌ದತ್ ಪಡಿಕ್ಕಲ್ ಆಸರೆಯಾದರು. ಈ ಜೋಡಿ ಕೇವಲ 45 ಎಸೆತಗಳಲ್ಲಿ 101ರನ್‌ಗಳ ಜೊತೆಯಾಟವಾಡಿ ಆರ್‌ಸಿಬಿ ಗೆಲುವಿಗೆ ಕಾರಣರಾದರು. ಪಡಿಕ್ಕಲ್ 26 ಎಸೆತಗಳಲ್ಲಿ 7 ಬೌಂಡರಿ, 4 ಸಿಕ್ಸರ್ ಸಹಿತ 61 ರನ್ ಗಳಿಸಿದರು. ಬಳಿಕ ವಿರಾಟ್ ಜೊತೆಯಾದ ನಾಯಕ ರಜತ್ ಪಾಟಿದರ್ 12 ಎಸೆತಗಳಲ್ಲಿ ಮಿಂಚಿನ 31 ರನ್ ಗಳಿಸಿ ಪೆವಿಲಿಯನ್ ಸೇರಿದರು.



ವಿರಾಟ್ ಕೊಹ್ಲಿ ಮತ್ತು ದೇವ್‌ದತ್ ಪಡಿಕ್ಕಲ್ ಜೊತೆಯಾಟ

ಇತ್ತ ಆಕರ್ಷಕ ಬ್ಯಾಟ್ ಬೀಸಿದ ವಿರಾಟ್ ಕೊಹ್ಲಿ 38 ಎಸೆತಗಳಲ್ಲಿ 5 ಬೌಂಡರಿ, 5 ಸಿಕ್ಸರ್ ಸಹಿತ ಅಜೇಯ 69ರನ್ ಕಲೆಹಾಕಿ ತಂಡಕ್ಕೆ ಗೆಲುವು ತಂದುಕೊಟ್ಟರು. ▶ 10ನೇ ಪುಟಕ್ಕೆ

ಎಸ್‌ಎಸ್‌ಎಲ್‌ಸಿಯಲ್ಲಿ ಹಿಂದಿ ಸೇರಿ ತೃತೀಯ ಭಾಷೆಗಳು ನಗಣ್ಯ ವಿಚಾರ ಆದರೆ, ಹಿಂದಿ ಕಲಿಯಲು ಯಾವ ನಿರ್ಬಂಧ ಇಲ್ಲ

ಮೈಸೂರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟನೆ

ಮೈಸೂರು,ಮಾ.28(ಪಿಎಂ)-ತೃತೀಯ ಭಾಷೆಗಳನ್ನು ಎಸ್‌ಎಸ್‌ಎಲ್‌ಸಿಯಲ್ಲಿ ನಗಣ್ಯವೆಂದು ಪರಿಗಣಿಸಿರುವ ಸಂಬಂಧ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಹಿಂದಿ ಹೇರಿಕೆ ಮಾಡುತ್ತಾರೆ ಎಂದಾಗಲಿ ಅಥವಾ ಹಿಂದಿ ಭಾಷೆ ಕಲಿಯಬಾರದು ಎಂದಾಗಲಿ ಈ ನಿರ್ಧಾರ ಕೈಗೊಂಡಿದ್ದಲ್ಲ. ಆದರೆ ಪರೀಕ್ಷೆಗೆ ಕಡ್ಡಾಯ ಆಗಬಾರದು ಎಂದು ನಿರ್ಧಾರ ಮಾಡಲಾಗಿದೆ ಎಂದು ಹೇಳಿದರು.

ಎರಡು ದಿನಗಳ ಮೈಸೂರು ಭೇಟಿಗಾಗಿ ಆಗಮಿಸಿರುವ ಅವರು ಶನಿವಾರ ಮೈಸೂರು ವಿಮಾನ ನಿಲ್ದಾಣದಲ್ಲಿ ಮಾಧ್ಯಮದವರಿಗೆ ಪ್ರತಿಕ್ರಿಯಿಸಿದರು. ತೃತೀಯ ಭಾಷೆಯಾದ ಹಿಂದಿಯನ್ನು ಕಡ್ಡಾಯ ಮಾಡಬಾರದು ಎಂದು ತೀರ್ಮಾನ ಮಾಡಿದ್ದೇವೆ. ಈಗ ಎಸ್‌ಎಸ್‌ಎಲ್‌ಸಿಯ ಪರೀಕ್ಷೆ 625 ಅಂಕಗಳಿಗೆ ನಡೆಯುತ್ತಿದ್ದು, ಈ ಪೈಕಿ 100 ಅಂಕಗಳು ತೃತೀಯ ಭಾಷೆಗಳಿಗೆ ನಿಗದಿ ಮಾಡಲಾಗುತ್ತದೆ. ಈಗ ಇದನ್ನು ಕಡ್ಡಾಯ ಮಾಡುವುದು ಬೇಡವೆಂದು ತೀರ್ಮಾನಿಸಿದ್ದೇವೆ. ಈ ವರ್ಷದಿಂದಲೇ ಇದು ಜಾರಿಯಾಗಲಿದೆ ಎಂದು ತಿಳಿಸಿದರು.



ಮೈಸೂರಲ್ಲಿ ಸಿಎಂ ಸಿದ್ದರಾಮಯ್ಯ ಮಾಧ್ಯಮದವರೊಂದಿಗೆ ಮಾತನಾಡಿದರು.

ಸರ್ಕಾರದ ಈ ನಿರ್ಧಾರಕ್ಕೆ ಖಾಸಗಿ ಶಿಕ್ಷಣ ಸಂಸ್ಥೆಗಳು ವಿರೋಧ ವ್ಯಕ್ತಪಡಿಸುತ್ತಿವೆ ಎಂಬುದಕ್ಕೆ ಪ್ರತಿಕ್ರಿಯಿಸಿ, ಸರ್ಕಾರ ತೀರ್ಮಾನ ಮಾಡಿದೆ ಯಾವುದೇ ತೀರ್ಮಾನಕ್ಕೆ ಪರ-ವಿರೋಧ ಸಾಮಾನ್ಯ. ಎಲ್ಲದಕ್ಕೂ ಶೇ.100ರಷ್ಟು ಒಪ್ಪಿಗೆ ಇರುವುದಿಲ್ಲ. ಹಿಂದಿ ಹೇರಿಕೆ ಎಂದಲ್ಲ. ಹಿಂದಿ ಭಾಷೆ ಕಲಿಯಬಾರದೂ ಎಂದೇನಿಲ್ಲ. ಆದರೆ ಪರೀಕ್ಷೆಗೆ ಕಡ್ಡಾಯ ಆಗಬಾರದು ಎಂದು ನಿರ್ಧಾರ ಮಾಡಲಾಗಿದೆ. ನಾವು ಓದುವಾಗಲೂ ಹಿಂದಿ ಕಡ್ಡಾಯ ಇರಲಿಲ್ಲ. ಆ ಕಾರಣಕ್ಕೆ ನಾವು ಹಿಂದಿಯನ್ನು ಓದಲಿಕ್ಕೆ ಹೋಗಲಿಲ್ಲ ಎಂದು ಮುಗುಳ್ನಕ್ಕರು.

ಎರಡೂ ಕ್ಷೇತ್ರಗಳಲ್ಲಿ ನಮ್ಮದೇ ಗೆಲುವು: ರಾಜ್ಯದ ಎರಡೂ ಕ್ಷೇತ್ರಗಳ ಉಪಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಎರಡೂ ಕಡೆ ನಾವೇ ಗೆಲ್ಲುತ್ತೇವೆ. ಮಾ.30, 31 ಬಾಗಲಕೋಟೆ, ಏ.1, 2ರಂದು ದಾವಣಗೆರೆ, ಏ.3 ಮತ್ತು 4ರಂದು ಮತ್ತೆ ಬಾಗಲಕೋಟೆ ಹಾಗೂ ಏ.5ರಂದು ಕೇರಳಕ್ಕೆ ಚುನಾವಣಾ ಪ್ರಚಾರಕ್ಕೆ ಹೋಗುತ್ತಿದ್ದು, ಏ.6ರಂದು ಬಾಗಲಕೋಟೆ ಇಲ್ಲವೇ ದಾವಣಗೆರೆಗೆ ಪಕ್ಷದ ಪರ ಪ್ರಚಾರಕ್ಕೆ ಹೋಗುವುದಾಗಿ ತಿಳಿಸಿದರು. ▶ 10ನೇ ಪುಟಕ್ಕೆ

ದೇಶದಾದ್ಯಂತ 1100 ಬಾಂಬ್ ಬೆದರಿಕೆ ಸಂದೇಶ ಭೀತಿ...!

ದೆಹಲಿ ಪೊಲೀಸರಿಂದ ಮೈಸೂರು ನಿವಾಸಿ ಬಂಧನ

ವಿಧಾನಸಭೆ, ಕೋರ್ಟ್, ಸರ್ಕಾರಿ ಕಚೇರಿ, ಶಾಲಾ-ಕಾಲೇಜುಗಳಿಗೆ ಇ-ಮೇಲ್ ಮೂಲಕ ಬಾಂಬ್ ಬೆದರಿಕೆ ಹಾಕುತ್ತಿದ್ದ ಕಿಡಿಗೇಡಿ

ಮೈಸೂರು,ಮಾ.28(ಬಿಎಲ್‌ಯು)-ರಾಜ್ಯದ ವಿಧಾನಸೌಧವೂ ಸೇರಿದಂತೆ ವಿವಿಧ ರಾಜ್ಯಗಳ ವಿಧಾನಸಭೆ, ಕೋರ್ಟ್, ಸರ್ಕಾರಿ ಕಚೇರಿ, ಶಾಲಾ ಕಾಲೇಜು ಸೇರಿದಂತೆ ಪ್ರತಿಷ್ಠಿತ ಸ್ಥಳಗಳಿಗೆ ಬಾಂಬ್ ಬೆದರಿಕೆ ಹಾಕಿ ದೇಶಾದ್ಯಂತ ಭಯದ ವಾತಾವರಣ ಉಂಟು ಮಾಡಿದ್ದ ಮೈಸೂರಿನ ಹೈಟೆಕ್ ಆತಂಕಕಾರಿ ವ್ಯಕ್ತಿಯನ್ನು ದೆಹಲಿ ಪೊಲೀಸರು ಇಂದು ಬಂಧಿಸಿದ್ದಾರೆ.

ಮೈಸೂರಿನ ಬೃಂದಾವನ ಬಡಾವಣೆ 2ನೇ ಹಂತದ ನಿವಾಸಿ ಶ್ರೀನಿವಾಸ್ (47) ಅಲಿಯಾಸ್ ಶ್ರೀನಿವಾಸ್ ಲೂಯಿಸ್ ಬಂಧಿತ. ನ್ಯಾಯಾಲಯಗಳಿಗೆ ಬಾಂಬ್ ಬೆದರಿಕೆ ಹಾಕಿದ್ದ ಹಿನ್ನೆಲೆಯಲ್ಲಿ ದೆಹಲಿಯ ನ್ಯಾಯಾಧೀಶರೊಬ್ಬರು ಅಲ್ಲಿನ ಸೈಬರ್ ಆರ್ಥಿಕ ಮತ್ತು ಮಾದಕ ದ್ರವ್ಯ (ಸಿಇಎನ್) ವಿಭಾಗಕ್ಕೆ ದೂರು ಸಲ್ಲಿಸಿದ್ದರು. ತರುವಾಯ ಸೆನ್ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದರು.

ಪ್ರಕರಣ ದಾಖಲಿಸಿಕೊಂಡಿದ್ದ ದೆಹಲಿ ಪೊಲೀಸರಿಗೆ ಬಾಂಬ್ ಬೆದರಿಕೆ ಹಾಕುತ್ತಿರುವ ಕಿಡಿಗೇಡಿ ಬಗ್ಗೆ ಒಂದು ಸಣ್ಣ ಸುಳಿವು ಸಹ ಇರಲಿಲ್ಲ. ಹಾಗಂತ ಪೊಲೀಸರು ಕೈಕಟ್ಟಿ ಕೂರುವ ಸ್ಥಿತಿಯಲ್ಲಿ ಇರಲಿಲ್ಲ. ಸ್ವತಃ ನ್ಯಾಯಾಧೀಶರೇ ದೂರು ನೀಡಿದ್ದರಿಂದ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದ ದೆಹಲಿ ಪೊಲೀಸರು ಆರೋಪಿಯ ಜಾಡು ಹಿಡಿದು ಹೊರಟಿದ್ದರು.

ಮೈಸೂರಿನ ಶ್ರೀನಿವಾಸ್ ದೇಶದ ಹಲವು ರಾಜ್ಯಗಳ ವಿಧಾನಸಭೆಗಳು, ಕೋರ್ಟ್, ಸರ್ಕಾರಿ ಕಚೇರಿ, ಶಾಲಾ-ಕಾಲೇಜು ಸೇರಿದಂತೆ ಪ್ರತಿಷ್ಠಿತ ಸ್ಥಳಗಳಿಗೆ ಬಾಂಬ್ ಬೆದರಿಕೆ ಹಾಕುತ್ತಿದ್ದ. ಆದರೆ ಈ ಕೃತ್ಯಕ್ಕೆ ಈತ ಮೊಬೈಲ್ ಬಳಸುತ್ತಿರಲಿಲ್ಲ. ಹಾಗಾಗಿ ಪೊಲೀಸರಿಗೆ ಈ ಪ್ರಕರಣ ಭೇದಿಸುವುದು ಕಗ್ಗಂಟಾಗಿತ್ತು. ಆಧುನಿಕ ತಂತ್ರಜ್ಞಾನ ಪರಿಣಿತನಾಗಿರುವ ಶ್ರೀನಿವಾಸ್ ಬಾಂಬ್ ಬೆದರಿಕೆ ಸಂದೇಶ ಕಳುಹಿಸಲು ಇ-ಮೇಲ್ ಹಾದಿ ಹಿಡಿದಿದ್ದ. ಆದರೆ ತಾನು ಕಳುಹಿಸುವ ಇ-ಮೇಲ್ ಬಗ್ಗೆ ಪೊಲೀಸರಿಗೆ ಯಾವುದೇ ಸುಳಿವು ದೊರೆಯದಂತೆ ಚಾಕ ಚಕ್ಯತೆ ಮೆರೆದಿದ್ದನು. ಈತ ಆಗಾಗ್ಗೆ ಕಳುಹಿಸುತ್ತಿದ್ದ ಬಾಂಬ್ ಬೆದರಿಕೆಯ ಸಂದೇಶಗಳು ರಾಷ್ಟ್ರ ರಾಜಧಾನಿ ದೆಹಲಿ ಸೇರಿದಂತೆ ಇತರೆಡೆ ಭೀತಿ ಉಂಟು ಮಾಡಿದ್ದವು. ಮೊದಲೇ ಪಾಕಿಸ್ತಾನದ ಭಯೋತ್ಪಾದಕರ ಕರಿನೆರಳಿದ್ದ ಹಿನ್ನೆಲೆಯಲ್ಲಿ ಇದು ಉಗ್ರರ ಕೈವಾಡ ಇರಬಹುದೇ ಎಂದು ತಲೆಕೆಡಿಸಿಕೊಂಡಿದ್ದ ದೆಹಲಿ ಪೊಲೀಸರು ಆರೋಪಿ ಪತ್ತೆಗೆ ವ್ಯಾಪಕ ಜಾಲ ಬೀಸಿದ್ದರು. ಕಡೆಗೆ ಕೇಂದ್ರ ಹಾಗೂ ರಾಜ್ಯಗಳ ಗುಪ್ತಚರ ಇಲಾಖೆ ನೆರವು ಕೂಡ ಪಡೆದರು.

ಅಲ್ಲದೆ ಮಾಹಿತಿ ತಂತ್ರಜ್ಞಾನ ಇಲಾಖೆ ಸಹಕಾರ ಪಡೆದರು. ಆದರೆ ಚಾಲಾಕಿ ಶ್ರೀನಿವಾಸ್ ಬಗ್ಗೆ ದೆಹಲಿ ಪೊಲೀಸರಿಗೆ ಯಾವುದೇ ಸುಳಿವು ದೊರೆಯಲಿಲ್ಲ. ಕಡೆಗೂ ಆಧುನಿಕ ತಂತ್ರಜ್ಞಾನವನ್ನು ಬಳಕೆ ಮಾಡಿಕೊಂಡು ಆರೋಪಿ ಮೈಸೂರಿನಲ್ಲಿ ಇದ್ದಾನೆ ಎಂಬ ಸುಳಿವು ದೊರೆಯಿತು. ದೆಹಲಿ ಪೊಲೀಸ್ ಅಧಿಕಾರಿ ನೇತೃತ್ವದ ಐವರು ಪೊಲೀಸರ ತಂಡ ಮೊನ್ನೆಯೇ ಮೈಸೂರಿಗೆ ಆಗಮಿಸಿದೆ. ನಗರದ ವಿ.ವಿ.ಮೊಹಲ್ಲಾ ಪೊಲೀಸರ ಸಹಕಾರ ಪಡೆದು ಕೊನೆಗೂ ಕಿಡಿಗೇಡಿ ಸ್ಥಳದ ಜಾಡು ಹಿಡಿದು ಹೊರಟರು. ಮೈಸೂರಿನ ಬೃಂದಾವನ ಬಡಾವಣೆ ▶ 10ನೇ ಪುಟಕ್ಕೆ

ಶ್ರೀನಿವಾಸ್ ವಿಘ್ನ ಸಂತೋಷಿ!

ವಿಘ್ನ ಸಂತೋಷಿ ಶ್ರೀನಿವಾಸ್ ಒಂದೊ... ಎರಡೊ... ಹುಸಿ ಬಾಂಬ್ ಬೆದರಿಕೆ ಹಾಕಿರಲಿಲ್ಲ. ಈತ ಕನ್ಯಾಕುಮಾರಿಯಿಂದ ಜಮ್ಮು-ಕಾಶ್ಮೀರದವರೆಗೆ ಬಹುತೇಕ ರಾಜ್ಯಗಳಿಗೆ ಬರೋಬರಿ 1,100ಕ್ಕೂ ಹೆಚ್ಚು ಬೆದರಿಕೆ ಸಂದೇಶ ಕಳುಹಿಸಿದ್ದ. ಪೊಲೀಸರು ನಡೆಸಿರುವ ಪ್ರಾಥಮಿಕ ತನಿಖೆಯ ಮಾಹಿತಿ ಪ್ರಕಾರ ಈತ ಬಾಂಬ್ ಬೆದರಿಕೆ ಹಾಕುವುದನ್ನು ಕರಗತ ಮಾಡಿಕೊಂಡಿದ್ದ. ಈತನಿಗೆ ಯಾವುದೇ ಉದ್ಯೋಗವಿಲ್ಲ. ತಾಯಿಗೆ ಬರುತ್ತಿದ್ದ ನಿವೃತ್ತಿ ವೇತನದಲ್ಲಿ ಜೀವನ ನಿರ್ವಹಣೆ. ಈತನಿಗೆ ಉದ್ಯೋಗ ಮಾಡುವ ಆಸಕ್ತಿಯೂ ಇರಲಿಲ್ಲ. ಸುಮ್ಮನೆ ಕಾಲ ಕಳೆಯುವುದಕ್ಕಿಂತ ಈ ರೀತಿ ಬಾಂಬ್ ಬೆದರಿಕೆ ಹಾಕಿ ಪತ್ರಿಕೆ, ಸುದ್ದಿವಾಹಿನಿಗಳಲ್ಲಿ ಬರುತ್ತಿದ್ದ ಸುದ್ದಿ ನೋಡಿ ಮಜಾ ತೆಗೆದುಕೊಳ್ಳುತ್ತಿದ್ದ.



ಆರೋಪಿ ಶ್ರೀನಿವಾಸ್

ವಾಯ್ಸ್ ಓವರ್ ಇಂಟರ್ನೆಟ್ ಪ್ರೋಟೋಕಾಲ್ ಮೂಲಕ ಕರೆ

ಶ್ರೀನಿವಾಸ್, ಇಂಟರ್ನೆಟ್ ಮೂಲಕ ಫೋನ್ ಕರೆಗಳನ್ನು ಅನುಮತಿಸುವ ಡಿಜಿಟಲ್ ವೇದಿಕೆಯ ತಂತ್ರಜ್ಞಾನವನ್ನು ಬಳಸಿಕೊಂಡಿದ್ದ. ಮೊಬೈಲ್ ಇಲ್ಲವೇ ದೂರವಾಣಿ ಬಳಸಿ ಬಾಂಬ್ ಬೆದರಿಕೆ ಸಂದೇಶ ಕಳುಹಿಸಿದರೆ ಖಾಕಿ ಕಣ್ಣಿಗೆ ಬೀಳುತ್ತೇನೆ ಎಂದು, ಶ್ರೀನಿವಾಸ್ ಸಾಮಾನ್ಯ ದೂರವಾಣಿ ಮಾರ್ಗ ಅನುಸರಿಸಲಿಲ್ಲ. ಇದಕ್ಕೆ ಬದಲಾಗಿ ಇಂಟರ್ನೆಟ್ ಫೋನ್ ಕರೆ ಅನುಮತಿಸುವ ತಂತ್ರಜ್ಞಾನವಾದ (Volp- ವಾಯ್ಸ್ ಓವರ್ ಇಂಟರ್ನೆಟ್ ಪ್ರೋಟೋಕಾಲ್) ಕರೆ ಬಳಸುತ್ತಿದ್ದ. ಇಂಟರ್ನೆಟ್ ಫೋನ್ ಕರೆ ಪತ್ತೆ ಹಚ್ಚುವುದು ಕ್ಲಿಷ್ಟಕರ ಹಾಗೂ ಸವಾಲಿನ ಸಂಗತಿ. ನ್ಯಾಯಾಧೀಶರೇ ದೂರು ನೀಡಿರುವ ಹಿನ್ನೆಲೆಯಲ್ಲಿ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ ದೆಹಲಿ ಪೊಲೀಸರು ಕೊನೆಗೂ ಆರೋಪಿಯನ್ನು ಬಂಧಿಸಿದ್ದಾರೆ. ಶ್ರೀನಿವಾಸ್ ಎಷ್ಟೇ ಚಳ್ಳೆಹಣ್ಣು ತಿನ್ನಿಸಿದರೂ ಕೊನೆಗೆ ಪೊಲೀಸರು ಬೀಸಿದ ಬಲೆಗೆ ಬಿದ್ದಿದ್ದಾನೆ.

ಕಿಡಿಗೇಡಿಗಳಿಂದ ಮತ್ತೊಮ್ಮೆ ರಾಷ್ಟ್ರ ಮಟ್ಟದಲ್ಲಿ ಸುದ್ದಿಯಾದ ಮೈಸೂರು

ಮೈಸೂರು, ಮಾ.28(ಬಿಎಲ್‌ಯು)- ಇಡೀ ದೇಶವೇ ಬೆಚ್ಚಿ ಬೀಳುವ ಕಿಡಿಗೇಡಿ ಕೃತ್ಯದಲ್ಲಿ ಸಾಂಸ್ಕೃತಿಕ ನಗರಿ ಮತ್ತೊಮ್ಮೆ ರಾಷ್ಟ್ರ ಮಟ್ಟದಲ್ಲಿ ಸುದ್ಧಿಯಾಗಿದೆ. ಒಂದು ಕಾಲದಲ್ಲಿ ಒಳ್ಳೆಯ ವಿಚಾರಕ್ಕೆ ಹೆಸರಾಗುತ್ತಿದ್ದ ಮೈಸೂರು ಈಗ ಕ್ರಿಮಿನಲ್‌ಗಳ ಆವಾಸತಾಣವೆಂದು ಸುದ್ಧಿಯಾಗುತ್ತಿದೆ.

ಮೈಸೂರಿನ ವಿಜಯನಗರ 2ನೇ ಹಂತದ ವಾಸಿ ಡಿ.ಮನೋರಂಜನ್ ಡಿಸೆಂಬರ್ 13, 2023ರಂದು ತನ್ನ ಸಹಚರರೊಂದಿಗೆ ಅಧಿವೇಶನ ನಡೆಯುತ್ತಿದ್ದ ವೇಳೆಯೇ ಪಾರ್ಲಿಮೆಂಟ್ ಒಳಗೆ ನುಗ್ಗಿ ಸ್ಮೋಕ್ ಬಾಂಬ್ ಸಿಡಿಸಿದ್ದರು.

ದೇಶದ ಶಕ್ತಿ ಕೇಂದ್ರವಾದ ಪಾರ್ಲಿಮೆಂಟ್‌ನಲ್ಲಿ ಭದ್ರತಾ ವ್ಯವಸ್ಥೆಯನ್ನು ಅಣಕಿಸುವಂತೆ ಸ್ಮೋಕ್ ಬಾಂಬ್ ಸ್ಫೋಟಿಸಿದ ಪ್ರಕರಣ ಅಂದು ಇಡೀ ದೇಶದಲ್ಲೆ ಭಾರೀ ಸದ್ದು ಮಾಡಿತು. ಮೈಸೂರಿನ ಡಿ.ಮನೋರಂಜನ್ ಇದರ ಮಾಸ್ಟರ್ ಮೈಂಡ್ ವಿಚಾರ ಬೆಳಕಿಗೆ ಬಂದಾಗ ಅರಮನೆ ನಗರಿ ಮೈಸೂರು ಇಡೀ ದೇಶದಲ್ಲೇ ಭಾರೀ ಸುದ್ಧಿಯಾಯಿತು.

ಮೈಸೂರಿನವನೇ ಆದ ಶ್ರೀನಿವಾಸ್ ಅಲಿಯಾಸ್ ಶ್ರೀನಿವಾಸ್ ಲೂಯಿಸ್ ಸರದಿ. ಈತ ದೇಶವ್ಯಾಪಿ ಹುಸಿ ಬಾಂಬ್ ಬೆದರಿಕೆ ಹಾಕಿ, ಭೀತಿ ಹುಟ್ಟಿಸುತ್ತಿದ್ದ.

ಹಲವು ರಾಜ್ಯಗಳ ವಿಧಾನಸಭೆಗಳು, ಕೋರ್ಟ್, ಸರ್ಕಾರಿ ಕಚೇರಿ, ಶಾಲಾ-ಕಾಲೇಜುಗಳಿಗೆ ಬಾಂಬ್ ಬೆದರಿಕೆ ಹಾಕಿ ಭಯ ಹುಟ್ಟಿಸಿದ್ದ. ಮೈಸೂರಿನ ಬೃಂದಾವನ ಬಡಾವಣೆ 2ನೇ ಹಂತದ ವಾಸಿ ಶ್ರೀನಿವಾಸ್‌ನನ್ನು ದೆಹಲಿ ಪೊಲೀಸರು ಬಂಧಿಸಿದ್ದಾರೆ. ಮೈಸೂರಿನಂತಹ ಶಾಂತಿಪ್ರಿಯರ, ನಿವೃತ್ತಿದಾರರ ಸ್ವರ್ಗದಲ್ಲಿ ಕುಳಿತು ಶ್ರೀನಿವಾಸ್ ಕಿಡಿಗೇಡಿ ಕೆಲಸ ಮಾಡಿ, ಸಾಂಸ್ಕೃತಿಕ ನಗರಿಗೆ ಕೆಟ್ಟ ಹೆಸರು ತರುವ ಕೃತ್ಯವೆಸಗಿದ್ದಾನೆ. ಇದರ ಬೆನ್ನಲ್ಲೆ ಮುಂಬೈ ಸಂಪರ್ಕ ಹೊಂದಿರುವ ಡ್ರಗ್ಸ್ ಜಾಲ ಮೈಸೂರಿನಲ್ಲಿ ಗಟ್ಟಿಯಾಗಿ ಬೇರೂರಿದೆ. ಕಳೆದ ಕೆಲವು ತಿಂಗಳ ಹಿಂದೆ ಮೈಸೂರಿನ ರಿಂಗ್ ರಸ್ತೆಯಲ್ಲಿ 390 ಕೋಟಿ ಮೌಲ್ಯದ ಡ್ರಗ್ಸ್ ಅನ್ನು ಮುಂಬೈ ಪೊಲೀಸರು ವಶಪಡಿಸಿಕೊಂಡಿದ್ದರು.

ಇತ್ತೀಚಿಗೆ ಹೆಬ್ಬಾಳು ಕೈಗಾರಿಕಾ ಕೇಂದ್ರದ ಡ್ರಗ್ಸ್ ತಯಾರಿಕಾ ಜಾಲವನ್ನು ದೆಹಲಿ ಪೊಲೀಸರು ಭೇದಿಸಿದ್ದರು. ಅಲ್ಲದೆ ಯಾಂದಳ್ಳಿಯಲ್ಲಿ ಕೂಡ ಡ್ರಗ್ಸ್ ತಯಾರಿಕಾ ಘಟಕವನ್ನು ಸ್ಥಳೀಯ ಪೊಲೀಸರು ಪತ್ತೆ ಮಾಡಿದ್ದರು. ನಿನ್ನೆ ರಾತ್ರಿ ಹುಣಸೂರಿನಲ್ಲಿ 12 ಕೋಟಿ ಮೌಲ್ಯದ ಡ್ರಗ್ಸ್ ದೊರೆತಿದೆ. ಹೀಗೆ ಮೈಸೂರಿನಲ್ಲಿ ದೇಶವೇ ಬೆಚ್ಚುಬೀಳುವಂತಹ ಕ್ರಿಮಿನಲ್ ಪ್ರಕರಣಗಳು ಬಯಲಾಗುತ್ತಿದ್ದು, ಮೈಸೂರು ಜನರು ಆತಂಕಕ್ಕೀಡಾಗಿದ್ದಾರೆ.

ರಾಮ ಸೀತೆ ವೇಷಧರಿಸಿ ರಾಮನವಮಿ ಕಳೆ ಹೆಚ್ಚಿಸಿದ ಮುದ್ದು ಮಕ್ಕಳು

ಸತ್ಯ, ತಾಳ್ಮೆ, ಧರ್ಮದ ಪ್ರತೀಕ: ಶಾಸಕ ಟಿ.ಎಸ್.ಶ್ರೀವತ್ಸ



ಮೈಸೂರು,ಮಾ.28–ಶ್ರೀರಾಮ ಸತ್ಯ, ತಾಳ್ಮೆ ಮತ್ತು ಧರ್ಮದ ಪ್ರತೀಕ. ಆತನ ಜೀವನದ ಆದರ್ಶಗಳನ್ನು ಪಾಲಿಸುವುದು ರಾಮನವಮಿಯ ಮುಖ್ಯ ಉದ್ದೇಶ ಎಂದು ಶಾಸಕ ಟಿ.ಎಸ್.ಶ್ರೀವತ್ಸ ಹೇಳಿದರು

ನಗರದ ಕೃಷ್ಣಮೂರ್ತಿಪುರಂನಲ್ಲಿರುವ ಶ್ರೀರಾಮ ಮಂದಿರದಲ್ಲಿ ಕಲಾ ಉತ್ಸವ ಟ್ರಸ್ಟ್ ಮೈಸೂರು, ಶ್ರೀ ಮಹಾಜನ ಸಭಾ ಟ್ರಸ್ಟ್ ಶ್ರೀರಾಮಮಂದಿರ ವತಿಯಿಂದ ಶ್ರೀ ರಾಮನವಮಿ ಅಂಗವಾಗಿ ಆಯೋಜಿಸಿದ್ದ ಮಕ್ಕಳಿಗಾಗಿ ಶ್ರೀರಾಮ ಹಾಗೂ ಸೀತೆ ವೇಷಭೂಷಣ ಸ್ಪರ್ಧೆ ಉದ್ಘಾಟಿಸಿ ಮಾತನಾಡಿದ ಅವರು, ಪ್ರಸ್ತುತ ಸಮಾಜದಲ್ಲಿ ಶಾಂತಿ ಒಗ್ಗಟ್ಟು ಉಳಿಯಲು ರಾಮ ರಾಜ್ಯದ ಕಲ್ಪನೆ ಅಗತ್ಯವಿದೆ ರಾಮನವಮಿ ದಿನ ಮಾತ್ರವಲ್ಲದೆ ನಿತ್ಯ ರಾಮನ ಜಪಿಸುವುದರಿಂದ ಬದುಕು ಹಸನಾಗಲಿದೆ. ಇದು ರಾಮನ ಜನ್ಮದಿನ ಮಾತ್ರವಾಗಿರದೆ ವ್ಯಕ್ತಿಯ ಜೀವನಕ್ಕೆ ಅಗತ್ಯವಿರುವ ಸತ್ಯ ಧರ್ಮದ ದಾರಿದೀಪವಾಗಿದೆ ಎಂದರು.

ಸ್ಪರ್ಧೆಯಲ್ಲಿ 50ಕ್ಕೂ ಹೆಚ್ಚು ಮಕ್ಕಳು ರಾಮ ಸೀತೆ ವೇಷಧರಿಸಿ ಸ್ಪರ್ಧಿಸಿದ ಮಕ್ಕಳಿಗೆ ಪ್ರಮಾಣ ಪತ್ರ, ನೆನಪಿನ ಕಾಣಿಕೆ ವಿತರಿಸಲಾಯಿತು. ಹಿರಿಯ ಸಮಾಜ ಸೇವಕ ರಘುರಾಂ ವಾಜಪೇಯಿ, ಕಾಂಗ್ರೆಸ್ ಮುಖಂಡರಾದ ಎನ್.ಎಂ.ನವೀನ್‌ಕುಮಾರ್, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ರಾಮಮಂದಿರದ ಮಾಧವರಾವ್, ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್, ಕಲ ಉತ್ಸವ ಟ್ರಸ್ಟ್ ಅಧ್ಯಕ್ಷ ಅಮಿತ್, ರಾಘವೇಂದ್ರ, ಜಗದೀಶ್, ಬಾಲಕೃಷ್ಣ, ಅರುಣ್, ಚಕ್ರಪಾಣಿ, ಪುರುಷೋತ್ತಮ್, ಕೃಷ್ಣ, ಸುಚೇಂದ್ರ, ರಾಜೇಶ್, ರಾಕೇಶ್, ದುರ್ಗಾ ಪ್ರಸಾದ್, ಶಿವು ಇನ್ನಿತರರು ಹಾಜರಿದ್ದರು


ಮೈಸೂರು ವಿವಿ ವ್ಯವಹಾರ ನಿರ್ವಹಣಾ ವಿಭಾಗದ ಸುವರ್ಣ ಮಹೋತ್ಸವ; ಹಳೇ ವಿದ್ಯಾರ್ಥಿಗಳ ಸಮ್ಮಿಲನ

ನಿವೃತ್ತಿ ಹೊಂದಲಿರುವ ವಿಭಾಗದ ಪ್ರಾಧ್ಯಾಪಕ ಪ್ರೊ.ಆನಂದ್‌ರಿಗೆ ಅಭಿನಂದನೆ

ಮೈಸೂರು,ಮಾ.28(ಎಂಟಿವೈ)– ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಭವನದಲ್ಲಿ ನಡೆದ ಮೈಸೂರು ವಿವಿ ವ್ಯವಹಾರ ನಿರ್ವಹಣೆ ಅಧ್ಯಯನ ವಿಭಾಗದ ಸುವರ್ಣ ಮಹೋತ್ಸವ ಕಾರ್ಯಕ್ರಮ, ಇದರಲ್ಲಿ ಅಧ್ಯಯನ ಮಾಡಿದ ಹಳೆಯ ವಿದ್ಯಾರ್ಥಿಗಳ ಸಮ್ಮಿಲನಕ್ಕೆ ಸಾಕ್ಷಿಯಾಯಿತು.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ 50 ವರ್ಷದ ಹಿಂದೆ ಆರಂಭವಾದ ವ್ಯವಹಾರ ನಿರ್ವಹಣೆ ವಿಭಾಗವು ಈಗ ಬಿ.ಎನ್. ಬಹದ್ದೂರ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸೈನ್ಸ್(ಬಿಮ್ಸ್) ಸಂಸ್ಥೆಯಾಗಿ ರೂಪುಗೊಂಡಿದೆ. ಈ ವಿಭಾಗದ ರೂಪದೊಂದಿಗೆ ಸುವರ್ಣ ಮಹೋತ್ಸವ ಹಾಗೂ ನಿವೃತ್ತರಾಗುತ್ತಿರುವ ವಿಭಾಗದ ಹಿರಿಯ ಪ್ರಾಧ್ಯಾಪಕ ಪ್ರೊ.ಡಿ.ಆನಂದ್ ಅವರಿಗೆ ಸನ್ಮಾನ ಕಾರ್ಯಕ್ರಮವನ್ನು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಶತಮಾನದ ಇತಿಹಾಸವುಳ್ಳ ಮೈಸೂರು ವಿಶ್ವವಿದ್ಯಾನಿಲಯದ ಒಂದು ವಿಭಾಗವಾದ ವ್ಯವಹಾರ ನಿರ್ವಹಣಾ ಸಂಸ್ಥೆಗೆ 50 ವರ್ಷ ಸಂದಿರುವುದು ಶ್ಲಾಘನೀಯ. ಈ ವಿಭಾಗದ ಸುವರ್ಣ ಮಹೋತ್ಸವದಲ್ಲಿ ಹಳೆಯ ವಿದ್ಯಾರ್ಥಿಗಳು ಪಾಲ್ಗೊಂಡಿದ್ದು, ಐತಿಹಾಸಿಕ ಕ್ಷಣವಾಗಿದೆ. 1974ರಲ್ಲಿ ಈ ವಿಭಾಗದ ಸ್ಥಾಪನೆಯಾಗಿದ್ದು, ಇದುವರೆಗೆ ಸಾವಿರಾರು ಸಂಪನ್ಮೂಲ ವ್ಯಕ್ತಿಗಳನ್ನು ಕೊಡುಗೆ ನೀಡಿದೆ. ದೂರದರ್ಶಿತ್ವ ಹಾಗೂ ಶ್ರೇಷ್ಠತೆಯ ಗುರಿಯೊಂದಿಗೆ ಸ್ಥಾಪಿತವಾಗಿರುವ ಈ ವಿಭಾಗ ನಿರ್ವಹಣಾ ಕ್ಷೇತ್ರದ ಶಿಕ್ಷಣವನ್ನು ಪರಿಣಾಮಕಾರಿಯಾಗಿ ನೀಡುತ್ತಾ ಬಂದಿರುವುದು ಹೆಮ್ಮೆ ಪಡುವ ಸಂಗತಿ ಎಂದರು.



ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಭವನದಲ್ಲಿ ನಡೆದ ಮೈಸೂರು ವಿವಿಯ ವ್ಯವಹಾರ ನಿರ್ವಹಣಾ ವಿಭಾಗದ (ಹಾಲಿ ಬಿ.ಎನ್.ಬಹದ್ದೂರ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸೈನ್ಸ್ ಸಂಸ್ಥೆ) ಸುವರ್ಣ ಮಹೋತ್ಸವ ಕಾರ್ಯಕ್ರಮದಲ್ಲಿ ನಿವೃತ್ತಿ ಹೊಂದಿರುವ ಹಿರಿಯ ಪ್ರಾಧ್ಯಾಪಕ ಪ್ರೊ.ಡಿ.ಆನಂದ್ ಅವರನ್ನು ಸನ್ಮಾನಿಸಲಾಯಿತು.

ಈಗ ಬಿ.ಎನ್.ಬಹದ್ದೂರ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ (ಬಿಮ್ಸ್) ರೂಪ ತಾಳಿರುವ ವಿಭಾಗ ಉದ್ಯಮ ಕ್ಷೇತ್ರ ಮತ್ತು ಸಮಾಜಕ್ಕೆ ಅಪಾರವಾದ ಕೊಡುಗೆ ನೀಡುತ್ತಾ ಬಂದಿದೆ. ಅನೇಕ ನಾಯಕರು, ಚಿಂತಕರ ಸೃಷ್ಟಿಗೂ ಕೊಡುಗೆ ನೀಡಿದೆ. ವಿಭಾಗದ ಹಳೆಯ ವಿದ್ಯಾರ್ಥಿಯಾಗಿರುವ ಬ್ರಿಗೇಡ್ ಗ್ರೂಪ್‌ನ ಎಂ.ಆರ್.ಜೈಶಂಕರ್, ನಿರ್ಮಾಣ ಸಂಸ್ಥೆಯನ್ನು ಯಶಸ್ವಿಯಾಗಿ ಮುನ್ನಡೆಸುತ್ತಾ ಬಂದಿದ್ದು, ಸುವರ್ಣ ಮಹೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವುದು ಸಂತಸ ತಂದಿದೆ. ಅವರ ಉಪಸ್ಥಿತಿ ಇಂದಿನ ವಿದ್ಯಾರ್ಥಿಗಳಿಗೆ ಸ್ಫೂರ್ತಿದಾಯಕ ವಾಗಿದೆ. ಸುವರ್ಣ ಮಹೋತ್ಸವವು ಒಂದು ಆಚರಣೆಯಷ್ಟೇ ಅಲ್ಲದೆ ಆತ್ಮಾವಲೋಕನದ ಕ್ಷಣವೂ ಆಗಿದೆ. ಈ ಸಂಸ್ಥೆಯನ್ನು ಕಟ್ಟಿದ ದೂರದೃಷ್ಟಿಯ ನಾಯಕರು, ಸಮರ್ಪಿತ ಅಧ್ಯಾಪಕರು, ಸಿಬ್ಬಂದಿಯ ಕೊಡುಗೆಗಳನ್ನು ಕೃತಜ್ಞತೆಯಿಂದ ನೆನಪಿಸಿಕೊಳ್ಳುವ ಕಾರ್ಯಕ್ರಮವಾಗಿದೆ ಎಂದು ಅಭಿಪ್ರಾಯಪಟ್ಟರು.

ಸಂಸ್ಥೆಯ ಹಿರಿಯ ಪ್ರಾಧ್ಯಾಪಕರಾಗಿರುವ ಪ್ರೊ.ಡಿ.ಆನಂದ್ ನಿವೃತ್ತಿ ಹೊಂದುತ್ತಿರುವ ಸಂದರ್ಭದಲ್ಲಿ ಅವರಿಗೆ ಸನ್ಮಾನ ಮಾಡುತ್ತಿರುವುದು ಒಳ್ಳೆ ವಿಚಾರ. ನಾಲ್ಕು ದಶಕಗಳಿಂದ ಪ್ರೊ. ಆನಂದ್ ಈ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ. ಅಲ್ಲದೆ, ಸಂಸ್ಥೆಯ ಏಳಿಗೆಯಲ್ಲಿ ಅವಿಭಾಜ್ಯ ಅಂಗವಾಗಿದ್ದಾರೆ. ಅವರ ಬುದ್ಧಿವಂತಿಕೆ, ಶಿಸ್ತು ಮತ್ತು ಶ್ರೇಷ್ಠತೆ, ಅಚಲ ಬದ್ಧತೆಯಿಂದ ಹಲವು ಬ್ಯಾಚ್‌ಗಳ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ದೊರೆತಿದೆ. ಇದರಿಂದ ಆತ್ಮವಿಶ್ವಾಸದಿಂದ ಅನೇಕರು ವೃತ್ತಿಪರರಾಗಿ ಹೊರಹೊಮ್ಮಿದ್ದಾರೆ ಎಂದರು.

ಸಂಸ್ಥೆಯ ಹಳೆಯ ವಿದ್ಯಾರ್ಥಿಯೂ ಆದ ಬ್ರಿಗೇಡ್ ಗ್ರೂಪ್ ಸಂಸ್ಥಾಪಕ ಎಂ.ಆರ್. ಜೈಶಂಕರ್ ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ 1974ರಲ್ಲಿ ವ್ಯವಹಾರ ನಿರ್ವಹಣಾ ವಿಭಾಗ ಸ್ಥಾಪಿಸಲಾಯಿತು. ಆ ವಿಭಾಗದ ಮೊದಲ ಬ್ಯಾಚ್ ವಿದ್ಯಾರ್ಥಿ ನಾನಾಗಿದ್ದೆ. ರೈತ ಕುಟುಂಬದಿಂದ ಬಂದ ನಾನು ಈ ವಿಭಾಗಕ್ಕೆ ಕಾರ್ಪೊರೇಟ್ ಕೋಟಾದಲ್ಲಿ ದಾಖಲಾಗಿದ್ದೆ. ವಿದ್ಯಾರ್ಥಿ ದೆಸೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಗ್ರಂಥಾಲಯ, ಕ್ಯಾಂಟೀನ್, ಹಾಸ್ಟೆಲ್ ಸೇರಿದಂತೆ ವಿವಿಧೆಡೆ ಓಡಾಡಿದ ನೆನಪು, ಸಹಪಾಠಿಗಳು, ಪ್ರಾಧ್ಯಾಪಕರೊಂದಿಗಿನ ಒಡನಾಟವನ್ನು ಸ್ಮರಿಸಿದರು. ಕಾರ್ಯಕ್ರಮದಲ್ಲಿ ನಿವೃತ್ತ ಹಿರಿಯ ಪ್ರಾಧ್ಯಾಪಕ ಪ್ರೊ.ಬಿ. ಶಿವರಾಜ್, ಬಿಮ್ಸ್ ಹಣಕಾಸು ಅಧಿಕಾರಿ ಪ್ರೊ.ಎಸ್.ಜೆ.ಮಂಜುನಾಥ್, ಕುಲಸಚಿವ ಪ್ರೊ.ಎನ್.ನಾಗರಾಜ್, ಬಿಮ್ಸ್ ಮುಖ್ಯಸ್ಥ ಪ್ರೊ.ಆರ್.ಮಹೇಶ್, ಪ್ರೊ.ಎಂ.ಅಮೂಲ್ಯ, ಪ್ರಧಾನ ಕಾರ್ಯದರ್ಶಿ ಸುಭಾಷ್ ಇದ್ದರು.

ಇಂದು ಉಪನಿರೀಕ್ಷಕ ಪ್ರಶಿಕ್ಷಣಾರ್ಥಿಗಳ ನಿರ್ಗಮನ ಪಥಸಂಚಲನ; ಸಿಎಂ ಭಾಗಿ

ಮೈಸೂರು, ಮಾ.28(ವಿವಿಹೆಚ್)– ಮೈಸೂರು ಕರ್ನಾಟಕ ಪೊಲೀಸ್ ಅಕಾಡೆಮಿಯ 46ನೇ ತಂಡದ ಪೊಲೀಸ್ ಉಪ ನಿರೀಕ್ಷಕರು (ಸಿವಿಲ್) ಪ್ರಶಿಕ್ಷಣಾರ್ಥಿಗಳ ನಿರ್ಗಮನ ಪಥಸಂಚಲನ ಕಾರ್ಯಕ್ರಮ ಭಾನುವಾರ ಬೆಳಿಗ್ಗೆ 8 ಗಂಟೆಗೆ ನಡೆಯಲಿದ್ದು, ಸಿಎಂ ಸಿದ್ದರಾಮಯ್ಯ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ಕರ್ನಾಟಕ ಪೊಲೀಸ್ ಅಕಾಡೆಮಿಯ ಉಪನಿರ್ದೇಶಕ ಎಸ್.ಎಲ್.ಚನ್ನಬಸವಣ್ಣ ತಿಳಿಸಿದರು.

ನಗರದ ಕರ್ನಾಟಕ ಪೊಲೀಸ್ ಅಕಾಡೆಮಿ ಆವರಣದಲ್ಲಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆಪಿಎ ವತಿಯಿಂದ 46ನೇ ತಂಡದ ಪೊಲೀಸ್ ಉಪ ನಿರೀಕ್ಷಕರು(ಸಿವಿಲ್) ಪ್ರಶಿಕ್ಷಣಾರ್ಥಿಗಳ ನಿರ್ಗಮನ ಪಥಸಂಚಲನ ಕಾರ್ಯಕ್ರಮವನ್ನು ನಾಳೆ ಬೆಳಗ್ಗೆ 8 ಗಂಟೆಗೆ ಅಕಾಡೆಮಿಯ ಕವಾಯತು ಮೈದಾನದಲ್ಲಿ ಆಯೋಜಿಸಲಾಗಿದೆ ಎಂದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭಾಗವಹಿಸಲಿದ್ದಾರೆ. ಗೃಹ ಸಚಿವ ಡಾ.ಜಿ.ಪರಮೇಶ್ವರ ಕಾರ್ಯಕ್ರಮದ ಅಧ್ಯಕ್ಷತೆ ಯನ್ನು ವಹಿಲಿದ್ದಾರೆ. ಪೊಲೀಸ್ ಮಹಾ ನಿರ್ದೇಶಕ ಮತ್ತು ಪೊಲೀಸ್ ಮಹಾ ನಿರೀಕ್ಷಕ ಡಾ.ಎಂ.ಎ. ಸಲೀಂ, ತರಬೇತಿ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ದೇವಜ್ಯೋತಿ ರೇ, ಕರ್ನಾಟಕ ಪೊಲೀಸ್ ಅಕಾಡೆಮಿಯ ಉಪ ಪೊಲೀಸ್ ಮಹಾನಿರೀಕ್ಷಕ ಎನ್.ವಿಷ್ಣುವರ್ಧನ ಕಾರ್ಯಕ್ರಮದಲ್ಲಿ ಉಪಸ್ಥಿತರಿರಲಿದ್ದಾರೆ ಎಂದು ಮಾಹಿತಿ ನೀಡಿದರು.

46ನೇ ತಂಡದಲ್ಲಿ 327 ಪೊಲೀಸ್ ಉಪ ನಿರೀಕ್ಷಕ ಪ್ರಶಿಕ್ಷಣಾರ್ಥಿಗಳಲ್ಲಿ 90 ಮಂದಿ ಮಹಿಳಾ ಪ್ರಶಿಕ್ಷಣಾರ್ಥಿಗಳು. ಉಳಿದಂತೆ 237 ಮಂದಿ ಪುರುಷ ಪ್ರಶಿಕ್ಷಣಾರ್ಥಿಗಳಿದ್ದಾರೆ. ಇವರಲ್ಲಿ ಒಬ್ಬರು ದಂತ ವೈದ್ಯ ಪದವಿ ಪಡೆದಿದ್ದರೆ, 56 ಮಂದಿ ವಿವಿಧ ಸ್ನಾತಕೋತ್ತರ ಪದವಿ ಹಾಗೂ ಉಳಿದ 143 ಮಂದಿ ವಿವಿಧ ಪದವಿ ಶಿಕ್ಷಣ ಪಡೆದವರಾಗಿದ್ದಾರೆ ಎಂದು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಪೊಲೀಸ್ ಅಕಾಡೆಮಿಯ ಡಿವೈಎಸ್ಪಿಗಳಾದ ಸಂದೇಶ್ ಕುಮಾರ್, ರೇಣುಕಾರಾಧ್ಯ, ಟಿ.ಕುಮಾರ್ ಹಾಗೂ ವೆಂಕಟೇಶ್ ಉಪಸ್ಥಿತರಿದ್ದರು.

ಯುಎಇ ಮೇಲೆ ಇರಾನ್ ವೈಮಾನಿಕ ದಾಳಿ

ನವದೆಹಲಿ: ಯುನೈಟೆಡ್ ಅರಬ್ ಎಮಿರೇಟ್ಸ್(ಯುಎಇ) ಕೈಗಾರಿಕಾ ಘಟಕದ ಮೇಲೆ ಇರಾನ್ ಶನಿವಾರ(ಮಾ. 28) ಕ್ಷಿಪಣಿ ಮತ್ತು ಡ್ರೋನ್ ದಾಳಿ ನಡೆಸಿದ ಪರಿಣಾಮ ಭಾರೀ ಅಗ್ನಿ ಅವಘಡ ಸಂಭವಿಸಿದ್ದು, ಘಟನೆಯಲ್ಲಿ ಐವರು ಭಾರತೀಯರಿಗೆ ಗಂಭೀರ ಗಾಯಗಳಾಗಿವೆ ಎಂದು ವರದಿಯಾಗಿದೆ.

ಈ ಕುರಿತು ಮಾಹಿತಿ ನೀಡಿರುವ ಯುಎಇ ಸರ್ಕಾರಿ ಮಾಧ್ಯಮ ಕಚೇರಿ, ಇರಾನ್‌ನಿಂದ ಶನಿವಾರ ಮುಂಜಾನೆ ಕ್ಷಿಪಣಿ ಮತ್ತು ಡ್ರೋನ್ ದಾಳಿ ನಡೆಸಿದ್ದು, ಈ ದಾಳಿಯನ್ನು ನಮ್ಮ ವಾಯು ರಕ್ಷಣಾ ವ್ಯವಸ್ಥೆ ತಡೆದಿದೆ. ಆದರೆ ಈ ವೇಳೆ ಬಾಲಿಸ್ಟಿಕ್ ಕ್ಷಿಪಣಿಯ ಅವಶೇಷಗಳು ನೆಲಕ್ಕೆ ಬಿದ್ದ ಪರಿಣಾಮ ಕೈಗಾರಿಕಾ ವಲಯದಲ್ಲಿ ಬೆಂಕಿ ಹೊತ್ತಿಕೊಂಡಿದೆ. ತಕ್ಷಣವೇ ಅಗ್ನಿಶಾಮಕ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಬೆಂಕಿ ನಿಯಂತ್ರಿಸಿದ್ದಾರೆ. ಘಟನೆಯಲ್ಲಿ ಐವರು ಭಾರತೀಯರಿಗೆ ಸಣ್ಣಪುಟ್ಟ ಗಾಯಗಳಾಗಿವೆ.

ಹೌತಿ ಬಂಡುಕೋರರ ದಾಳಿ: ಮಧ್ಯ ಪ್ರಾಚ್ಯದ ಸಂಘರ್ಷ ಈಗ ಹೊಸ ಮತ್ತು ಅತ್ಯಂತ ಅಪಾಯಕಾರಿ ಹಂತಕ್ಕೆ ತಲುಪಿದ್ದು, ಹೌತಿ ಬಂಡುಕೋರರು ಇಸ್ರೇಲ್ ಮೇಲೆ ದಾಳಿ ನಡೆಸಲಾರಂಭಿಸಿದ್ದಾರೆ. ಇಷ್ಟು ದಿನ ಇರಾನ್ ಮತ್ತು ಹಿಜ್ಬುಲ್ಲಾ ಜೊತೆ ಕಾದಾಡುತ್ತಿದ್ದ ಇಸ್ರೇಲ್‌ಗೆ ಇದೀಗ ಯೆಮನ್‌ನ ಇರಾನ್ ಬೆಂಬಲಿತ ಹೌತಿ ಬಂಡುಕೋರರು ಸಂಕಷ್ಟ ತಂದೊಡ್ಡಿದ್ದಾರೆ. ಶನಿವಾರ ಮುಂಜಾನೆ ಯೆಮನ್‌ನಿಂದ ಇಸ್ರೇಲ್ ಗುರಿಯಾಗಿಸಿ ಕ್ಷಿಪಣಿ ದಾಳಿ ನಡೆದಿದ್ದು, ಯುದ್ಧದ ಕಾರ್ಮೋಡ ಕವಿದಿದೆ.

ಮೈಸೂರಲ್ಲಿ ಮಳೆ; ಎರಡು ಕಡೆ ಮುರಿದು ಬಿದ್ದ ಮರದ ಕೊಂಬೆ

ಮೈಸೂರು,ಮಾ.28(ಪಿಎಂ)– ನಗರದಲ್ಲಿ ಶನಿವಾರ ರಾತ್ರಿ ಜೋರು ಮಳೆಯಾಗಿದ್ದು, ಪರಿಣಾಮ ವೃತ್ತ ಹಾಗೂ ರಸ್ತೆಗಳು ಕೆಲಕಾಲ ಜಲಾವೃತಗೊಂಡಿದ್ದವು. ಅಲ್ಲದೆ, ಗಾಳಿ ಹಿನ್ನೆಲೆಯಲ್ಲಿ ರಸ್ತೆಬದಿ ಮರಗಳ ಸಣ್ಣ ರೆಂಬೆ ಕೊಂಬೆಗಳು ಅಲ್ಲಲ್ಲಿ ಬಿದ್ದಿದ್ದರೆ, ಎರಡು ಕಡೆ ತುಸು ದಪ್ಪದಾದ ಕೊಂಬೆಗಳು ರಸ್ತೆಗೆ ಬಿದ್ದ ಘಟನೆ ನಡೆದಿದೆ.

ಶನಿವಾರ ಸಂಜೆ ವೇಳೆಯಲ್ಲಿ ಮೋಡಕವಿದ ವಾತಾವರಣ ನಿರ್ಮಾಣವಾಗಿತ್ತು. ಮಧ್ಯಾಹ್ನ ಸುಡುಬಿಸಿಲು ಇದ್ದರೆ, ಈ ವೇಳೆಗಾಗಲೇ ತಣ್ಣನೆಯ ವಾತಾವರಣ ಮೂಡಿತ್ತು ಇದಾದ ಕೆಲ ತಾಸುಗಳಲ್ಲಿ ಮೈಸೂರು ನಗರದ ಹೃದಯ ಭಾಗ ಸೇರಿದಂತೆ ಬಹುತೇಕ ಭಾಗಗಳಲ್ಲಿ ಮಳೆಯಾಗಿದೆ. ತಡರಾತ್ರಿವರೆಗೂ ಮಳೆ ಮುಂದುವರೆದಿದ್ದು, ಬಿಸಿಲು ತಾಪದಿಂದ ಬಸವಳಿದ್ದ ನಗರದ ಜನತೆಯಲ್ಲಿ ತುಸು ನಿರಾಳತೆ ಮೂಡಿಸಿದೆ.

ರಸ್ತೆಗೆ ಬಿದ್ದ ಕೊಂಬೆ: ಮಳೆ ಗಾಳಿ ಹಿನ್ನೆಲೆಯಲ್ಲಿ ವಿಜಯನಗರದ ಮೂರನೇ ಹಂತದಲ್ಲಿ ಮರದ ಕೊಂಬೆಯು ಮನೆಯೊಂದ ಮುಂದೆಯೇ ರಸ್ತೆಯಲ್ಲಿ ಬಿದ್ದಿದ್ದು, ಯಾರಿಗೂ ಯಾವುದೇ ಅಪಾಯವಾಗಿಲ್ಲ. ಈ ಕುರಿತು ಮಾಹಿತಿ ನೀಡಿದ ಪಾಲಿಕೆ ಅಭಯ ತಂಡದವರು ಸೆಸ್ಕ್‌ನವರು ಬೆಳಗ್ಗೆ ವಿದ್ಯುತ್ ನಿಲುಗಡೆ ಮಾಡುತ್ತೇವೆ ಎಂದ ಹಿನ್ನೆಲೆಯಲ್ಲಿ ಈ ಮರದ ಕೊಂಬೆ ಸದ್ಯ ತೆರವುಗೊಳಿಸಲು ಸಾಧ್ಯವಾಗಿಲ್ಲ ಎಂದು ತಿಳಿಸಿದರು.



ಕುವೆಂಪುನಗರದಲ್ಲಿ ಮರದ ಕೊಂಬೆ ತೆರವು ಮಾಡುತ್ತಿರುವ ಅಭಯ ಸಿಬ್ಬಂದಿ.

ಅಭಯ ತಂಡದಿಂದ ತೆರವು: ಮತ್ತೊಂದು ಮರದ ಕೊಂಬೆ ಕುವೆಂಪು ನಗರದ ಉದಯರವಿ ರಸ್ತೆಯಲ್ಲಿ ಬಿದ್ದಿತ್ತು. ಕೂಡಲೇ ಸ್ಥಳಕ್ಕೆ ಭೇಟಿ ನೀಡಿದ ಪಾಲಿಕೆಯ ಅಭಯದ ಎ1 ಮತ್ತು ಎ3 ತಂಡಗಳು ತೆರವುಗೊಳಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟರು. ಇಲ್ಲಿಯೂ ಯಾರಿಗೂ ಅಪಾಯವಾಗಿಲ್ಲ ಎಂದು ಅಭಯ ತಂಡದವರು ಮಾಹಿತಿ ನೀಡಿದರು.

ಕಾಂಗ್ರೆಸ್ ಮೊದಲು ಲೂಟಿ ನಿಲ್ಲಿಸಿ, ಬುದ್ಧಿ ಹೇಳಲಿ!

ವಿಪಕ್ಷ ನಾಯಕ ಆರ್.ಅಶೋಕ್ ವಾಗ್ದಾಳಿ

ಬೆಂಗಳೂರು, ಮಾ.28(ಕೆಎಂಶಿ)– ಗ್ಯಾರಂಟಿ ವೈಫಲ್ಯ ಮುಚ್ಚಿಕೊಳ್ಳಲು ಪೆಟ್ರೋಲ್, ಡೀಸೆಲ್ ದರ ಏರಿಕೆಯನ್ನು ಎಟಿಎಂ ಮಾಡಿಕೊಂಡಿರುವ ರಾಜ್ಯ ಕಾಂಗ್ರೆಸ್ ಸರ್ಕಾರ ಮೊದಲು ತೆರಿಗೆ ಲೂಟಿ ನಿಲ್ಲಿಸಿ, ನಂತರ ಬೇರೆಯವರಿಗೆ ಬುದ್ಧಿ ಹೇಳಲಿ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಇಂದಿಲ್ಲಿ ತಿರುಗೇಟು ನೀಡಿದ್ದಾರೆ.

ಈ ಸಂಬಂಧ ಟ್ವೀಟ್ ಮಾಡಿರುವ ಅವರು, ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳ ಕುರಿತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿಕೆಗಳು ಅತ್ಯಂತ ಹಾಸ್ಯಾಸ್ಪದ ಮತ್ತು ವಿಪರ್ಯಾಸದಿಂದ ಕೂಡಿವೆ. ಕೇಂದ್ರ ಸರ್ಕಾರದತ್ತ ಬೆರಳು ತೋರಿಸುವ ಮುನ್ನ, ತಮ್ಮದೇ ಕಾಂಗ್ರೆಸ್ ಸರ್ಕಾರ ಕನ್ನಡಿಗರ ಜೇಬಿಗೆ ಹೇಗೆ ಕತ್ತರಿ ಹಾಕುತ್ತಿದೆ ಎಂಬುದಕ್ಕೆ ಉತ್ತರಿಸಬೇಕು ಎಂದಿದ್ದಾರೆ.

ಮೇ 2023ರಲ್ಲಿ ಅಧಿಕಾರಕ್ಕೆ ಬಂದಾಗಿನಿಂದ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಜೋಡಿ ಜನಸಾಮಾನ್ಯರ ಹೊಟ್ಟೆ ಮೇಲೆ ಹೊಡೆದು ಲೂಟಿ ಮಾಡುತ್ತಿದ್ದಾರೆ. ಜೂನ್ 2024ರಲ್ಲಿ ಪೆಟ್ರೋಲ್ ಬೆಲೆ ಸುಮಾರು 3 ರೂ., ಡೀಸೆಲ್ ಬೆಲೆ 3.5 ರೂ. ಹೆಚ್ಚಿಸಿದ ಕಾಂಗ್ರೆಸ್ ಸರ್ಕಾರ, ಏಪ್ರಿಲ್ 2025ರಲ್ಲಿ ಮತ್ತೆ ಡೀಸೆಲ್ ಬೆಲೆ ಪ್ರತಿ ಲೀಟರ್‌ಗೆ 2 ರೂ. ಹೆಚ್ಚಿಸಿತು. ಒಟ್ಟಾರೆಯಾಗಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ಕರ್ನಾಟಕದಲ್ಲಿ ಡೀಸೆಲ್ ಬೆಲೆ ಬರೋಬ್ಬರಿ 5.5 ರೂ. ಹೆಚ್ಚಾಗಿದೆ. ಇದು ಅಂತರಾಷ್ಟ್ರೀಯ ಮಾರುಕಟ್ಟೆ ಪರಿಣಾಮದ ಏರಿಳಿತವಲ್ಲ, ಬದಲಿಗೆ ರಾಜ್ಯ ಸರ್ಕಾರದ ತೆರಿಗೆ ದಾಹದಿಂದ ಏರಿರುವ ಬೆಲೆ. ರಾಜ್ಯ ಸರ್ಕಾರದ ತೆರಿಗೆ ದಾಹದಿಂದ ರೈತರು, ವಾಹನ ಸವಾರರು ಮತ್ತು ಜನಸಾಮಾನ್ಯರಿಗೆ ನೀಡುತ್ತಿರುವ ಈ ಶಿಕ್ಷೆಗೆ ಉತ್ತರ ನೀಡಬೇಕು ಎಂದಿದ್ದಾರೆ.

> “ರಾಜಕೀಯ ಲಾಭಕ್ಕಾಗಿ ಕಾಂಗ್ರೆಸ್ ಮಾಡಿದ ಸಾಲವನ್ನು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರ ತೀರಿಸುತ್ತಿದೆ. ಇದು ವರೆಗೆ ಅಸಲು ಮತ್ತು ಬಡ್ಡಿ ಸೇರಿ 1.5 ಲಕ್ಷ ಕೋಟಿ ರೂ.ಗೂ ಹೆಚ್ಚು ನಿಮ್ಮ ಹಳೆಯ ಸಾಲ ಪಾವತಿಸಲಾಗಿದೆ. ಅಂದು ನೀವು ಮಾಡಿದ ಮೋಜಿನ ಬಿಲ್ ಇಂದಿನ ತೆರಿಗೆದಾರರು ಪಾವತಿಸುವಂತಾಗಿದೆ.
> –ಆರ್.ಅಶೋಕ್, ವಿಪಕ್ಷ ನಾಯಕ



ಕೇಂದ್ರ ಸರ್ಕಾರದ ತೆರಿಗೆ ಹಣ ಎಲ್ಲಿ ಹೋಗುತ್ತಿದೆ ಎಂಬುದಾಗಿ ಪ್ರಶ್ನಿಸಿರುವ ಶಿವಕುಮಾರ್, ತಮ್ಮ ಪಕ್ಷದ ಇತಿಹಾಸ ಮರೆತಂತೆ ತೋರುತ್ತದೆ. ಕೇಂದ್ರದಲ್ಲಿ ಯುಪಿಎ ಆಡಳಿತಾವಧಿಯಲ್ಲಿ ಸೋನಿಯಾ ಗಾಂಧಿ ಮತ್ತು ಪ್ರಧಾನಿ ಡಾ.ಮನ್ಮೋಹನ್ ಸಿಂಗ್ ಸರ್ಕಾರ 2005 ರಿಂದ 2010ರವರೆಗೆ 1.34 ಲಕ್ಷ ಕೋಟಿ ರೂ. ಮೌಲ್ಯದ ಆಯಿಲ್ ಬಾಂಡ್‌ಗಳನ್ನು ಬಿಡುಗಡೆ ಮಾಡಿತ್ತು ಎಂದರು.

ಕೇಂದ್ರ ಸರ್ಕಾರ ಏಪ್ರಿಲ್ 2025ರಲ್ಲಿ ಅಬಕಾರಿ ಸುಂಕ ಮಾರ್ಪಾಡು ಮಾಡಿದಾಗ, ಜನಸಾಮಾನ್ಯರ ಮೇಲೆ ಹೊರೆ ಬೀಳದಂತೆ ತೈಲ ಕಂಪನಿಗಳೇ ಭರಿಸುವಂತೆ ನೋಡಿಕೊಂಡಿತು, ಆದರೆ, ಕರ್ನಾಟಕ ಕಾಂಗ್ರೆಸ್ ಸರ್ಕಾರ ತೆರಿಗೆ ಏರಿಸಿದಾಗಲೆಲ್ಲಾ ನೇರ ಹೊರೆ ಬಡವರ ಮೇಲೆ ಬೀಳುತ್ತಿದೆ. ಇದೀಗ ಕೇಂದ್ರ ಸರ್ಕಾರ ತೆರಿಗೆಯಲ್ಲಿ ಶೇ.10ರಷ್ಟು ಕಡಿತಗೊಳಿಸಿ ಜನರಿಗೆ ದೊಡ್ಡಮಟ್ಟದ ನೆರವು ನೀಡಿದೆ, ರಾಜ್ಯ ಸರ್ಕಾರ ಕನಿಷ್ಠ 10 ಪೈಸೆಯನ್ನೂ ಕಡಿಮೆ ಮಾಡುವ ಮನಸ್ಸು ಮಾಡಿಲ್ಲ. ನಿಮಗೆ ನಿಜವಾಗಿ ಬಡವರ ಬಗ್ಗೆ ಕಾಳಜಿ ಇದ್ದರೆ. ಏರಿಸಿರುವ 5.5 ರೂ. ದರ ವಾಪಸ್ ಪಡೆಯಿರಿ. ಸುದ್ದಿಗೋಷ್ಠಿ ನಡೆಸಿ ಸುಳ್ಳು ಹೇಳುವುದು ನಾಯಕತ್ವವಲ್ಲ. ನಿಮ್ಮ ಹಿಟ್ ಅಂಡ್ ರನ್ ರಾಜಕೀಯ ಕರ್ನಾಟಕದ ಜನತೆಗೆ ಚೆನ್ನಾಗಿ ಅರ್ಥವಾಗಿದೆ ಎಂದಿದ್ದಾರೆ.

ಅಸ್ಸಾಂನಲ್ಲಿ ಆಡಳಿತ ಬದಲಾವಣೆ: ಡಿಕೆಶಿ ಭವಿಷ್ಯ



ಬೆಂಗಳೂರು,ಮಾ.28(ಕೆಎಂಶಿ)–ಅಸ್ಸಾಂನಲ್ಲಿ ಭ್ರಷ್ಟಾಚಾರ ಹೆಚ್ಚಾಗಿದ್ದು, ಕಳೆದ ಚುನಾವಣೆಯಲ್ಲಿ ಕೊಟ್ಟ ಭರವಸೆಗಳು ಈಡೇರಿಲ್ಲ. ಈ ಬಾರಿ ಆಡಳಿತ ಬದಲಾಗಲಿದೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

ಅಸ್ಸಾಂ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಉಸ್ತುವಾರಿ ಹೊತ್ತಿರುವ ಶಿವಕುಮಾರ್ ಆ ರಾಜ್ಯಕ್ಕೆ ತೆರಳುವ ಮುನ್ನ ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಅಸ್ಸಾಂ ಚುನಾವಣಾ ಪ್ರಚಾರಕ್ಕೆ ತೆರಳುತ್ತಿದ್ದು, ಕೇರಳಕ್ಕೂ ಹೋಗಬೇಕು. ಕರ್ನಾಟಕದಲ್ಲಿನ ಎರಡು ಕ್ಷೇತ್ರಗಳ ಉಪಚುನಾವಣೆ ಬಗ್ಗೆಯೂ ಗಮನಹರಿಸಬೇಕಿದೆ. ಅಸ್ಸಾಂನಲ್ಲಿ ಆಡಳಿತ ಕುಸಿದಿದೆ. ಅಲ್ಲಿನ ಜನ ಬದಲಾವಣೆ ಬಯಸಿದ್ದಾರೆ, ಕಳೆದ 10 ವರ್ಷಗಳಲ್ಲಿ ಪ್ರಗತಿ ಆಗಿಲ್ಲ. ಸಂಪುಟ ಪುನಾರಚನೆ ಬಳಿಕ ಅಸ್ಸಾಂ ಬಿಜೆಪಿಯಲ್ಲಿ ಆಂತರಿಕ ಕಲಹ ಹೆಚ್ಚಿದೆ. ಪಕ್ಷದಲ್ಲಿ ಯಾರೂ ಸಂತೋಷವಾಗಿಲ್ಲ. ತಮ್ಮ ಪಕ್ಷದಲ್ಲಿ ಅವಕಾಶವಿಲ್ಲ ಎಂಬ ಬೇಸರ ಅವರಲ್ಲಿದೆ ಎಂದರು.

ರಾಮನವಮಿ ಮೆರವಣಿಗೆ: ಗುಂಪು ಘರ್ಷಣೆ

ಕೋಲ್ಕತ್ತಾ: ಪಶ್ಚಿಮ ಬಂಗಾಳದ ಮುರ್ಶಿದಾಬಾದ್ ಜಿಲ್ಲೆಯ ಜಂಗೀಪುರದಲ್ಲಿ ಶುಕ್ರವಾರ ಸಂಜೆ ರಾಮನವಮಿ ಮೆರವಣಿಗೆಯ ವೇಳೆ ಎರಡು ಗುಂಪುಗಳ ನಡುವೆ ಘರ್ಷಣೆ ನಡೆದು, ಪರಿಸ್ಥಿತಿ ವಿಕೋಪಕ್ಕೆ ತಿರುಗಿದ ಘಟನೆ ನಡೆದಿದೆ.

ಮೆರವಣಿಗೆ ವೇಳೆ ನಡೆದ ವಾಗ್ವಾದ ಹಿಂಸಾಚಾರಕ್ಕೆ ತಿರುಗಿ, ಎರಡೂ ಕಡೆಯವರು ಪರಸ್ಪರ ಕಲ್ಲು ತೂರಿ ಆಸ್ತಿಪಾಸ್ತಿಗಳಿಗೆ ಹಾನಿ ಮಾಡಿದರು. ಸದ್ಯ ಆ ಪ್ರದೇಶದಲ್ಲಿ ಪರಿಸ್ಥಿತಿ ಬೂದಿ ಮುಚ್ಚಿದ ಕೆಂಡದಂತಿದೆ. ಸ್ಥಿತಿಯನ್ನು ನಿಯಂತ್ರಣಕ್ಕೆ ತರಲು ಭದ್ರತಾ ಪಡೆಗಳನ್ನು ನಿಯೋಜಿಸಿದ್ದು, ಈಗ ಪರಿಸ್ಥಿತಿ ನಿಯಂತ್ರಣದಲ್ಲಿದೆ. ಶಾಂತಿ ಕಾಪಾಡಲು ಪೊಲೀಸರು ಪ್ರದೇಶದಲ್ಲಿ ಗಸ್ತು ತಿರುಗುತ್ತಿದ್ದಾರೆ. ನಾವು ಪರಿಸ್ಥಿತಿಯನ್ನು ನಿಕಟವಾಗಿ ಗಮನಿಸುತ್ತಿದ್ದೇವೆ, ಹಿಂಸಾಚಾರದಲ್ಲಿ ಭಾಗಿಯಾಗಿರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುತ್ತೇವೆ. ಘಟನೆ ಪ್ರದೇಶಾದ್ಯಂತ ಭದ್ರತೆ ಹೆಚ್ಚಿಸಿದ್ದು, ನಿವಾಸಿಗಳು ಶಾಂತಿ ಕಾಪಾಡುವಂತೆ ಪೊಲೀಸರು ಮನವಿ ಮಾಡಿದ್ದಾರೆ.



ಮೈಸೂರು ಮಿತ್ರ

47ನೇ ವಾರ್ಷಿಕೋತ್ಸವ ಕಥಾ ಸ್ಪರ್ಧೆ

ನಿಮ್ಮ 'ಮೈಸೂರು ಮಿತ್ರ' ಪ್ರಾದೇಶಿಕ ದಿನ ಪತ್ರಿಕೆ 46 ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿ 47ನೇ ವರ್ಷಕ್ಕೆ ಕಾಲಿಡುತ್ತಿರುವ ಈ ಸುಸಂದರ್ಭದಲ್ಲಿ 16-04-2026 (ಗುರುವಾರ) ರಂದು ವರ್ಣರಂಜಿತ ಆಕರ್ಷಕ ವಿಶೇಷಾಂಕವನ್ನು ಹೊರತರಲಾಗುವುದು. ಇದರ ಅಂಗವಾಗಿ ಪ್ರತಿ ವರ್ಷದಂತೆ ಈ ಬಾರಿಯೂ ಕಥಾ ಸ್ಪರ್ಧೆ ಏರ್ಪಡಿಸಲಾಗಿದೆ. 'ಮೈಸೂರು ಮಿತ್ರ' ಪ್ರಸರಣ ಹೊಂದಿರುವ ಐದು ಜಿಲ್ಲೆಗಳ (ಮೈಸೂರು, ಚಾಮರಾಜನಗರ, ಕೊಡಗು, ಮಂಡ್ಯ ಮತ್ತು ಹಾಸನ) ಪ್ರತಿಭಾವಂತ ಕಥೆಗಾರರ ಪ್ರೋತ್ಸಾಹಿಸಿ, ಬೆಳಕಿಗೆ ತರುವುದೇ ಈ ಸ್ಪರ್ಧೆಯ ಮೂಲ ಉದ್ದೇಶ.

ಉತ್ತಮವಾದ ಐದು ಕಥೆಗಳಿಗೆ ನಗದು ಬಹುಮಾನ

● ಪ್ರಥಮ ಬಹುಮಾನ	:	ರೂ. 8,000
● ದ್ವಿತೀಯ ಬಹುಮಾನ	:	ರೂ. 6,000
● ತೃತೀಯ ಬಹುಮಾನ	:	ರೂ. 4,000
● ಪ್ರೋತ್ಸಾಹಕ ಬಹುಮಾನಗಳು (ಎರಡು)	:	ರೂ. 2,500

ಸ್ಪರ್ಧೆಯ ನಿಯಮಗಳು

- ಒಬ್ಬರು ಒಂದೇ ಕಥೆಯನ್ನು ಕಳುಹಿಸಬೇಕು.
- ಕಥೆಯನ್ನು ಕಂಪ್ಯೂಟರ್‌ನಲ್ಲಿ ಟೈಪ್ ಮಾಡಿ news@mysurumithra.com ಗೆ ಇ-ಮೇಲ್ ಮಾಡಬಹುದು. ಇಲ್ಲವೆ ಅಂಚೆ ಮೂಲಕವೂ ಕಳಿಸಬಹುದು. ಕಥೆ ಐದು ಪುಟಗಳನ್ನು (ಒಂದೇ ಮಗ್ಗಲು) ಮೀರದಂತಿರಬೇಕು. ಅನುವಾದ-ರೂಪಾಂತರಗಳನ್ನು ಪರಿಗಣಿಸುವುದಿಲ್ಲ.
- ಸ್ಪರ್ಧಿಗಳು ಕಥೆಯ ಶಿರೋನಾಮೆ, ತಮ್ಮ ಹೆಸರು-ವಿಳಾಸ, ಪಾಸ್‌ಪೋರ್ಟ್ ಸೈಜಿನ ಭಾವಚಿತ್ರ ಮತ್ತು ಕಿರು ಪರಿಚಯವನ್ನು ಪ್ರತ್ಯೇಕ ಹಾಳೆಯಲ್ಲಿ ಸ್ಫುಟವಾಗಿ ಬರೆದು ಕಥೆಯೊಡನೆ ಲಗತ್ತಿಸಬೇಕು.
- ಸ್ಪರ್ಧೆಗೆ ಕಳುಹಿಸಲಾಗುವ ಕಥೆ ಈಗಾಗಲೇ ಬೇರೆಲ್ಲೂ ಪ್ರಕಟವಾಗಿರಕೂಡದು.
- ತೀರ್ಪುಗಾರರ ಮಂಡಳಿಯ ತೀರ್ಮಾನವೇ ಅಂತಿಮವಾದುದು. ಪ್ರಥಮ ಬಹುಮಾನಿತ ಕಥೆಯನ್ನು ವಿಶೇಷಾಂಕದಲ್ಲಿಯೂ, ಇತರ ಬಹುಮಾನ ಪಡೆದ ಕಥೆಗಳನ್ನು ಯಥಾವಕಾಶ 'ವಾರದ ಮಿತ್ರ' ಸಾಪ್ತಾಹಿಕ ಪುರವಣಿಯಲ್ಲಿಯೂ ಪ್ರಕಟಿಸಲಾಗುವುದು.
- ಬಹುಮಾನಿತ ಕಥೆಗಳ ಸಂಪೂರ್ಣ ಸ್ವಾಮ್ಯ 'ಮೈಸೂರು ಮಿತ್ರ'ನಿಗೆ ಸೇರಿದ್ದು.
- ಅಂಚೆಯಲ್ಲಿ ಕಥೆಗಳು ಸೂಕ್ತ ಸಮಯಕ್ಕೆ ತಲುಪದಿದ್ದಲ್ಲಿ 'ಮೈಸೂರು ಮಿತ್ರ' ಜವಾಬ್ದಾರಿಯಲ್ಲ ಮತ್ತು ಕಥೆಗಳನ್ನು ಯಾವ ಕಾರಣಕ್ಕೂ ಹಿಂತಿರುಗಿಸಲಾಗುವುದಿಲ್ಲ. ಆದ್ದರಿಂದ ಸ್ಪರ್ಧಿಗಳು ಕಥೆಯ ಒಂದು ಪ್ರತಿಯನ್ನು ತಮ್ಮ ಬಳಿ ಇರಿಸಿಕೊಳ್ಳುವುದೊಳಿತು.
- ಈ ನಿಯಮಾವಳಿಯನ್ನು ಪಾಲಿಸದ ಕಥೆಗಳನ್ನು ತಿರಸ್ಕರಿಸಲಾಗುವುದು.
- ಯಾವುದೇ ರೀತಿ ಪ್ರಭಾವ ಬೀರುವುದನ್ನು ಅನರ್ಹತೆ ಎಂದು ಪರಿಗಣಿಸಲಾಗುವುದು.

ವಿ.ಸೂ.: 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ದಿನ ಪತ್ರಿಕೆಗಳ ಉದ್ಯೋಗಿಗಳು ಹಾಗೂ ಅವರ ಸಂಬಂಧಿಗಳು ಸ್ಪರ್ಧೆಯಲ್ಲಿ ಭಾಗವಹಿಸುವಂತಿಲ್ಲ.

ಕಥೆ ನಮ್ಮ ಕೈಸೇರಲು ಕೊನೆಯ ದಿನಾಂಕ 02-04-2026

ವಿಳಾಸ: ಸಂಪಾದಕರು, 'ಮೈಸೂರು ಮಿತ್ರ' ವಾರ್ಷಿಕ ವಿಶೇಷಾಂಕ
ಇಂಡಸ್ಟ್ರಿಯಲ್ 'ಎ' ಲೇಔಟ್, ಬನ್ನಿಮಂಟಪ, ಮೈಸೂರು-570 015
ದೂರವಾಣಿ: 2496520, 2496521, 2496526, 2496527

ಸರ್ಕಾರ ಮಹಿಳೆಯರಿಗೆ ಶಕ್ತಿ ತುಂಬುವ ಕೆಲಸ ಮಾಡುತ್ತಿದೆ

'ಪ್ರಜಾವಾಣಿ ಸಾಧಕಿಯರು' ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಮರ್ಥನೆ

ಮೈಸೂರು, ಮಾ.28(ವಿವಿಹೆಚ್)– ಪ್ರಸ್ತುತ ನಮ್ಮ ದೇಶದಲ್ಲಿ ಇಂದಿಗೂ ಲಿಂಗ ತಾರತಮ್ಯ ಇದೆ. ಮಹಿಳೆಯರು ಸಮಾಜದ ಕಟ್ಟ ಕಡೆಯ ವ್ಯಕ್ತಿಗಳು, ಅವರಿಗೆ ಆರ್ಥಿಕವಾಗಿ, ಸಾಮಾಜಿಕವಾಗಿ ಶಕ್ತಿ ತುಂಬುವ ಕೆಲಸ ಮಾಡುವ ಉದ್ದೇಶದಿಂದ ನಮ್ಮ ಸರ್ಕಾರ ಮಹಿಳಾ ಪ್ರಧಾನ ಯೋಜನೆಗಳನ್ನು ನೀಡುತ್ತಾ ಬಂದಿದೆ. ಆ ಮೂಲಕ ಮಹಿಳಾ ಸಬಲೀಕರಣಕ್ಕೆ ಹೊಸ ತಿರುವು ನೀಡಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಮೈಸೂರಿನ ಖಾಸಗಿ ಹೋಟೆಲ್‌ವೊಂದರಲ್ಲಿ ನಡೆದ 'ಪ್ರಜಾವಾಣಿ ಸಾಧಕಿಯರು' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಹುಟ್ಟು ಆಕಸ್ಮಿಕ, ಸಾವು ನಿಶ್ಚಿತ. ಹುಟ್ಟಿನಿಂದ ಸಾಯುವವರೆಗಿನ ಜೀವನದಲ್ಲಿ ಮನುಷ್ಯನಾಗಿ ಹುಟ್ಟಿದವರು ಏನಾದರೂ ಸಾಧನೆ ಮಾಡಬೇಕು. ಸಮಾಜಮುಖಿ ಕೆಲಸ ಮಾಡಬೇಕು. ಆ ಮೂಲಕ ಸಾರ್ಥಕ ಜೀವನ ತಮ್ಮದಾಗಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಜೀವನದಲ್ಲಿ ಪ್ರತಿಯೊಬ್ಬರೂ ವೈಚಾರಿಕತೆ, ವೈಜ್ಞಾನಿಕವಾಗಿ ಬದುಕುವ ಕೆಲಸ ಮಾಡಬೇಕು. ಶಿಕ್ಷಣ ಪಡೆದ ಅನೇಕರಿಗೆ ವೈಜ್ಞಾನಿಕತೆ, ವೈಚಾರಿಕತೆ ಇರುವುದಿಲ್ಲ. ಅಂಥವರಿಂದ ಸಮಾಜಮುಖಿ ಕೆಲಸ ಆಗುವುದಿಲ್ಲ. ಸಾಮಾಜಿಕ ವ್ಯವಸ್ಥೆಯಲ್ಲಿ ರಾಜಿ ಮಾಡಿಕೊಂಡು ಬದುಕುವವರೇ ಹೆಚ್ಚು. ಅಂತಹವರ ಮಧ್ಯೆ ಸಮಾಜದಲ್ಲಿನ ಅಸಮಾನತೆ ತೊಡೆದು ಹಾಕಿ ಬದುಕು ಕಟ್ಟಿಕೊಂಡವರು ಈ ಸಾಧಕಿಯರು ಎಂದು ಶ್ಲಾಘನೆ ವ್ಯಕ್ತಪಡಿಸಿದರು.



ಮಹಿಳಾ ಸಾಧಕರಿಯರೊಂದಿಗೆ ಸಿಎಂ ಸಿದ್ದರಾಮಯ್ಯ ಮತ್ತಿತರ ಗಣ್ಯರು

ನಾವು ವೈವಿಧ್ಯತೆಯಿಂದ ಕೂಡಿದ ಸಮಾಜಕ್ಕೆ ಕಾಲಿಡುತ್ತಿದ್ದೇವೆ. ಸಮಾಜದಲ್ಲಿ ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ ಅಸಮಾನತೆ ಇರುತ್ತದೆ. ಇದಕ್ಕೆ ಜಾತಿ ವ್ಯವಸ್ಥೆ ನೇರ ಕಾರಣ. ಎಲ್ಲಿಯವರೆಗೆ ಜಾತಿ ವ್ಯವಸ್ಥೆ ಇರುತ್ತದೆಯೋ ಅಲ್ಲಿಯವರೆಗೆ ಸಮ ಸಮಾಜ ನಿರ್ಮಾಣ ಮಾಡಲು ಸಾಧ್ಯವಿಲ್ಲ. ಪ್ರತಿಯೊಬ್ಬ ಮನುಷ್ಯನು ಕೂಡ ಶಿಕ್ಷಣ ಪಡೆದು ಆರ್ಥಿಕವಾಗಿ, ಸಾಮಾಜಿಕವಾಗಿ ಸ್ವಾವಲಂಬನೆ ಹೊಂದಬೇಕು. ಇಲ್ಲವಾದಲ್ಲಿ ರಾಜಕೀಯ ಸ್ವಾತಂತ್ರ್ಯ ಸಾರ್ಥಕವಾಗುವುದಿಲ್ಲ ಎಂದು ಡಾ.ಬಿ.ಆರ್.ಅಂಬೇಡ್ಕರ್ ಅವರ ವಾಣಿಯನ್ನು ನೆನೆದರು.

ಸಾಧನೆ ಮಾಡಲು ಪ್ರಯತ್ನ ಬಹಳ ಮುಖ್ಯ. ಪ್ರಯತ್ನವಿಲ್ಲದೆ ಯಾವುದೇ ಸಾಧನೆ ಸಾಧ್ಯವಿಲ್ಲ. ಬದುಕಿನಲ್ಲಿ ನಿರ್ದಿಷ್ಟ ಗುರಿಯನ್ನು ಇಟ್ಟುಕೊಂಡು ಅಚಲ ಶ್ರಮದೊಂದಿಗೆ ಕೆಲಸಗಳನ್ನು ಮಾಡಿದಾಗ ಗುರಿ ತಲುಪಬಹುದು ಎಂದರು.

ವಿವಿಧ ಕ್ಷೇತ್ರಗಳಲ್ಲಿ ವಿಶಿಷ್ಟ ಸೇವೆ ಮಾಡಿರುವ ಮಹಿಳೆಯರು, ತಮ್ಮ ಜೀವನದ ಸಾರ್ಥಕತೆಯ ಜೊತೆಗೆ ಸಮಾಜವನ್ನು ತಿದ್ದುವ ಕೆಲಸ ಮಾಡುತ್ತಿದ್ದಾರೆ. ಇಂತಹವರ ಮೇಲೆ ಟೀಕೆ-ಟಿಪ್ಪಣಿಗಳು ಸಹಜ. ಒಳ್ಳೆಯ ಕೆಲಸಗಳಿಗೂ ರಾಜಕೀಯ ಬಣ್ಣ ಹೊರೆಸುವ ಜನರಿದ್ದಾರೆ. ಇದ್ಯಾವುದಕ್ಕೂ ಹಿಂಜರಿಯದೆ, ಬದುಕು ಕಟ್ಟಿಕೊಳ್ಳಲು ಸ್ವಾವಲಂಬನೆಯಿಂದ ದುಡಿಯುವ ಲಕ್ಷಾಂತರ ಮಹಿಳೆಯರಿಗೆ ಮಾದರಿಯಾಗಿ ಮತ್ತಷ್ಟು ಸಮಾಜಮುಖಿ ಕೆಲಸಗಳನ್ನು ಮಾಡಿ ಎಂದು ಆಶಿಸಿದರು.

ರಾಜ್ಯಾದ್ಯಂತ ಸಾವಿರಾರು ಮಂದಿ ಇಂತಹ ಎಲೆಮರೆ ಕಾಯಿಗಳ ಹಾಗೆ ಕೆಲಸ ಮಾಡುತ್ತಾ ಬಂದಿದ್ದಾರೆ. ಅಂತಹವರನ್ನು ಗುರುತಿಸಿ ಅಭಿನಂದಿಸುವುದು ಉತ್ತಮ ಕೆಲಸವಾಗಿದೆ. ಸಮಾಜವನ್ನು ಬದಲಾಯಿಸುವ, ಪ್ರೇರಣೆ ನೀಡುವ ಕಾರ್ಯಕ್ರಮ ಇದಾಗಿದೆ ಎಂದು ಬಣ್ಣಿಸಿದರು.

ಇದೇ ವೇಳೆ ರೋಡ್ ರೋಲರ್ ಚಲಾಯಿಸಿ, 30 ಮಂದಿಗೆ ಕೆಲಸ ನೀಡಿದ ಛಲಗಾರ್ತಿ ಶಂಕರವ್ವ ಲಮಾಣಿ, ಅಂಧ ಮಹಿಳೆಯರ ಭಾರತ ತಂಡದ ನಾಯಕಿ ಟಿ.ಸಿ.ದೀಪಿಕಾ, ವಕೀಲೆ ಎಂ. ಗೌಸಿಯ ಖಾನ್, ಲಿಂಗತ್ವ ಅಲ್ಪ ಸಂಖ್ಯಾತ ಕಲಾವಿದೆ ಜಾನು, ಜಾನಪದ ಗಾಯಕಿ ಗಿರಿಜಮ್ಮ, ರಾಗಿ ಉತ್ಪನ್ನ ತಯಾರಿಕಾ ಘಟಕ ಸ್ಥಾಪಕಿ ಮೈಸೂರಿನ ರಾಗಿಣಿ, ಗಾರ್ಮೆಂಟ್ ಉದ್ಯಮಿ ಶಿವಲೀಲಾ ಚನ್ನಬಸಪ್ಪ ಪಾಟೀಲ, ಸೂಲಗಿತ್ತಿ ಕಮಲಮ್ಮ, ಕೋಲಾರದ ಎಸ್.ಆಶಾ ಹಾಗೂ ಬೆಂಗಳೂರಿನ ಸವಿತಾ ಅವರಿಗೆ 'ಪ್ರಜಾವಾಣಿ ಸಾಧಕಿಯರು' ಪ್ರಶಸ್ತಿ ನೀಡಿ ಅಭಿನಂದಿಸಲಾಯಿತು.

ರಾಜ ವಂಶಸ್ಥರಾದ ಪ್ರಮೋದಾ ದೇವಿ ಒಡೆಯರ್, ಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್, ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಕೆ.ಎಸ್.ಮುದಗಲ್, ನಟಿ, ರಂಗಕರ್ಮಿ ಬಿ.ಜಯಶ್ರೀ, ಲಿಂಗತ್ವ ಅಲ್ಪ ಸಂಖ್ಯಾತರ ಹಕ್ಕುಗಳ ಹೋರಾಟಗಾರ್ತಿ ಅಕ್ಕೈ ಪದ್ಮಶಾಲಿ, ನಟಿ ಅಂಕಿತಾ ಅಮರ್ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

ಮೈಸೂರು ಮಿತ್ರ ಭಾನುವಾರ 29 ಮಾರ್ಚ್ 2026

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀ ವಿಕ್ರಾಂತ್ ಪಿ. ದೇವೇಗೌಡ ರವರು

ಜನನ 25-03-1962 ಮರಣ 20-03-2026

ಇವರು ದಿನಾಂಕ 20-03-2026ರ ಶುಕ್ರವಾರದಂದು ದೈವಾದೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ದಿನಾಂಕ 30-03-2026ರ ಸೋಮವಾರ ಬೆಳಿಗ್ಗೆ 11:00 ಗಂಟೆಗೆ ಶ್ರೀ ಮರುಳೇಶ್ವರ ಶಾಂತಿಧಾಮ (ಕಾವೇರಿ ಸ್ಕೂಲ್ ಹತ್ತಿರ) ಆದಿಚುಂಚನಗಿರಿ ರೋಡ್, ಕುವೆಂಪುನಗರ, ಮೈಸೂರು ಇಲ್ಲಿ ಏರ್ಪಡಿಸಲಾಗಿದ್ದು, ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ತಿಳಿದು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ.

ದುಃಖತಪ್ತರು

ಮೃತರ ಧರ್ಮಪತ್ನಿ ಶ್ರೀಮತಿ ಲಕ್ಷ್ಮಿ, ಮಗ ಡಿ. ಶ್ರೀನಿವಾಸ, ಹೆಣ್ಣುಮಕ್ಕಳು, ಅಳಿಯ, ಮೊಮ್ಮಕ್ಕಳು, ಹಾಗೂ ಕೆ.ಜಿ. ಕೊಪ್ಪಲು, ಜಯನಗರ, ಕುವೆಂಪುನಗರ, ಅಪಾರ ಬಂಧು-ವರ್ಗ

ಭೋಜನ : ಮಧ್ಯಾಹ್ನ 1:00 ಗಂಟೆಗೆ ಸ್ಥಳ : ಮರುಳೇಶ್ವರ ಶಾಂತಿ ಧಾಮ

12ನೇ ವರ್ಷದ ಪುಣ್ಯಸ್ಮರಣೆ



ಶ್ರೀಮಾನ್ ಯಜಮಾನ ದೊಡ್ಡ ದಾಸಯ್ಯ ರವರ

ದುಃಖತಪ್ತರು :

ಶ್ರೀ ಡಿ ದಾಸು ಮೇಟಗಳ್ಳಿ ಮೈಸೂರು.

ಕುಟುಂಬ ವರ್ಗದವರು

10ನೇ ವರ್ಷದ ಪುಣ್ಯಸ್ಮರಣೆ



ಲೇಟ್ ಅಣ್ಣಯ್ಯ

ನೀವು ನಮ್ಮನ್ನಗಲಿ 10 ವರ್ಷಗಳು ಕಳೆದರು ಸದಾ ನಿಮ್ಮನ್ನು ಸ್ಮರಿಸುತ್ತಿರುವ

ದುಃಖತಪ್ತರು:

ಪತ್ನಿ: ಸುನಂದ, ಮಕ್ಕಳು: ನಂದಿತ, ಪ್ರೀತಮ್, ಅಳಿಯಂದಿರು, ಮೊಮ್ಮಗ ಹಾಗೂ ಕುಟುಂಬವರ್ಗ

ಸವಿನೆನಪು



ಶ್ರೀಮತಿ ಪುಟ್ಟಮಾದಮ್ಮನವರು
ನಿಧನ: 09-09-2006

ಯಜಮಾನ್ ಶ್ರೀ ಗೋಲಯ್ಯನ ಚೆಲುವಯ್ಯನವರು
ನಿಧನ: 29-03-2001

ನೀವು ನಮ್ಮನ್ನು ಅಗಲಿ ಹಲವು ವರ್ಷಗಳು ಕಳೆದರೂ ನಿಮ್ಮ ಮಾರ್ಗದರ್ಶನ ನಮಗೆ ದಾರಿ ದೀಪವಾಗಿದೆ

ದುಃಖತಪ್ತರು:

ಮಕ್ಕಳು ಹಾಗೂ ಕುಟುಂಬವರ್ಗದವರು, ಅಶೋಕಪುರಂ, ಮೈಸೂರು

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಲ್ಲಿ ತಿಳಿಯಪಡಿಸುವುದೇನೆಂದರೆ ಈ ಕೆಳಗೆ ಶೆಡ್ಯೂಲ್ ನಲ್ಲಿ ನಮೂದಿಸಿರುವ ಸ್ವತ್ತನ್ನು ನಮ್ಮ ಕಕ್ಷಿದಾರರು ಅದರ ಮಾಲೀಕರಾದ ಪಿ ರಮೇಶ್ ಲೇಟ್ ಪುಟ್ಟಬಸವಯ್ಯ, ಶಾಂತಮ್ಮ ಲೇಟ್ ಪುಟ್ಟಬಸವಯ್ಯ, ಸೋಮಣ್ಣ ಲೇಟ್ ಪುಟ್ಟ ಬಸವಯ್ಯ, ಶಂಕರ್ ನಾಗು ಲೇಟ್ ಪುಟ್ಟ ಬಸವಯ್ಯ ಮನೆ ನಂಬರ್:33, 5ನೇ ಕ್ರಾಸ್, O.D ಬ್ಲಾಕ್, ರಾಜೇಂದ್ರ ನಗರ ಮೈಸೂರು ಇಲ್ಲಿ ವಾಸವಿರುವ ಇವರುಗಳಿಂದ ಪಿತ್ರಾರ್ಜಿತವಾಗಿ ಬಂದಂತಹ ಸ್ವತ್ತನ್ನು ಶ್ರೀ ರಾಜೇಶ್ ಕೆ ಸನ್ ಆಫ್ ಕೂಸಣ್ಣ ಮತ್ತು ಶ್ರೀ ಶಿವಕುಮಾರ್ ಸನ್ ಆಫ್ ನಾಗರಾಜು ಲಲಿತಾದ್ರಿಪುರ ಗ್ರಾಮ ಮೈಸೂರು ತಾಲೂಕು ಮತ್ತು ಜಿಲ್ಲೆ ರವರುಗಳು ಪಟ್ಟೆ ಹುಂಡಿ ಗ್ರಾಮ, ಕಸಬಾ ಹೋಬಳಿ ಟಿ ನರಸೀಪುರ ತಾಲೂಕು ಮೈಸೂರು ಜಿಲ್ಲೆ, ಇಲ್ಲಿನ ಸರ್ವೆ ನಂಬರ್ 99/8 ರಲ್ಲಿ 0-27 ಗುಂಟೆ, 99/9 ರಲ್ಲಿ 0-17.08 ಗುಂಟೆ, 99/10 ರಲ್ಲಿ 0-9.08 ಗುಂಟೆ ಜಮೀನನ್ನು ಖರೀದಿ ಮಾಡಲು ದಿನಾಂಕ 12.03.2026 ರಂದು ಉಪ ನೊಂದಾನಿಧಿಕಾರಿಗಳ ಕಚೇರಿಯಲ್ಲಿ ನೊಂದಾಯಿತ ಕ್ರಯದ ಕರಾರನ್ನು ಮಾಡಿಕೊಂಡಿರುತ್ತಾರೆ.

ಈ ಬಗ್ಗೆ ಸಾರ್ವಜನಿಕರಲ್ಲಿ ಜಮೀನಿಗೆ ಸಂಬಂಧಿಸಿದಂತೆ ಏನಾದರೂ ತಕರಾರು ಇದ್ದಲ್ಲಿ ಸಂಬಂಧಪಟ್ಟ ದಾಖಲೆಗಳೊಂದಿಗೆ ಈ ಕೆಳಕಂಡವರನ್ನು ಈ ಪ್ರಕಟಣೆಯಾದ 15 ದಿನದ ಒಳಗಾಗಿ ಭೇಟಿ ಮಾಡಿ ತಿಳಿಸತಕ್ಕದ್ದು ತಪ್ಪಿದ್ದಲ್ಲಿ ಕ್ರಯದ ವ್ಯವಹಾರವನ್ನು ಸಂಪೂರ್ಣಗೊಳಿಸಲು ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ಶುದ್ಧ ಕ್ರಯ ಪತ್ರವನ್ನು ನೋಂದಣಿ ಮಾಡಿಸಲಾಗುತ್ತದೆ ತದನಂತರ ಬರುವಂತಹ ಯಾವುದೇ ತಕರಾರುಗಳಿಗೆ ಯಾವುದೇ ಕ್ಲೈಮ್‌ಗಳಿಗೆ ನನ್ನ ಕಕ್ಷಿದಾರರು ಬದ್ದರಾಗಿರುವುದಿಲ್ಲ.

ರಾಜೇಶ್ ಕೆ 9844574519,
ಶಿವಕುಮಾರ್ ಎನ್ 843146855

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ನರಸೀಪುರ ತಾಲೂಕು ಕಸಬಾ ಹೋಬಳಿ ಪಟ್ಟೆ ಹುಂಡಿ ಗ್ರಾಮದಲ್ಲಿರುವ ಜಮೀನುಗಳಿಗೆ ಚೆಕ್ಕುಬಂದಿ ಈ ಕೆಳಗಿನಂತಿದೆ.

ನರ್ವೇ ನಂಬರ್ - 99/8 ಕ್ಕೆ ಚಕ್ಕುಬಂದಿ (0-27 ಗುಂಟೆ), ಪೂರ್ವ:ರಸ್ತೆ, ಪಶ್ಚಿಮ ನೀರಾವರಿ ಕಾಲುವೆ, ಉತ್ತರ:ಸ.ನಂ. 99/3 ಮತ್ತು 99/7 ರ ಜಮೀನು, ದಕ್ಷಿಣ.ಸ.ನಂ., 99/9 ರ ಜಮೀನು

ಸರ್ವೇ ನಂಬರ್ - 99/9 ಕ್ಕೆ ಚಕ್ಕುಬಂದಿ (0-17.08 ಗುಂಟೆ), ಪೂರ್ವ: ರಸ್ತೆ, ಪಶ್ಚಿಮ: ನೀರಾವರಿ ಕಾಲುವೆ, ಉತ್ತರ: ಸ.ನಂ. 99/8 ರ ಜಮೀನು, ದಕ್ಷಿಣ: ಸ.ನಂ., 100/2 ಮತ್ತು 100/3 ರ ಜಮೀನು.

ಸರ್ವೇ ನಂಬರ್ - 99/10 ಕ್ಕೆ ಚಕ್ಕುಬಂದಿ (0-9.08 ಗುಂಟೆ), ಪೂರ್ವ: ನೀರಾವರಿ ಕಾಲುವೆ, ಪಶ್ಚಿಮ ಸ.ನಂ. 101/3 ರ ಜಮೀನು, ಉತ್ತರ ಸ.ನಂ. 99/4 ರ ಜಮೀನು, ದಕ್ಷಿಣ ಸ.ನಂ. 100/1 ರ ಜಮೀನು

Sd/- JAGADISHA .M
M.A., B.Ed.,LLB, Advocate
KAR-434/2017
#145, Lalithadripura,
Varuna Hobli, Mysore
Date: 23.03.2026, Place: Mysore.

ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು





PUBLIC NOTICE

Notice is given to the general public at large that my clients Sri. Prabhakar H.N., Son of Late Sri. Narayan K.S., Aged about 65 years, Smt. Sudha M.J., W/o Sri. Prabhakar H.N., aged about 58 years, Sri. Seena Mool Prabhakar, S/o Sri. Prabhakar H.N., aged about 33 years, Sri. Arjun Prabhakar, S/o Sri. Prabhakar H.N., aged about 29 years, all are residing at Doddahonnur Village, Haranahalli Hobli, Piriyapatna Taluk, Mysuru District had executed a registered General Power of Attorney in favour of Smt. Lathamani, W/o Sri. Vidhyadhar T.S., Aged about 50 years, Residing at House No. 04/46, Bypass Road, In front of Kushal Nagar Government Hospital, Kushal Nagar Hobli, Somavarpet Taluk, Kodagu District, bearing Document No. BTP-4 000001-2021-22, in Book No.4 dated 03.04.2021 registered in the office of the Sub-Registrar, Bettadapura, Piriyapatna Taluk.

Since the said Smt. Lathamani did not perform any act as per the General Power of Attorney, my clients vide legal notice have terminated/cancelled the registered Power of Attorney dated 03.04.2021.

Thus it is hereby brought to the kind notice of every person/company/bank that they shall refrain themselves from negotiating or entering into any kind of agreements or contracts with Smt. Lathamani, her agents, servants or anybody claiming under her with respect to the schedule property as she is not having any power, right, title or interest over the schedule property. My clients shall not be held responsible for the act and conduct of the said Smt. Lathamani with regard to the schedule property.

SCHEDULE PROPERTY

All that piece and parcel of landed property bearing Survey No. 30 /*, measuring 4 acres situated at Doddahonnur Village, Haranahalli Hobli, Piriyapatna Taluk, Mysuru District, more fully described in the registered GPA dated 03.04.2021, bounded on: East by: Government Kolli, West by: Susheelamma's land, North by: Government kolli, South by: Road.

Sd/- K.S Nagendra Prasad.
B.Sc., LL.B.,Advocate, KAR-1309/02
CH-26, Room No. 102, 6th Main,
Saraswathi puram, Mysuru
Mob: 9611509184

ಮೈಸೂರು ಮಿತ್ರ
ವಾರ್ಷಿಕೋತ್ಸವ ವಿಶೇಷ ಸಂಚಿಕೆ

ಓದುಗರು ಹಾಗೂ ಜಾಹೀರಾತುದಾರರ ಸೇವೆಯಲ್ಲಿ "ಮೈಸೂರು ಮಿತ್ರ", ಏಪ್ರಿಲ್ 16, 2026ಕ್ಕೆ 46 ವರ್ಷಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ, 47ನೇ ವರ್ಷಕ್ಕೆ ಕಾಲಿಡುತ್ತಿರುವ ಈ ಸುಸಂದರ್ಭದಲ್ಲಿ ವರ್ಣರಂಜಿತ ವಿಶೇಷಾಂಕವನ್ನು ಹೊರತರಲಾಗುತ್ತಿದೆ. ಜಾಹೀರಾತುದಾರರಿಗೆ ಇದೊಂದು ಸುಸಮಯ. ಮುದ್ರಣದ ದೃಷ್ಟಿಯಿಂದ ತಮ್ಮ ಜಾಹೀರಾತುಗಳನ್ನು ಏಪ್ರಿಲ್ 10, 2026 ರೊಳಗೆ ನಮಗೆ ತಲುಪುವಂತೆ ಕಳುಹಿಸಬೇಕಾಗಿ ಕಳಕಳಿಯ ಮನವಿ.

ಪ್ರಧಾನ ಕಛೇರಿ

0821-2496522, 2496523, 0821-2496520 (5 ಲೈನುಗಳು)
ಮರಿಯ ಫರ್ನಾಂಡಿಸ್, ಜಾಹೀರಾತು ವ್ಯವಸ್ಥಾಪಕರು:
9448525060 / 8073030835
ಜಾಯ್ ಅಂಥೋಣಿ ಡೋಜ್: 8951668960, ಪ್ರೇಮ: 9880549879
ಕೆ.ಆರ್. ಸರ್ಕಲ್ ಕಛೇರಿ: 0821-2431774
ದೇವರಾಜ ಅರಸ್ ರಸ್ತೆ ಕಛೇರಿ: 0821-2428695

ಕೊಡಗು	ಮಂಡ್ಯ	ಶ್ರೀರಂಗಪಟ್ಟಣ
ಪ್ರಸಾದ್, ಪೂಜಾ ಆರ್ಕೆಡ್, ಜೂನಿಯರ್ ಕಾಲೇಜು ರಸ್ತೆ, ಮಡಿಕೇರಿ 9731469871	ಕೆ. ಮೋಹನ್‌ರಾಜ್ 8762960325	ವಿನಯ್ ಕಾರೇಕುರ, ಶ್ರೀರಂಗಪಟ್ಟಣ 9686893234
ಹುಣಸೂರು	**ಚಾಮರಾಜನಗರ**	**ಟಿ. ನರಸೀಪುರ**
ಕೆ. ಕೃಷ್ಣ (ಕೆ.ಕೆ.), EWS 204, KHB ಕಾಲೋನಿ, ಹುಣಸೂರು. 9448720626	ಸಿದ್ದಲಿಂಗಸ್ವಾಮಿ, ಸಿ.ಹೆಚ್.ಆರ್. ಕಾಂಪ್ಲೆಕ್ಸ್, ಸರ್ಕಾರಿ ಆಸ್ಪತ್ರೆ ಎದುರು, ಚಾಮರಾಜನಗರ 9242265657	ಕುಮಾರ್, ಸಾರ್ವಜನಿಕ ಆಸ್ಪತ್ರೆ ರಸ್ತೆ, ಆರ್ಯ ಮಹಲ್ ಛತ್ರದ ಎದುರು, ಟಿ. ನರಸೀಪುರ. 9986719590
ಗುಂಡ್ಲುಪೇಟೆ	**ಕೆ.ಆರ್. ನಗರ**	**ಮಳವಳ್ಳಿ**
ಸೋಮಶೇಖರ್, ದ.ರಾ. ಬೇಂದ್ರೆ ನಗರ, ಅತ್ತಿನಿ ಲೇಔಟ್, ಗುಂಡ್ಲುಪೇಟೆ. 9845995426	ಮಂಜುನಾಥ, ವಾರ್ಡ್ ನಂ.17, ಕನಕನಗರ Extn. ಮುಳ್ಳೂರು ರಸ್ತೆ, ಕೆ.ಆರ್.ಟೌನ್ 9483084345	ಸರಸ್ವತಿ. ವಿ, ನಂ.47, 1ನೇ ಕ್ರಾಸ್, ಎನ್.ಇ.ಎಸ್ ಮಳವಳ್ಳಿ ಟೌನ್-571430 9632407806
ಹಾಸನ	**ಕುಶಾಲನಗರ**	**ಜಯಪುರ**
ಆರ್.ಎನ್.ಸೋಮೇಶ್‌ಗೌಡ, ಹೋಲಿ ಚಿಲ್ಡ್ರನ್ ಶಾಲೆ ಹತ್ತಿರ, ಜಯನಗರ, 1ನೇ ಹಂತ, 2ನೇ ಕ್ರಾಸ್, ಹಾಸನ. 7019311935	ರಘು, ಮೈಸೂರು ಮಿತ್ರ ರಿಪೋರ್ಟರ್, ಮನು ಪ್ರೆಸ್, ಐ.ಬಿ.ರಸ್ತೆ, ಕುಶಾಲನಗರ 9845698401	ಬಿಳಿಗಿರಿ, ಜಯಪುರ 9945479288
ಪಿರಿಯಾಪಟ್ಟಣ	**ವಿರಾಜಪೇಟೆ**	**ಯಳಂದೂರು**
ವಿರೇಶ್, ಪಿರಿಯಾಪಟ್ಟಣ 8660057128	ಮಂಜುನಾಥ, ವಿರಾಜಪೇಟೆ 9900949353	ವಿ.ನಾಗರಾಜು, ಮೈತ್ರಿ ಮೆಡಿಕಲ್, ಬಳೇಪೇಟೆ, ಯಳಂದೂರು 9844349191
ಕೆ.ಆರ್.ಪೇಟೆ	**ಹೆಚ್.ಡಿ.ಕೋಟೆ**	**ಕೆ.ಎಂ.ದೊಡ್ಡಿ**
(ಶ್ರೀನಿವಾಸ), ಅಗ್ರಹಾರ ಬಾಚಹಳ್ಳಿ, ಕೆ.ಆರ್.ಪೇಟೆ 9449326847, 7022757438	ಮಂಜುನಾಥ ಎಸ್., ಹೆಚ್.ಡಿ.ಕೋಟೆ 9483574452	ಸತೀಶ್ ಎ.ಎಲ್, ಕೆ.ಎಂ.ದೊಡ್ಡಿ 9242120338
ಹುಣಸೂರು	**ನಂಜನಗೂಡು**	**ಕೊಳ್ಳೇಗಾಲ**
ರಘು, ರಘು ಫೋಟೋ ವರ್ಲ್ಡ್, ಹುಣಸೂರು 9845590889	ರಂಗಸ್ವಾಮಿ, ನಂ.4565, ಕಪಿನಿ ಕಾಲೋನಿ ಹಿಂಭಾಗ, ನೀಲಕಂಠ ನಗರ, ನಂಜನಗೂಡು ಟೌನ್-571301 9901602226	ನಾಗೇಂದ್ರ ಸ್ವಾಮಿ, ನಂ.7ಎ, 684, 14 ನೇ ಕ್ರಾಸ್, ಬಸವೇಶ್ವರ ನಗರ, ಕೊಳ್ಳೇಗಾಲ 9448576247, 7899849868

ಸ್ಥಾಪನೆ : 1916 RBI License No. UBD KA 844P, Dt.28.01.1987

ದಿ ಮುಸ್ಲಿಂ ಕೋ-ಆಪರೇಟಿವ್ ಬ್ಯಾಂಕ್ ಲಿ.,

ಶಾಖೆಗಳು: 1) ಉದಯಗಿರಿ 2) ರಾಜೀವ್‌ನಗರ 3) ಹುಣಸೂರು
ಮುಖ್ಯ ಶಾಖೆ: ನ್ಯೂ ಸಯ್ಯಾಜಿ ರಾವ್ ರಸ್ತೆ, ಮೈಸೂರು-570001.

ಸ್ಥಿರಾಸ್ತಿ ಬಹಿರಂಗ ಹರಾಜು ಮಾರಾಟ

ಸೆಕ್ಯೂರಿಟೈಜೇಶನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆ್ಯಕ್ಟ್‌ನ 2002 ನಿಯಮ 8(6)ರ ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಪ್ರಕಾರ ಕೆಳಗೆ ಸೂಚಿಸಿರುವ ಸಾಲಗಾರರು ಬ್ಯಾಂಕ್‌ಗೆ ಬರಬೇಕಾದ ಬಾಕಿಯನ್ನು ಪಾವತಿಸುವಲ್ಲಿ ವಿಫಲರಾಗಿರುವುದರಿಂದ ಈ ನೋಟೀಸನ್ನು ನೀಡಲಾಗಿದೆ. ಸೆಕ್ಯೂರಿಟೈಜೇಶನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆ್ಯಕ್ಟ್ 2002 ರ (SARFAESI) ಕಾಯ್ದೆಯಲ್ಲಿ ಸೆಕ್ಷನ್ 13(4) ರ ಅನ್ವಯ ದಿ ಮುಸ್ಲಿಂ ಕೋ-ಆಪರೇಟಿವ್ ಬ್ಯಾಂಕ್ ನಿ., ಮೈಸೂರು-570001 ಅಧಿಕೃತ ಅಧಿಕಾರಿಯವರಿಂದ ಮೇಲ್ಕಂಡ ಕಾಯ್ದೆಯ ಅನ್ವಯ ಬ್ಯಾಂಕ್ ತನ್ನ ಅಧಿಕಾರಗಳನ್ನು ಚಲಾಯಿಸಿ, ಬ್ಯಾಂಕು ತನಗೆ ಬರಬೇಕಾದ ಬಾಕಿ ವಸೂಲಿಗಾಗಿ ಷೆಡ್ಯೂಲ್-1 ಭಾಗ-ಎ ಮತ್ತು ಷೆಡ್ಯೂಲ್- 1 ಭಾಗ-ಬಿ ಯಲ್ಲಿರುವ ಆಸ್ತಿಗಳನ್ನು ಸೂಚಿಸಿರುವಂತೆ ಕೆಳಕಂಡ ನಿಯಮ ಮತ್ತು ಷರತ್ತುಗಳಿಗೆ ಅನುಗುಣವಾಗಿ ಮಾರಾಟ ಮಾಡಲಾಗುತ್ತದೆ.

ಮಾರಾಟದ ದಿನಾಂಕ	ಷೆಡ್ಯೂಲ್-1 ಭಾಗ-ಎ, ಕಲಂ-5 ನ್ನು ಆಧಾರ ಮಾಡಿ
ಮಾರಾಟದ ಸಮಯ	ಷೆಡ್ಯೂಲ್-1 ಭಾಗ-ಎ, ಕಲಂ-5 ನ್ನು ಆಧಾರ ಮಾಡಿ
ಮಾರಾಟದ ಸ್ಥಳ	ದಿ ಮುಸ್ಲಿಂ ಕೋ-ಆಪರೇಟಿವ್ ಬ್ಯಾಂಕ್ ನಿ., ಮೈಸೂರು-570001.
ಸ್ಥಿರಪಡಿಸಿದ ಮೀಸಲು ಬೆಲೆ	ಷೆಡ್ಯೂಲ್-1 ಭಾಗ-ಎ, ಕಲಂ-3 ನ್ನು ಆಧಾರ ಮಾಡಿ
ಮುಂಗಡ ಠೇವಣಿ ಹಣ	ಷೆಡ್ಯೂಲ್-1 ಭಾಗ-ಎ, ಕಲಂ-4 ನ್ನು ಆಧಾರ ಮಾಡಿ

ಷೆಡ್ಯೂಲ್-1, ಭಾಗ-ಎ

ಕ್ರಮ ಸಂಖ್ಯೆ	ಸಾಲಗಾರರು/ಸಹ ಸಾಲಗಾರರ ಹೆಸರು	ಆಸ್ತಿಯ ವಿವರಣೆ	ಮೀಸಲು ಬೆಲೆ ರೂ.ಗಳಲ್ಲಿ	ಮುಂಗಡ ಠೇವಣಿ ರೂ.ಗಳಲ್ಲಿ	ಮಾರಾಟದ ದಿನಾಂಕ ಮತ್ತು ಸಮಯ
	(1)	(2)	(3)	(4)	(5)
1.	1) ಶ್ರೀ ಮುಜೀಬ್ ಉರ್ ರೆಹ್ಮಾನ್ ಬಿನ್ ಅಸ್ಗರ್ ಪಾಷ 2) ಶ್ರೀ ನಜೀಬ್ ಉರ್ ರೆಹ್ಮಾನ್ ಬಿನ್ ಅಸ್ಗರ್ ಪಾಷ 3) ಶ್ರೀ ಮೊಹಮ್ಮದ್ ಜಬೀರ್ ಬಿನ್ ಮೊಹಮ್ಮದ್ ಸಲೀಮ್ ನಂ.2595/1, ಎರೆಕಟ್ಟೆ ಬೀದಿ, ಲಷ್ಕರ್ ಮೊಹಲ್ಲಾ, ಮೈಸೂರು.	ಮೈಸೂರು ಸಿಟಿ, ಲಷ್ಕರ್ ಮೊಹಲ್ಲಾ, ಅಶೋಕ ರಸ್ತೆ, ವೆಸ್ಟ್ ಕ್ರಾಸ್ 23, ಎರೆಕಟ್ಟೆ ಬೀದಿ, ಕಾರ್ಪೊರೇಶನ್ ಮನೆ ನಂ.2595 ಹೊಸ ನಂ. ಎಲ್-82, ಎಲ್-82/1, ವಿಸ್ತೀರ್ಣ: ಪೂರ್ವ-ಪಶ್ಚಿಮ: 17.00 ಅಡಿಗಳು ಮತ್ತು ಉತ್ತರ-ದಕ್ಷಿಣ: 38.00 ಅಡಿಗಳು. ಚಕ್ಕುಬಂದಿ:- ಪೂರ್ವಕ್ಕೆ: ಎಜಾಜ್ ರವರ ಸ್ವತ್ತು, ಪಶ್ಚಿಮಕ್ಕೆ: ನೂರ್ ಅಹ್ಮದ್ ಮತ್ತು ಪಿ.ಕೆ. ಮೂಸಾ ರವರ ಸ್ವತ್ತು, ಉತ್ತರಕ್ಕೆ: ಎಜಾಜ್ ರವರ ಸ್ವತ್ತು, ದಕ್ಷಿಣಕ್ಕೆ: ಅಶೋಕ ವೆಸ್ಟ್ ಕ್ರಾಸ್ 23.	ರೂ.30,00,000/-	ರೂ.3,00,000/-	ದಿನಾಂಕ 29.04.2026 ರಂದು ಬೆಳಿಗ್ಗೆ 11.30 ಗಂಟೆಯ ನಂತರ

ಷೆಡ್ಯೂಲ್-2, ಭಾಗ-ಬಿ

ಸಾಲಗಾರರು/ಸಹ-ಸಾಲಗಾರರ ಹೆಸರು	ಸಾಲ ಸೌಲಭ್ಯದ ಸ್ವರೂಪ ಮತ್ತು ಖಾತೆ ಸಂಖ್ಯೆ	ಸಾಲದ ಬಾಕಿ (ಮೊಬಲಗು ರೂ.ಗಳಲ್ಲಿ)
1) ಶ್ರೀ ಮುಜೀಬ್ ಉರ್ ರೆಹ್ಮಾನ್ , 2) ಶ್ರೀ ನಜೀಬ್ ಉರ್ ರೆಹ್ಮಾನ್ 3) ಶ್ರೀ ಮೊಹಮ್ಮದ್ ಜಬೀರ್	ಅಡಮಾನ ಸಾಲ ಸಾಲದ ಖಾತೆ ಸಂಖ್ಯೆ: ಹೆಚ್‌ಎನ್-360	ರೂ.14,06,639/- (ರೂಪಾಯಿ ಹದಿನಾಲ್ಕು ಲಕ್ಷದ ಆರು ಸಾವಿರದ ಆರುನೂರ ಮುವತ್ತೊಂಬತ್ತು ಮಾತ್ರ) + ದಿನಾಂಕ: 24.03.2026 ರಿಂದ ತಗಲುವ ವೆಚ್ಚ ಮತ್ತು ಬಡ್ಡಿ

ಈ ಮೊದಲು ಯಾವುದೇ ಮೊತ್ತವನ್ನು ಪಾವತಿಸಿದ್ದಲ್ಲಿ ಅದನ್ನು ಒಟ್ಟು ಬಾಕಿಯೊಂದಿಗೆ ಹೊಂದಿಸಿಕೊಳ್ಳಲಾಗುವುದು.

ಸಾಲಗಾರರು ತಮ್ಮ ಸಾಲಗಳು ಮತ್ತು ವೆಚ್ಚಗಳನ್ನು ಷೆಡ್ಯೂಲ್-1, ಭಾಗ-ಬಿ ಯಲ್ಲಿರುವಂತೆ **ದಿನಾಂಕ 28.04.2026 ರಂದು ಸಂಜೆ 4.00** ಗಂಟೆಗೆ ಅಥವಾ ಮುಂಚಿತವಾಗಿ ತಮ್ಮ ಸಾಲಗಳು ಮತ್ತು ವೆಚ್ಚಗಳನ್ನು ಪಾವತಿಸಿದ್ದಲ್ಲಿ ಅಧಿಕೃತ ಅಧಿಕಾರಿಯವರು ಮಾರಾಟ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಬಹುದು, ಮಾರಾಟ ಪ್ರಕ್ರಿಯೆ ಪೂರ್ಣಗೊಂಡ ನಂತರ ಮಾಹಿತಿಗಳು ಅಥವಾ ಆಫರ್‌ಗಳನ್ನು ನಿಮ್ಮಿಂದ ಸ್ವೀಕರಿಸಲಾಗುವುದಿಲ್ಲ. ಈ ಮೂಲಕ ಸೂಚಿಸುವುದೇನೆಂದರೆ ಷೆಡ್ಯೂಲ್-1 ಭಾಗ-ಎ ಯಲ್ಲಿ ಆಸ್ತಿಯು ಹಾಗೂ ಷೆಡ್ಯೂಲ್ -2 ಭಾಗ-ಬಿ ಯಲ್ಲಿ ನಮೂದಿಸಿರುವ ಸಾಲಗಳಿಗಿಂತ ಕಡಿಮೆ ಇದ್ದಲ್ಲಿ ಬರಬೇಕಾದ ಬಾಕಿ ವಸೂಲಾತಿಗಾಗಿ ಕಾನೂನಿನನ್ವಯ ಬ್ಯಾಂಕ್ ಕ್ರಮ ಕೈಗೊಳ್ಳುತ್ತದೆ.

ಮಾರಾಟದ ನಿಯಮಗಳು:

1. ಮಾರಾಟವನ್ನು **ಎಲ್ಲಿ ಹೇಗಿದೆಯೋ ಹಾಗೆ** ಮತ್ತು ಯಾವುದೇ ಆಧಾರವನ್ನು ಪಡೆಯದೆ ಮತ್ತು ಯಾವುದೇ ಸ್ಥಿತಿಯಲ್ಲಿ ಅಥವಾ ಇತರೆ ಯಾವುದೇ ಕಾರಣಗಳು ಆಸ್ತಿಗೆ ಧಕ್ಕೆಯಾಗದಂತೆ ಮಾರಾಟ ಮಾಡಲಾಗುವುದು. ಬ್ಯಾಂಕ್ ಆಸ್ತಿಗೆ ಧಕ್ಕೆ ಬರಬಹುದಾದ ಯಾವುದೇ ಸ್ಥಿತಿಗೆ ಅಥವಾ ಯಾವುದೇ ಹಕ್ಕುಗಳಿಗೆ ಜವಾಬ್ದಾರರಾಗಿರುವುದಿಲ್ಲ.
2. ಷೆಡ್ಯೂಲ್-1, ಭಾಗ-ಬಿ ರಲ್ಲಿ ನಿರ್ದಿಷ್ಟವಾಗಿ ನಮೂದಿಸಲಾಗಿರುವ ವಿವರಗಳು ಬ್ಯಾಂಕ್‌ಗೆ ತಿಳಿದಿರುವ ನಿಖರವಾದ ವಿವರಗಳಾಗಿರುತ್ತವೆ ಮತ್ತು ಇದರಲ್ಲಿನ ಯಾವುದೇ ತಪ್ಪುಗಳಿಗೆ, ತಪ್ಪು ಹೇಳಿಕೆ ಅಥವಾ ತೆಗೆದು ಹಾಕಿರುವ ವಿವರಗಳಿಗೆ ಬ್ಯಾಂಕ್ ಉತ್ತರದಾಯಿತ್ವವಲ್ಲ.
3. ದಾಖಲಾದ ಕಾರಣಗಳಿಗೆ ಮಾರಾಟವನ್ನು ರದ್ದುಗೊಳಿಸುವ/ಮುಂದೂಡುವ ಮತ್ತು ಸಲ್ಲಿಸಲಾದ ಬಿಡ್‌ಗಳನ್ನು ವಾಪಸ್ ಮಾಡುವ ಹಕ್ಕನ್ನು ಅಧಿಕೃತ ಅಧಿಕಾರಿಯವರ ನಿರ್ಣಯಕ್ಕೆ ಬಿಟ್ಟದ್ದು ಮತ್ತು ಈ ಕುರಿತು ಬಿಡ್‌ದಾರರಿಂದ ಯಾವುದೇ ಕ್ಲೈಮನ್ನು ಅಥವಾ ಯಾವುದೇ ಪ್ರತಿನಿಧಿಗೆ ಬ್ಯಾಂಕ್ ಅವಕಾಶ ನೀಡುವುದಿಲ್ಲ.
4. ಸ್ಥಿರಾಸ್ತಿಯ ಮಾರಾಟದಲ್ಲಿ ಯಶಸ್ವಿ ಬಿಡ್‌ದಾರರೆಂದು ನಿಗದಿಯಾದ ವ್ಯಕ್ತಿಯ 25% ಮೊತ್ತವನ್ನು ಸ್ಥಳದಲ್ಲೇ ಕೂಡಲೇ ಪಾವತಿಸಬೇಕು ಮತ್ತು ಬಾಕಿ ಮೊತ್ತವನ್ನು ಬ್ಯಾಂಕ್‌ನಿಂದ ಮಾರಾಟವು ದೃಢೀಕರಣಗೊಳಿಸಿ, 15 ದಿನಗಳೊಳಗೆ ಪಾವತಿಸಬೇಕು. ಸದರಿ ಮೊತ್ತವನ್ನು ನಿಗಧಿಪಡಿಸಿದ ದಿನಾಂಕದ ಒಳಗೆ ಪಾವತಿಸಲು ವಿಫಲರಾದಲ್ಲಿ ಖರೀದಿದಾರರೆಂದು ನಿರ್ಧರಿಸಿದ ವ್ಯಕ್ತಿಯು ಈವರೆಗೆ ಪಾವತಿಸಿದ ಇಎಂಡಿಯೂ ಒಳಗೊಂಡಂತೆ ಪೂರ್ತಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಮತ್ತು ಆ ಆಸ್ತಿಯನ್ನು ಮರು ಮಾರಾಟ ಮಾಡಲಾಗುವುದು ಹಾಗೂ ಈ ಸುಸ್ತಿದಾರರಿಂದ ಖರೀದಿದಾರರಿಗೆ ಆಸ್ತಿಯ ಮೇಲೆ ಯಾವುದೇ ಮೊತ್ತದ ಮೇಲೆ ಯಾವುದೇ ಕ್ಲೇಮುಗಳು ಇರುವುದಿಲ್ಲ.
5. ಮಾರಾಟ ಪತ್ರವನ್ನು ನೀಡಿದ ನಂತರ ಮಾರಾಟವನ್ನು ಪೂರ್ಣಗೊಳಿಸಲಾಗುವುದು ಮತ್ತು ಆ ಕುರಿತು ಯಾವುದೇ ಕ್ಲೈಮುಗಳಿಗೆ ಬ್ಯಾಂಕ್ ಅವಕಾಶ ನೀಡುವುದಿಲ್ಲ.
6. ಆಸ್ತಿಯನ್ನು ಮಾರಾಟ ಮಾಡಲು ಬ್ಯಾಂಕ್ ಯಾರನ್ನೂ ನಿಯೋಜಿಸುವುದಿಲ್ಲ ಅಥವಾ ನಿಯೋಜಿಸುವ ಒಪ್ಪಂದವಾಗಲಿ ಪ್ರತಿನಿಧಿಯನ್ನಾಗಲಿ ಸೂಚಿಸುವುದಿಲ್ಲ. ಮಾರಾಟವನ್ನು ಯಾವುದೇ ಸೂಕ್ತ ಕಾರಣಗಳಿಂದ ರದ್ದುಗೊಳಿಸುವ/ ಮುಂದೂಡುವ ಅಥವಾ ಯಾವುದೇ ಕಾರಣಗಳನ್ನು ನೀಡದೆ ರದ್ದುಗೊಳಿಸುವ ಅಧಿಕಾರವನ್ನು ಬ್ಯಾಂಕ್ ಹೊಂದಿದ್ದು ಇದನ್ನು ಯಾವುದೇ ಬಿಡ್‌ದಾರರು ಪ್ರಶ್ನಿಸುವಂತಿಲ್ಲ.
7. ಬ್ಯಾಂಕ್ ಬಿಡ್ಡುಗಳನ್ನು ಯಾವುದೇ ಹಂತದಲ್ಲಿ ಅಂಗೀಕರಿಸುವ/ ತಿರಸ್ಕರಿಸುವ/ ಬದಲಾಯಿಸುವ, ಮಾರ್ಪಡಿಸುವ ಯಾವುದೇ ಮಾರಾಟದ ನಿಯಮವನ್ನು ಮನ್ನಾ ಮಾಡುವ ಅಧಿಕಾರವನ್ನು ಬ್ಯಾಂಕ್ ಕಾಯ್ದಿರಿಸಿಕೊಂಡಿದೆ.
8. ಶಾಸನಬದ್ಧ ಬಾಕಿಗಳಾದ ಆಸ್ತಿತೆರಿಗೆಗಳು/ಖಾತ/ಸೆಸ್ ಮತ್ತು/ ಅಥವಾ ಬಿಲ್ಡರ್/ ಸೊಸೈಟಿ ಅಸೋಸಿಯೇಷನ್/ಕಾಂಡೋಮಿನಿಯಂ/ಅಪಾರ್ಟ್‌ಮೆಂಟ್ ಅಭಿವೃದ್ಧಿ ಬಾಕಿಗಳು, ಸಂಘದ ನಿಧಿಗಳಿಗೆ ಕೊಡುಗೆ, ವರ್ಗಾವಣೆ ಚಾರ್ಜ್‌ಗಳು, ವಿದ್ಯುತ್ ಬಾಕಿಗಳು, ನೀರಿನ ಚಾರ್ಜ್‌ಗಳ ಬಾಕಿಗಳನ್ನು ಬಿಡ್ಡುದಾರರು/ಆಫರ್‌ಗಳು/ಭಾವಿ ಖರೀದಿದಾರರು ಮೊದಲೇ ಖಚಿತ ಪಡಿಸಿಕೊಳ್ಳಬೇಕು ಮತ್ತು ಅದನ್ನು ಖರೀದಿದಾರನು ಮಾರಾಟ ಪ್ರಮಾಣ ಪತ್ರವನ್ನು ಬರೆದು ಕೊಡುವ ಮುಂಚೆ ಪಾವತಿಮಾಡತಕ್ಕದು ಮತ್ತು ಮಾರಾಟಕ್ಕೆ ಪ್ರಾಸಂಗಿಕವಾದ ಎಲ್ಲಾ ವೆಚ್ಚಗಳನ್ನು ಖರೀದಿದಾರನೇ ಭರಿಸತಕ್ಕದು.
9. ಅಧಿಕೃತ ಅಧಿಕಾರಿಯವರು **ಎಲ್ಲಿ ಹೇಗಿದೆಯೋ ಹಾಗೆ ಆಧಾರದ ಮೇಲೆ** ಆಸ್ತಿಯನ್ನು ಮಾರಾಟ ಮಾಡುತ್ತಾರೆ ಮಾರಾಟ ಪ್ರಕ್ರಿಯೆ ಮುಗಿದ ನಂತರ ಯಶಸ್ವಿ ಬಿಡ್‌ದಾರರಿಂದ ಮಾರಾಟವಾಗಿರುವ ಆಸ್ತಿಯ ಬಗ್ಗೆ ಯಾವುದೇ ಸಮಸ್ಯೆ ತಂಟೆ/ತಕರಾರು ಬಂದಲ್ಲಿ ಅದಕ್ಕೆ ಅಧಿಕೃತ ಅಧಿಕಾರಿಯವರು ಜವಾಬ್ದಾರರಾಗಿರುವುದಿಲ್ಲ. ಆಸ್ತಿಯನ್ನು ತೆರವು ಮಾಡಿಸುವುದಕ್ಕಾಗಲೀ / ಸ್ವಾಧೀನಕ್ಕೆ ತೆಗೆದುಕೊಳ್ಳುವುದಕ್ಕಾಗಲೀ ಅಥವಾ ಯಾವುದೇ ತಕರಾರುಗಳನ್ನು ಪರಿಹರಿಸಿಕೊಳ್ಳಲು ಯಶಸ್ವಿ ಬಿಡ್‌ದಾರರೇ ಏರ್ಪಾಡು ಮಾಡಿಕೊಳ್ಳಬೇಕು. ಮಾರಾಟ ಪ್ರಕ್ರಿಯೆ ಮುಗಿದ ನಂತರ ಯಶಸ್ವಿ ಬಿಡ್‌ದಾರರು ಯಾವುದೇ ಕ್ಲೈಮುಗಳು/ತಗಾದೆಯನ್ನು ಅಧಿಕೃತ ಅಧಿಕಾರಿಯವರ ಗಮನಕ್ಕೆ ತರುವಂತಿಲ್ಲ.

ಮೇಲೆ ತಿಳಿಸಿರುವ ಮಾರಾಟದ ನಿಯಮ ನಿಬಂಧನೆಗಳಿಗೆ ಅನುಗುಣವಾಗಿ ಷೆಡ್ಯೂಲ್-1, ಭಾಗ-ಎ ನಲ್ಲಿರುವ ಆಸ್ತಿಯನ್ನು ಖರೀದಿಸಲು ಆಸಕ್ತಿಯುಳ್ಳ ವ್ಯಕ್ತಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

- **ಷೆಡ್ಯೂಲ್ 1ನೇ** ಆಸ್ತಿಗೆ ಮುಚ್ಚಿದ ಟೆಂಡರ್‌ಗಳನ್ನು **ದಿನಾಂಕ 28.04.2026 ಸಂಜೆ 4.00 ಗಂಟೆಯ** ಒಳಗೆ ಭರ್ತಿ ಮಾಡಿ ಮೇಲೆ ತಿಳಿಸಿರುವ ಬ್ಯಾಂಕ್‌ನ ವಿಳಾಸಕ್ಕೆ ಅರ್ಜಿಯ ಜೊತೆ ಪಾವತಿಸಬೇಕು. ಡಿ.ಡಿ/ಪಿ.ಒ. ಅನ್ನು **ದಿ ಮುಸ್ಲಿಂ ಕೋ-ಆಪರೇಟಿವ್ ಬ್ಯಾಂಕ್ ನಿ., ಮೈಸೂರು-570001** ಇವರ ಹೆಸರಿನಲ್ಲಿ ಮೈಸೂರುನಲ್ಲಿ ಪಾವತಿಯಾಗುವಂತೆ ಪಡೆಯಬೇಕು ಬಿಡ್ ಅರ್ಜಿಗಳನ್ನು **ದಿ ಮುಸ್ಲಿಂ ಕೋ-ಆಪರೇಟಿವ್ ಬ್ಯಾಂಕ್ ನಿ., ಮೈಸೂರು-570001** ಆಫೀಸಿನಿಂದ ಪಡೆಯಬಹುದು. ಚೆಕ್ ಮೂಲಕ ಸ್ವೀಕರಿಸಲಾಗುವುದಿಲ್ಲ. ಚೆಕ್‌ಗಳ ಜೊತೆಗೆ ಕಳುಹಿಸಲಾಗುವ ಬಿಡ್‌ಗಳನ್ನು ಅನರ್ಹಗೊಳಿಸಲಾಗುವುದು. ಬಿಡ್‌ಗಳು ತೆರೆಯುವ ದಿನಾಂಕ **ಷೆಡ್ಯೂಲ್-1 ಭಾಗ-ಎ ಆಸ್ತಿಯು ದಿನಾಂಕ 29.04.2026 ರಂದು ಬೆಳಿಗ್ಗೆ 11.30 ಗಂಟೆಯ ನಂತರ** ಅಧಿಕೃತ ಅಧಿಕಾರಿಯವರ ಉಪಸ್ಥಿತಿಯಲ್ಲಿ ಮತ್ತು ಪ್ರಸ್ತುತ ಬಿಡ್‌ದಾರರಿಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಆಸ್ತಿ **ದಿ ಮುಸ್ಲಿಂ ಕೋ-ಆಪರೇಟಿವ್ ಬ್ಯಾಂಕ್ ನಿ., ಮೈಸೂರು-570001** ಇವರ ಸಮ್ಮುಖದಲ್ಲಿ ತೆರೆಯಲಾಗುವುದು.
- ಷರತ್ತುಗೊಳಪಟ್ಟಿರದ ಬಿಡ್‌ಗಳನ್ನು ತಿರಸ್ಕರಿಸಲಾಗುವುದು.
- ಒಂದು ವೇಳೆ ಒಂದಕ್ಕಿಂತ ಹೆಚ್ಚು ಗರಿಷ್ಠ ಬಿಡ್‌ಗಳು ಇದ್ದು, ಒಂದೇ ಆಫರ್ ಬೆಲೆಯನ್ನು ಹೊಂದಿದ್ದರೆ, ಒಂದೇ ಮೊತ್ತದ ಆಫರ್‌ಗಳನ್ನು ಹೊಂದಿರುವ ಬಿಡ್‌ಗಳಬಗ್ಗೆ ಅಧಿಕೃತ ಅಧಿಕಾರಿಯವರ ನಿರ್ಣಯಕ್ಕೆ ಬಿಟ್ಟದ್ದು,
- ಇಂಥ ಸಮಯದಲ್ಲಿ ಬಿಡ್ಡಿನ ಮೊತ್ತವನ್ನು ಹೆಚ್ಚಿಸುವ ಅಥವಾ ಬಿಡ್‌ನ ವಿಧಾನವನ್ನು ಬದಲಾಯಿಸುವ ಅಧಿಕಾರವನ್ನು ಅಧಿಕೃತ ಅಧಿಕಾರಿಯವರು ಹೊಂದಿರುತ್ತಾರೆ.
- ದಲ್ಲಾಳಿ / ಮಧ್ಯವರ್ತಿಗಳಿಗೆ ಯಾವುದೇ ಅವಕಾಶಗಳಿರುವುದಿಲ್ಲ.
- ಬಿಡ್‌ದಾರರು ಮಾತ್ರ ಹರಾಜಿನಲ್ಲಿ ಭಾಗವಹಿಸತಕ್ಕದ್ದು.
- ಸಾಲಗಾರರಿಗೆ ಮಾರಾಟದ ನೋಟೀಸ್ ನೀಡಲಾದ **ದಿನಾಂಕ: 26.03.2026.**
- ಬಿಡ್‌ದಾರರು ಹರಾಜು ದಿನಾಂಕದ ಮತ್ತು ಹರಾಜು ಸಮಯದ ಒಳಗೆ ಮುಂಗಡ ಠೇವಣಿಯನ್ನು ಡಿ.ಡಿ. ಮುಖಾಂತರ ಪಾವತಿಸಬೇಕು ಹಾಗೂ ಪಾನ್ ಮತ್ತು ಆಧಾರ್ ಪ್ರತಿಯನ್ನು ಕೂಡ ಹಾಜರುಪಡಿಸಬೇಕು.
- **ಇಚ್ಛಿಸುವ ಬಿಡ್‌ದಾರರು ಆಸ್ತಿಯನ್ನು ಪರಿವೀಕ್ಷಿಸಲು ಮತ್ತು ಹೆಚ್ಚಿನ ವಿವರಗಳಿಗೆ ಹೇಮಂತ್ ಕುಮಾರ್ ಮೊಬೈಲ್: 9480365397 ಇವರನ್ನು ಸಂಪರ್ಕಿಸುವುದು.**

ದಿನಾಂಕ: 28.03.2026
ಸ್ಥಳ: ಮೈಸೂರು.

ಸಹಿ/- ಅಧಿಕೃತ ಅಧಿಕಾರಿ
ದಿ ಮುಸ್ಲಿಂ ಕೋ-ಆಪರೇಟಿವ್ ಬ್ಯಾಂಕ್ ನಿ., ಮೈಸೂರು.

ಲಕ್ಷಾಂತರ ಭಕ್ತರ ಜಯಘೋಷದೊಂದಿಗೆ

ವಿಜೃಂಭಣೆಯಿಂದ ನಡೆದ ವೈರಮುಡಿ ಉತ್ಸವ





ಶನಿವಾರ ರಾತ್ರಿ ನಡೆದ ಚೆಲುವನಾರಾಯಣಸ್ವಾಮಿ ವೈರಮುಡಿ ಉತ್ಸವ. (ಎಡಚಿತ್ರ) ಉಸ್ತುವಾರಿ ಸಚಿವ ಚಲುವರಾಯಸ್ವಾಮಿ, ಶಾಸಕ ರಮೇಶ್ ಬಂಡಿಸಿದ್ದೇಗೌಡ ಪಾಲ್ಗೊಂಡಿದ್ದರು.

ಮೇಲುಕೋಟೆ, ಮಾ.28– ಶ್ರೀ ಚೆಲುವ ನಾರಾಯಣ ಸ್ವಾಮಿಯವರ ವಿಶ್ವವಿಖ್ಯಾತ ವೈರಮುಡಿ ಕಿರೀಟಧಾರಣ ಮಹೋತ್ಸವ ಮಹಾ ವಿಷ್ಣುವಿನ ಅನುಗ್ರಹಕ್ಕೆ ಪ್ರಮುಖ ದಿನವಾದ ಶನಿವಾರ ರಾತ್ರಿ ಲಕ್ಷಾಂತರ ಭಕ್ತರ ಜಯಘೋಷದೊಂದಿಗೆ ವಿಜೃಂಭಣೆಯಿಂದ ನೆರವೇರಿತು

ವೈರಮುಡಿ ಕಿರೀಟವನ್ನು ಶ್ರೀದೇವಿ ಭೂದೇವಿಯರೊಂದಿಗೆ ಗರುಡಾರೂಢನಾದ ಚೆಲುವನಾರಾಯಣಸ್ವಾಮಿಗೆ ರಾತ್ರಿ 8 ಗಂಟೆಗೆ ತೊಡಿಸಲಾಯಿತು. ಇದಕ್ಕೂ ಮುನ್ನ ಗರುಡದೇವನ ಉತ್ಸವ ನಡೆದ ನಂತರ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಸಮಕ್ಷಮದಲ್ಲಿ ಮಹಾ ಮಂಗಳಾರತಿ ನೆರವೇರಿಸಿ, ಭಕ್ತರ ಗೋವಿಂದ ನಾಮ ಘೋಷಣೆಯೊಂದಿಗೆ ವೈರಮುಡಿ ಉತ್ಸವಕ್ಕೆ ಚಾಲನೆ ದೊರೆಯಿತು. ವೈರಮುಡಿ ಉತ್ಸವ ರಾಜಗೋಪುರದ ಬಳಿ ಬರುತ್ತಿದ್ದಂತೆ ಭಕ್ತರ ಹರ್ಷೋದ್ಗಾರ ಮುಗಿಲು ಮುಟ್ಟಿತ್ತು. ಸುಶ್ರಾವ್ಯ ಮಂಗಳವಾದ್ಯದೊಂದಿಗೆ ಸಾಗಿದ ಸ್ವಾಮಿಯ ಉತ್ಸವವನ್ನು ಮೈಸೂರು ಮಹಾರಾಜರು ವೈರಮುಡಿ ಉತ್ಸವ ವೀಕ್ಷಿಸುತ್ತಿದ್ದ ಪುಷ್ಪಮಂಟಪದಲ್ಲಿ ಪ್ರತಿಷ್ಠಾಪಿಸಲಾಯಿತು. ತಡರಾತ್ರಿ 3.30 ರವರೆಗೆ ನಡೆದ ವೈರಮುಡಿ ಉತ್ಸವ ವೇಳೆ ವಾನಮಾಮಲೆ ಬೀದಿ, ರಥದಬೀದಿ ರಾಜ ಬೀದಿಗಳಲ್ಲಿ ಕಿಕ್ಕಿರಿದು ತುಂಬಿದ್ದ ಲಕ್ಷಾಂತರ ಭಕ್ತರು ಸ್ವಾಮಿಯ ದರ್ಶನ ಮಾಡಿ ಪುನೀತಭಾವವನ್ನೊಂದಿದರು.

ಶಾಸಕ ದರ್ಶನ್ ಪುಟ್ಟಣ್ಣಯ್ಯ ನೇತೃತ್ವದಲ್ಲಿ ಜಿಲ್ಲಾಡಳಿತ ಅತ್ಯುತ್ತಮ ವ್ಯವಸ್ಥೆ ಮಾಡಿತ್ತು. ಜಿಲ್ಲಾಧಿಕಾರಿ ಕುಮಾರ, ಅಪರ ಜಿಲ್ಲಾಧಿಕಾರಿ ಶಿವಾನಂದಮೂರ್ತಿ, ಜಿಪಂ ಸಿಇಓ ನಂದಿನಿ ರಥೋತ್ಸವದ ಮೇಲ್ವಿಚಾರಣೆ ವಹಿಸಿದ್ದರು. ಎಸ್ಪಿ ಡಾ.ಶೋಭಾರಾಣಿ ಮಾರ್ಗದರ್ಶನದಲ್ಲಿ 1500ಮಂದಿ ಪೊಲೀಸರನ್ನು ನಿಯೋಜಿಸಲಾಗಿತ್ತು. ವೈರಮುಡಿ ಮಹೋತ್ಸವದ ಅಂಗವಾಗಿ ಜಕ್ಕನಹಳ್ಳಿಯಿಂದ ಮೇಲುಕೋಟೆವರೆಗೆ ರಾಜ ಬೀದಿಗಳು, ಯೋಗನರಸಿಂಹ ಸ್ವಾಮಿ ಬೆಟ್ಟ, ಕಲ್ಯಾಣಿ ಹಾಗೂ ಉತ್ಸವ ಬೀದಿಗಳಲ್ಲಿ ಆಕರ್ಷಕ ದೀಪಾಲಂಕಾರ ಮಾಡಲಾಗಿತ್ತು. ಯತಿರಾಜದಾಸರ್ ಗುರುಪೀಠದ ಎಸ್.ಎನ್‌ಐ ಸಾಂಸ್ಕೃತಿಕ ವೇದಿಕೆಯಡಿ ವೈರಮುಡಿ ಉತ್ಸವಕ್ಕೆ ನಾದೋಪಾಸನ ಸೇವೆಯಲ್ಲಿ ವಿದ್ವಾನ್ ಶ್ರೀಧರ್, ವಿದ್ವಾನ್ ಆನಂದ ತಂಡ ಸುಶ್ರಾವ್ಯವಾದ ನಾದಸ್ವರ ವಾದನ ಕೈಂಕರ್ಯ ನಡೆಸಿತು.

ಪಾಂಡವಪುರ: ಪಟ್ಟಣಕ್ಕೆ ಆಗಮಿಸಿದಾಗ ತಾಲೂಕು ಆಡಳಿತದ ಪರವಾಗಿ ಎಡಿಸಿ ಬಿ.ಸಿ.ಶಿವಾನಂದಮೂರ್ತಿ, ತಹಸೀಲ್ದಾರ್ ಬಸವರೆಡ್ಡಪ್ಪ ರೋಣದ ತಾಲೂಕು ಕಚೇರಿ ಬಳಿ ಸಂಪ್ರದಾಯದಂತೆ ಬರಮಾಡಿಕೊಂಡು ಪೂಜೆ ಸಲ್ಲಿಸಿದರು. ವೈರಮುಡಿ, ರಾಜಮುಡಿ ಕಿರೀಟಗಳನ್ನು ತಾಲೂಕಿನ ಗಡಿಭಾಗವಾದ ಪಿಎಸ್‌ಎಸ್‌ಕೆ ಸಕ್ಕರೆ ಕಾರ್ಖಾನೆಯ ಬಳಿ ಮಾಜಿ ಸಚಿವ ಸಿ.ಎಸ್. ಪುಟ್ಟರಾಜು, ಶಾಸಕ ದರ್ಶನ್ ಪುಟ್ಟಣ್ಣಯ್ಯ ಸ್ವಾಗತಿಸಿದರು. ಪಟ್ಟಣದ ಲಾಲ್ ಬಹದ್ದೂರು ಟಾಕೀಸ್ ಎದುರು, ತಾಲೂಕು ಕಚೇರಿ, ಕುಂಟೇಗೌಡರ ಮಿಲ್, ಸಿದ್ದಿಮಂಟಪ, ಮಳವಳಯ್ಯನ ಛತ್ರ, ಬೀರಶೆಟ್ಟಹಳ್ಳಿ, ಬನ್ನಘಟ್ಟ, ಕೆ. ಹೊಸೂರು ಗೇಟ್, ಟಿ.ಎಸ್. ಛತ್ರ ಮಹದೇಶ್ವರಪುರ, ನೀಲನಹಳ್ಳಿ ಗೇಟ್, ಮಾಣಿಕ್ಯನಹಳ್ಳಿ, ಜಕ್ಕನಹಳ್ಳಿ ಮೂಲಕ ದೇವಸ್ಥಾನ ತಲುಪವವರೆಗೂ ಮಾರ್ಗದುದ್ದಕ್ಕೂ ಹಲವು ಕಡೆಗಳಲ್ಲಿ ಸ್ವಾಮಿಯ ಕಿರೀಟಕ್ಕೆ ಪೂಜೆ ಸಲ್ಲಿಸುತ್ತಿದ್ದರು.

ಅಂಬರಹಳ್ಳಿಯಲ್ಲಿ ವಿದ್ಯುತ್ ಸ್ಪರ್ಶಿಸಿ ಯುವಕನ ಸಾವು



ಭಾರತೀನಗರ.ಮಾ.28–ನೆಲಬಾವಿಯಿಂದ ನೀರೆತ್ತುವ ಪೈಪ್ ಸ್ವಚ್ಛಗೊಳಿಸುವಾಗ ವಿದ್ಯುತ್ ಸ್ಪರ್ಶಿಸಿ ಯುವಕನೊಬ್ಬ ಸಾವನ್ನಪ್ಪಿರುವ ಘಟನೆ ಅಂಬರಹಳ್ಳಿ ಗ್ರಾಮದಲ್ಲಿ ಜರುಗಿದೆ.

ಅಂಬರಹಳ್ಳಿ ಗ್ರಾಮದ ನಿವಾಸಿ ಕೃಷ್ಣ ಎಂಬವರ ಪುತ್ರ ಕಾರ್ತಿಕ್(27) ಎಂಬುವರೇ ಮೃತಪಟ್ಟ ದುರ್ದೈವಿ. ಈತ ತಮ್ಮ ಜಮೀನಿನಲ್ಲಿ ನೀರು ಹಾಯಿಸಲು ಪೈಪನ್ನು ಸ್ವಚ್ಛಗೊಳಿಸುವಾಗ ವಿದ್ಯುತ್ ಸ್ಪರ್ಶಿಸಿ ತೀವ್ರ ಅಸ್ವಸ್ಥಗೊಂಡಿದ್ದಾನೆ. ತಕ್ಷಣ ಈತನನ್ನು ಮಂಡ್ಯ ಸಾಂಜೋ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಲಾಯಿತಾದರೂ ಚಿಕಿತ್ಸೆ ಫಲಕಾರಿಯಾಗದೆ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾನೆ. ಮಂಡ್ಯ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮಾಜಿ ಸಚಿವ ಡಿ.ಸಿ.ತಮ್ಮಣ್ಣ ಅವರು ಅಂತ್ಯಕ್ರಿಯೆಯಲ್ಲಿ ಭಾಗವಹಿಸಿದ್ದರು.

ಜಿಲ್ಲಾ ಖಜಾನೆಯಿಂದ ವೈರಮುಡಿ ಆಭರಣ



ಡಿಸಿ, ಎಸ್ಪಿ ವೈರಮುಡಿ, ರಾಜಮುಡಿ ಕಿರೀಟಗಳನ್ನು ಹೊತ್ತುತರುತ್ತಿರುವುದು.

ಮಂಡ್ಯ, ಮಾ.28–ವಿಶ್ವಪ್ರಸಿದ್ಧ ವೈರಮುಡಿ ಉತ್ಸವಕ್ಕೆ ಜಿಲ್ಲಾ ಖಜಾನೆಯಿಂದ ವೈರಮುಡಿಯನ್ನು ಸಕಲ ಸರ್ಕಾರಿ ಗೌರವದೊಂದಿಗೆ ಬಿಗಿ ಭದ್ರತೆಯಲ್ಲಿ ಮೇಲುಕೋಟೆಗೆ ಕೊಂಡೊಯ್ಯಲಾಯಿತು.

ಶನಿವಾರ ಬೆಳಿಗ್ಗೆ 6.45ರ ಶುಭ ಮುಹೂರ್ತದಲ್ಲಿ ನಗರದ ಜಿಲ್ಲಾ ಖಜಾನೆಯಿಂದ ಜಿಲ್ಲಾಧಿಕಾರಿ ಡಾ. ಕುಮಾರ ಮತ್ತು ಎಸ್ ಪಿ ಶೋಭಾರಾಣಿ ತಲೆ ಮೇಲೆ ಹೊತ್ತು ತಂದು ಖಜಾನೆ ದ್ವಾರದಲ್ಲಿರಿಸಿ ಪೂಜೆ ನೆರವೇರಿಸಿದರು. ಜಿಪಂ ಸಿಇಒ ಕೆ.ಆರ್ ನಂದಿನಿ, ಎಡಿಸಿ ಬಿ.ಸಿ. ಶಿವಾನಂದ ಮೂರ್ತಿ, ಮೇಲುಕೋಟೆಯ ಸ್ಥಾನಿಕ ಅರ್ಚಕರು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ವೈರಮುಡಿಗೆ ನಗರದ ಲಕ್ಷ್ಮಿ ಜನಾರ್ಧನ ದೇವಾಲಯದಲ್ಲಿ ಪೂಜೆ ಸಲ್ಲಿಸಿ ಶ್ರೀರಂಗಪಟ್ಟಣ, ಪಾಂಡವಪುರ ಮಾರ್ಗವಾಗಿ ಸಂಜೆ ಐದು ಗಂಟೆಗೆ ಮೇಲುಕೋಟೆ ತಲುಪಲಿದ್ದು, ಹೋಗುವ ದಾರಿಯುದ್ದಕ್ಕೂ ಗ್ರಾಮಗಳಲ್ಲಿ ಪೂಜೆ ಸಲ್ಲಿಸಲಾಗುತ್ತದೆ. ವೈರಮುಡಿಗೆ ದೇಗುಲದ ಆವರಣದಲ್ಲಿ ವಿಶೇಷ ಪೂಜೆ ಸಲ್ಲಿಸಿದ ನಂತರ ಉನ್ನತ ಅಧಿಕಾರಿಗಳ ಸಮ್ಮುಖದಲ್ಲಿ ಆಭರಣಗಳ ಪರಿಶೀಲನೆ ನಡೆಸಿದ ನಂತರ ದೇವರಿಗೆ ತೊಡಿಸಲಾಗುವುದು. ರಾತ್ರಿ 8 ಗಂಟೆ ನಂತರ ವಜ್ರಖಚಿತ ವೈರಮುಡಿ ತೊಡಿಸಿದ ಚೆಲುವ ನಾರಾಯಣಸ್ವಾಮಿ ಉತ್ಸವ ಪಟ್ಟಣದ ರಾಜ ಬೀದಿಗಳಲ್ಲಿ ಸಂಚರಿಸಿದೆ.

ವಿದ್ಯುತ್ ಪ್ರವಹಿಸಿ ಲೈನ್‌ಮೆನ್ ದಾರುಣ ಸಾವು

ಶ್ರೀರಂಗಪಟ್ಟಣ, ಮಾ.28–ವಿದ್ಯುತ್ ಪ್ರವಹಿಸಿ ಲೈನ್‌ಮೆನ್ ದಾರುಣ ಸಾವಿಗೀಡಾಗಿರುವ ಘಟನೆ ತಾಲೂಕಿನ ಹೆಬ್ಬಾಡಿ ಗ್ರಾಮದಲ್ಲಿ ನಡೆದಿದೆ. ಪಾಂಡವಪುರ ತಾಲೂಕಿನ ಮಲ್ಲಿಗೆರೆ ಗ್ರಾಮದ ವಿಶ್ವ(48) ಎಂಬವರೇ ಮೃತ ಖಾಸಗಿ ಲೈನ್‌ಮ್ಯಾನ್. ಖಾಸಗಿಯಾಗಿ ಗುತ್ತಿಗೆದಾರನ ಬಳಿ ಕೆಲಸ ಮಾಡುತ್ತಿದ್ದ ವಿಶ್ವ ಹೆಬ್ಬಾಡಿ ಗ್ರಾಮದಲ್ಲಿ ವಿದ್ಯುತ್ ಕೆಲಸವಿದ್ದ ಕಾರಣ ಕಂಬದ ಮೇಲೆ ಹತ್ತಿ ಕೆಲಸ ನಿರ್ವಹಿಸುವ ವೇಳೆ ವಿದ್ಯುತ್ ಪ್ರವಹಿಸಿದ್ದೇ ಘಟನೆಗೆ ಕಾರಣವಾಗಿದೆ. ಕಂಬದ ಮೇಲೆ ನೇತಾಡಿದ ಮೃತನ ಕಳೇಬರವನ್ನು ನೋಡಿ ಗ್ರಾಮಸ್ಥರು ಕೂಡಲೇ ಪೊಲೀಸರಿಗೆ ದೂರು ನೀಡಿದರು. ಅರಕೆರೆ ಪೊಲೀಸರು ಸ್ಥಳಕ್ಕೆ ಆಗಮಿಸಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಕಡಂಗದಲ್ಲಿ ತಾಲೂಕು ಸಾಹಿತ್ಯ ಸಮ್ಮೇಳನಕ್ಕೆ ನಿರ್ಧಾರ

ಮಡಿಕೇರಿ, ಮಾ.28–ಮಡಿಕೇರಿ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನದ ಪೂರ್ವಭಾವಿ ಸಭೆ ಕಡಂಗದಲ್ಲಿ ನಡೆಯಿತು. ಕಡಂಗದ ಸರಕಾರಿ ಪ್ರಾಥಮಿಕ ಶಾಲೆಯ ಸಭಾಂಗಣದಲ್ಲಿ ತಾಲೂಕು ಘಟಕದ ಅಧ್ಯಕ್ಷೆ ಕಡ್ಲೇರ ತುಳಸಿ ಮೋಹನ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಪರಿಷತ್ತಿನ ಜಿಲ್ಲಾಧ್ಯಕ್ಷ ಎಂ.ಪಿ.ಕೇಶವ ಕಾಮತ್ ನಾಡಿನ ಏಳಿಗೆ, ಏಕತೆಗೆ ಕನ್ನಡ ಸಾಹಿತ್ಯ ಸಮ್ಮೇಳನದ ಪಾತ್ರ ಹಿರಿದು. ನಾಡಿನ ವೈವಿಧ್ಯಮಯ ಕಲೆ, ಸಂಸ್ಕೃತಿಗಳ ಪೋಷಣೆಗೆ ಇದು ಮೆರುಗು ನೀಡುತ್ತವೆ. ಸಮ್ಮೇಳನದ ಯಶಸ್ಸಿಗಾಗಿ ನಾಡಿನ ಸರ್ವರು ಪಣತೊಡಬೇಕೆಂದು ಕರೆ ನೀಡಿದರು.

ಕನ್ನಡ ಸಾಹಿತ್ಯ ಪರಿಷತ್ ನಾಪೋಕ್ಲು ವಲಯ ಅಧ್ಯಕ್ಷ ನೇರವಂಡ ಉಮೇಶ್ ಮಾತನಾಡಿ, ಕಡಂಗ ಗ್ರಾಮದಲ್ಲಿ ನಡೆಯುವ ಈ ಸಮ್ಮೇಳನವನ್ನು ಅತ್ಯಂತ ಯಶಸ್ವಿಯಾಗಿ ನಡೆಸಲು ಯಾವುದೇ ಭಿನ್ನಾಭಿಪ್ರಾಯ ಇಲ್ಲದೆ ಒಂದು ವ್ಯವಸ್ಥಿತ ಕಾರ್ಯವಾಗಬೇಕೆಂದರು. ಸಭೆಯಲ್ಲಿ ನರಿಯಂದಡ ಗ್ರಾ. ಪಂ. ಅಧ್ಯಕ್ಷೆ ಪೆಮ್ಮಂಡ ಕೌಶಿ ಕಾವೇರಮ್ಮ, ಉಪಾಧ್ಯಕ್ಷ ವಿನೋದ್ ನಾಣಯ್ಯ, ಮಣಿ ಅಯ್ಯಮ್ಮ, ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕಿ ಹೇಮಾವತಿ, ಸಾಹಿತಿ ಹಾಗೂ ಶಿಕ್ಷಕಿ ವತ್ಸಲಾ ಶ್ರೀಶ, ಮುಕ್ಕಾಟೀರ ಕಿರಣ್, ಮೊಹಮ್ಮದ್, ಪರಿಷತ್ತಿನ ಸದಸ್ಯರು, ಮತ್ತಿತರರು ಉಪಸ್ಥಿತರಿದ್ದರು.

ಕುಶಾಲನಗರದಲ್ಲಿ ಭಾರಿ ಮಳೆ: ಕೃಷಿಕರಿಗೆ ಸಂತಸ



ಕುಶಾಲನಗರ, ಮಾ.28–ಪಟ್ಟಣ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಲ್ಲಿ ಶನಿವಾರ ಸಂಜೆ ಒಂದು ತಾಸಿಗೂ ಹೆಚ್ಚು ಕಾಲ ಗುಡುಗು ಸಹಿತ ಜೋರು ಮಳೆ ಸುರಿಯಿತು.

ಕುಶಾಲನಗರ ಹೆಬ್ಬಾಲೆ, ತೊರೆನೂರು, ಗುಡ್ಡೆಹೊಸೂರು ಗ್ರಾಮಗಳಲ್ಲಿ ಸಂಜೆ 5 ಗಂಟೆಗೆ ಆರಂಭಗೊಂಡು ತಾಸಿಗೂ ಹೆಚ್ಚು ಕಾಲ ಮಳೆ ಬಂದಿತು. ಜೋರಾಗಿ ಬಂದ ಮಳೆಯಿಂದ ಚರಂಡಿಗಳಲ್ಲಿ ನೀರು ತುಂಬಿ ರಸ್ತೆ ಮೇಲೆ ಹರಿಯಿತು. ಬೈಪಾಸ್ ರಸ್ತೆಯಲ್ಲಿ ತೆಂಗಿನ ಮರವೊಂದು ರಸ್ತೆ ಅಡ್ಡಲಾಗಿ ಬಿದ್ದು, ವಾಹನ ಸಂಚಾರಕ್ಕೆ ತೊಂದರೆ ಉಂಟಾಯಿತು. ಅದೇ ರೀತಿ ಹೆಬ್ಬಾಲೆಯಲ್ಲಿ ತೆಂಗಿನ ಮರಕ್ಕೆ ಸಿಡಿಲು ಬಡಿದು ಬೆಂಕಿ ಹತ್ತಿ ಉರಿಯಿತು. ಬೆಳಿಗ್ಗೆಯಿಂದ ತೀವ್ರವಾಗಿದ್ದ ಬಿಸಿಲಿನ ಧಗೆ ಮಧ್ಯಾಹ್ನ ನಂತರ ಮೋಡ ಕವಿದ ವಾತಾವರಣ ಇತ್ತು. ಸಂಜೆ ವೇಳೆ ಬಂದ ಮಳೆಯಿಂದ ವಾತಾವರಣ ತಂಪಾಗಿಸಿತು. ಜೋರು ಗಾಳಿಯೊಂದಿಗೆ ಸುರಿದ ಮಳೆಯಿಂದಾಗಿ ರೈತರ ಕೃಷಿ ಚಟುವಟಿಕೆಗೆ ಹಾಗೂ ಶುಂಠಿ ಕೃಷಿಕರಿಗೂ ಸಂತಸ ತಂದಿದೆ.

ಗ್ರಾಹಕರ ಹಕ್ಕುಗಳ ಬಗ್ಗೆ ಅರಿವು ಮೂಡಿಸಿ



ಗ್ರಾಹಕರ ಹಕ್ಕು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಗಣ್ಯರು.

ವಿರಾಜಪೇಟೆ, ಮಾ.28– ಗ್ರಾಹಕರ ಹಕ್ಕುಗಳನ್ನು ವಿದ್ಯಾರ್ಥಿಗಳು ತಿಳಿದುಕೊಂಡು ಇತರರಿಗೂ ಅರಿವು ಮೂಡಿಸುವಂತಾಗಬೇಕು ಎಂದು ಹಿರಿಯ ಸಿವಿಲ್ ನ್ಯಾಯಾಧೀಶರಾದ ಆರ್.ಮಂಜುನಾಥ್ ಹೇಳಿದ್ದಾರೆ.

ವಿಶ್ವ ಗ್ರಾಹಕರ ಹಕ್ಕುಗಳ ದಿನಾಚರಣೆ ಅಂಗವಾಗಿ ತಾಲೂಕು ಕಾನೂನು ಸೇವೆಗಳ ಸಮಿತಿ, ವಕೀಲರ ಸಂಘ ಮತ್ತು ಸರಕಾರಿ ಪ್ರಥಮ ದರ್ಜೆ ಕಾಲೇಜು ಸಂಯುಕ್ತ ಆಶ್ರಯದಲ್ಲಿ ವಾಣಿಜ್ಯಶಾಸ್ತ್ರ ವಿಭಾಗದ ವಿದ್ಯಾರ್ಥಿಗಳಿಗೆ ಆಯೋಜಿಸಲಾಗಿದ್ದ ಗ್ರಾಹಕರ ಹಕ್ಕು ಕಾರ್ಯಕ್ರಮವನ್ನು ಉದ್ಘಾಟಿಸಿದ ಅವರು, ದಿನನಿತ್ಯ ಉಪಯೋಗಿಸುವ ವಸ್ತುಗಳು ಕಲಬೆರಕೆ ಆಗದಂತೆ ಎಚ್ಚರ ವಹಿಸಬೇಕು. ಗುಣಮಟ್ಟದ ವಸ್ತುಗಳನ್ನು ಪಡೆದುಕೊಳ್ಳಬೇಕು. ಕೆಲವರು ಹೆಚ್ಚು ಹಣ ಸಂಪಾದನೆಗೋಸ್ಕರ ಪದಾರ್ಥಗಳನ್ನು ಕಲಬೆರಕೆ ಮಾಡಿ ವ್ಯಾಪಾರ ಮಾಡುತ್ತಾರೆ ಅಂತಹವರಿಗೆ ಕಡಿವಾಣ ಹಾಕಲು ಗ್ರಾಹಕರ ವೇದಿಕೆಗೆ ದೂರು ನೀಡಿ ಪರಿಹಾರ ಒದಗಿಸುವಂತೆ ಅರ್ಜಿ ಸಲ್ಲಿಸಬಹುದು. ವಿದ್ಯಾರ್ಥಿಗಳು ಇದರ ಬಗ್ಗೆ ತಿಳಿದುಕೊಂಡು ಅಕ್ಕಪಕ್ಕದ ಮನೆಯವರಿಗೂ ತಿಳಿಸುವಂತಾಗಬೇಕು ಎಂದರು.

ವಕೀಲರ ಸಂಘದ ಅಧ್ಯಕ್ಷ ಸಿ.ಕೆ.ಪೂವಣ್ಣ ಮಾತನಾಡಿ, ಕಲಬೆರಕೆ ವಸ್ತುಗಳನ್ನು ಮಾರಾಟ ಮಾಡುವುದು ಕಂಡಲ್ಲಿ ಮಾಹಿತಿಗಾಗಿ ಬಿಲ್ ಪಡೆದುಕೊಂಡು ಗ್ರಾಹಕರ ವೇದಿಕೆಗೆ ಪರಿಹಾರ ಒದಗಿಸಲು ದೂರು ನೀಡುವಂತೆ ಹೇಳಿದರು.

ಸಂಪನ್ಮೂಲ ವ್ಯಕ್ತಿಗಳಾಗಿದ್ದ ವಕೀಲ ಬಿ.ಎನ್.ತಿಮ್ಮಯ್ಯ ಮಾತನಾಡಿ, ಗ್ರಾಹಕರು ಕೊಂಡುಕೊಳ್ಳುವ ಯಾವುದೇ ವಸ್ತುಗಳಾಗಿರಲಿ ಅವಧಿ ಮುಗಿದಿರುವ ವಸ್ತುಗಳನ್ನು ಉಪಯೋಗಿಸಬಾರದು ವಿದ್ಯಾರ್ಥಿಗಳು ಕಾನೂನಿನ ಬಗ್ಗೆ ತಿಳಿದುಕೊಳ್ಳುವಂತಾಗಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲೆ ಡಿ.ಕೆ. ಸರಸ್ವತಿ ಮಾತನಾಡಿ ಪ್ರತಿವರ್ಷ ಆಚರಿಸಿಕೊಂಡು ಬರುತ್ತಿರುವ ಗ್ರಾಹಕರ ದಿನಾಚರಣೆ ಮತ್ತು ಹಕ್ಕುಗಳ ಬಗ್ಗೆ ವಿದ್ಯಾರ್ಥಿಗಳು ತಿಳಿದುಕೊಳ್ಳುವಂತಾಗಬೇಕು. ವ್ಯಾಪಾರ ಮಾಡುವ ಸಂದರ್ಭ ಕಡಿಮೆ ತೂಕ ಇದ್ದು ಬಿಲ್‌ಗಳಲ್ಲಿ ಹೆಚ್ಚು ಬೆಲೆ ತೋರಿಸುತ್ತಾರೆ ಸಾಮಗ್ರಿಗಳನ್ನು ಕೊಂಡುಕೊಳ್ಳುವ ಸಂದರ್ಭ ಎಚ್ಚರ ಮತ್ತು ಜಾಗೃತಿಯಿಂದ ಇರುವಂತೆ ಹೇಳಿದರು.

ಪ್ರಧಾನ ಸಿವಿಲ್ ನ್ಯಾಯಾಧೀಶ ಪ್ರದೀಪ್ ಪೋತದಾರ್ ಮಾತನಾಡಿದರು, ವಾಣಿಜ್ಯ ಶಾಸ್ತ್ರ ವಿಭಾಗದ ಪ್ರಾಧ್ಯಾಪಕಿ ಪಿ.ಟಿ.ದಮಯಂತಿ ಸ್ವಾಗತಿಸಿದರು. ಪ್ರಾಧ್ಯಾಪಕ ಎನ್. ಗುರುಪ್ರಸಾದ್, ಶಹಿನಾ ಮತ್ತಿತರರಿದ್ದರು.

ಏ.1, ಬೃಹತ್ ಹಿಂದೂ ಜನಜಾಗೃತಿ ಸಮಾವೇಶ



ಸಮಿತಿ ಪದಾಧಿಕಾರಿಗಳು ಶನಿವಾರ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು.

ನಾಪೋಕ್ಲು, ಮಾ.28–ಹಿಂದೂ ವಿರೋಧಿ ಮತ್ತು ರಾಷ್ಟ್ರ ವಿರೋಧಿ ಕೃತ್ಯಗಳನ್ನು ಖಂಡಿಸಿ ಏ.1ರಂದು ಬೃಹತ್ ಹಿಂದೂ ಜನಜಾಗೃತಿ ಜಾಥ ಮತ್ತು ಸಮಾವೇಶ ನಡೆಯಲಿದೆ.

ಹಿಂದೂ ಸುರಕ್ಷಾ ಸಮಿತಿಯ ಸಂಚಾಲಕ ಲವ ನಾಣಯ್ಯ ಮಾತನಾಡಿ, ಅಂದು ಬೆಳಗ್ಗೆ 10 ಗಂಟೆಗೆ ಹಳೇ ತಾಲೂಕು ಜಂಕ್ಷನ್‌ನಿಂದ ಜಾಥ ಆರಂಭಗೊಳ್ಳಲಿದೆ. ಬಳಿಕ ಮಾರುಕಟ್ಟೆ ಆವರಣದಲ್ಲಿ ಜನಜಾಗೃತಿ ಸಭೆ ಆಯೋಜಿಸಲಾಗಿದೆ ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

24 ಗ್ರಾಮಗಳ ಪ್ರಮುಖ ವ್ಯಾಪಾರ ವಹಿವಾಟಿನ ಕೇಂದ್ರವಾದ ನಾಪೋಕ್ಲುವಿನಲ್ಲಿ ಪ್ರಸ್ತುತ ಹಿಂದೂ ಸಮಾಜಕ್ಕೆ ಬೆದರಿಕೆ ಒಡ್ಡುವ ಪ್ರಯತ್ನಗಳು ನಿರಂತರವಾಗಿ ನಡೆಯುತ್ತಿದೆ. ಇದನ್ನು ನಿಗ್ರಹಿಸಬೇಕಾದ ಪೊಲೀಸ್ ಇಲಾಖೆ ನಿಷ್ಕ್ರಿಯವಾಗಿದೆ. ಈ ಬಗ್ಗೆ ಪೊಲೀಸರಿಗೆ ದೂರುಗಳನ್ನು ನೀಡಿದ್ದರೂ ಸೂಕ್ತ ಸ್ಪಂದನೆ ದೊರಕಿಲ್ಲ. ಇಂತಹ ವ್ಯವಸ್ಥೆಗಳನ್ನು ಖಂಡಿಸಿ, ಹಿಂದೂ ಸಮಾಜವನ್ನು ಸಂಘಟಿಸುವ ಸಲುವಾಗಿ ಹಿಂದೂ ಜನಜಾಗೃತಿ ಸಭೆಯನ್ನು ನಡೆಸುತ್ತಿರುವುದಾಗಿ ತಿಳಿಸಿದರು.

ಹಿಂದೂ ಜಾಗರಣಾ ಸಮಿತಿಯ ದಕ್ಷಿಣ ಪ್ರಾಂತ ಕಾರ್ಯಕಾರಿಣಿ ಸಮಿತಿ ಸದಸ್ಯ ಕುಕ್ಕೇರ ಅಜಿತ್ ಮಾತನಾಡಿ, ಹಿಂದೂ ಸಮಾಜ ಎಂದಿಗೂ ಇತರರ ತಂಟೆಗೆ ಹೋಗುವುದಿಲ್ಲ. ಆದರೆ, ನಮ್ಮ ತಂಟೆಗೆ ಬಂದರೆ ಅದನ್ನು ದಿಟ್ಟವಾಗಿ ಎದುರಿಸಲಿದ್ದೇವೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಹಿಂದೂ ಸುರಕ್ಷಾ ಸಮಿತಿ ಸಹ ಸಂಯೋಜಕರಾದ ಪ್ರತೀಪ್, ಸದಸ್ಯರಾದ ಪ್ರತೀಜಾ ಅಚ್ಚಪ್ಪ, ಮಡಿಕೇರಿ ತಾಲೂಕು ಸಂಚಾಲಕ ಬಾಲಕೃಷ್ಣ ರೈ, ಸಮಿತಿ ಸದಸ್ಯ ಚಂದ್ರ ಉಡೋತ್ ಉಪಸ್ಥಿತರಿದ್ದರು.

ಕಂಬೆಯಂಡ ಪಿ.ಗೋಪಾಲ್‌ಗೆ ಬಡ್ತಿ



ಮಡಿಕೇರಿ: ಪೊನ್ನಂಪೇಟೆ ತಾಲೂಕಿನ ತಿತಿಮತಿ ವಿಭಾಗದಲ್ಲಿ ಎಸಿಎಫ್ ಆಗಿ ಸೇವೆ ಸಲಿಸುತ್ತಿದ್ದ ಕಂಬೆಯಂಡ ಪಿ.ಗೋಪಾಲ್ ಅವರನ್ನು ಜಿಲ್ಲೆಯ ಅರಣ್ಯ ಸಂಚಾರಿ ದಳದ ಡಿಎಫ್‌ಓ ಹುದ್ದೆಗೆ ಬಡ್ತಿ ನೀಡಿ ಸರ್ಕಾರ ನೇಮಕಗೊಳಿಸಿದೆ.

ಗೋಪಾಲ್ ಅವರು ಮೂಲತಃ ತಾಲೂಕಿನ ಕಕ್ಕಬೆ ಗ್ರಾಮದವರಾಗಿದ್ದಾರೆ. ಗೋಪಾಲ್ ಈ ಹಿಂದೆ ಸಕಲೇಶಪುರದಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯಾಗಿ ಬಳಿಕ ನಾಗರಹೊಳೆ ಮತ್ತು ತಿತಿಮತಿಯಲ್ಲಿ ಸೇವೆ ಸಲ್ಲಿಸಿದ್ದಾರೆ.

ಕೌಶಲ್ಯ ಶಿಬಿರದಡಿ ರೋಟರಿಯಿಂದ ಟೈಲರಿಂಗ್ ತರಬೇತಿಗೆ ಚಾಲನೆ

ಮಡಿಕೇರಿ, ಮಾ.28–ವೃತ್ತಿಪರ ಕೌಶಲ್ಯ ಶಿಬಿರದಡಿ ರೋಟರಿಯಿಂದ ಆಯೋಜಿಸಿರುವ ಟೈಲರಿಂಗ್ ತರಬೇತಿಗೆ ಸರಕಾರಿ ಪದವಿ ಪೂರ್ವ ಕಾಲೇಜ್‌ನಲ್ಲಿ ಚಾಲನೆ ನೀಡಲಾಯಿತು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಕಾಲೇಜಿನ ಪ್ರಾಂಶುಪಾಲ ಡಾ.ವೆಂಕಟೇಶ್ ಪ್ರಸನ್ನ ವಿದ್ಯಾರ್ಥಿಗಳಿಗೆ ವೃತ್ತಿಪರ ಕೌಶಲ್ಯದ ತರಗತಿಗಳನ್ನು ನಡೆಸಿ ಸ್ವಾವಲಂಬಿ ಬದುಕಿಗೆ ಮಾರ್ಗದರ್ಶನ ನೀಡಲಾಗುತ್ತಿದೆ ಎಂದರು. ಬ್ಯೂಟಿಷಿಯನ್ ಮತ್ತು ಉತ್ತಮ ಆತಿಥ್ಯಕ್ಕೆ ಸಂಬಂಧಿಸಿದ ತರಬೇತಿಗಳನ್ನು ನೀಡಲಾಗುತ್ತಿದ್ದು, ವಿದ್ಯಾರ್ಥಿಗಳು ಶೈಕ್ಷಣಿಕ ಜೀವನದ ನಂತರ ಎದೆಗುಂದದೆ ಸ್ವಯಂ ಉದ್ಯೋಗ ಸೃಷ್ಟಿಸಿಕೊಳ್ಳಬೇಕು ಎನ್ನುವುದು ನಮ್ಮ ಗುರಿಯಾಗಿದೆ.



ಇದೀಗ ಸಾಮಾಜಿಕ ಕಳಕಳಿ ಹೊಂದಿರುವ ರೋಟರಿ ಸಂಸ್ಥೆ ಕೂಡ ವಿದ್ಯಾರ್ಥಿನಿಯರಿಗೆ ಟೈಲರಿಂಗ್ ತರಬೇತಿ ನೀಡಲು ಮುಂದೆ ಬಂದಿರುವುದು ಹೆಚ್ಚು ಉಪಯುಕ್ತ ಎನಿಸಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಗಜೇಂದ್ರನ ಸ್ಥಳಾಂತರಕ್ಕೆ ಸಚಿವರ ಸೂಚನೆ



ಚಾಮರಾಜನಗರ: ದೈಹಿಕ ಸಾಮರ್ಥ್ಯ ಕ್ಷೀಣಿಸುತ್ತಿರುವ ಗಜೇಂದ್ರ ಆನೆಯನ್ನು ಸ್ಥಳಾಂತರಿಸುವ ಸಂಬಂಧ ಸಾರ್ವಜನಿಕರಿಂದ ಬಂದ ಮನವಿಗೆ ಸ್ಪಂದಿಸಿರುವ ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರು ಆನೆಯ ಬಗ್ಗೆ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ವನ್ಯಜೀವಿ ವಿಭಾಗದ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗೆ ಸೂಚನೆ ನೀಡಿದ್ದಾರೆ.

ತಾಲೂಕಿನ ಬೂದಿಪಡಗದಲ್ಲಿರುವ ಗಜೇಂದ್ರ ಆನೆಯ ದೈಹಿಕ ಸಾಮರ್ಥ್ಯ ಕ್ಷೀಣಿಸುತ್ತಿದ್ದು, ಕಾಡಿನಲ್ಲಿ ಬಲಿಷ್ಠ ಕಾಡಾನೆಗಳಿಂದ ಗಜೇಂದ್ರನಿಗೆ ಪ್ರಾಣಾಪಾಯ ಎದುರಾಗುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ಗಜೇಂದ್ರ ಆನೆಯನ್ನು ಕೂಡಲೇ ಮತ್ತಿಗೋಡು ಆನೆ ಶಿಬಿರ ಅಥವಾ ಬೇರೆ ಯಾವುದಾದರೂ ಸುಸಜ್ಜಿತ ಶಿಬಿರಕ್ಕೆ ತಜ್ಞ ಪಶು ವೈದ್ಯರ ಸಮ್ಮುಖದಲ್ಲಿ ಸ್ಥಳಾಂತರಿಸುವಂತೆ ಪರಿಸರ ಹಾಗೂ ವನ್ಯಜೀವಿ ಪ್ರೇಮಿಗಳಾದ ಆರ್.ಮನೋಜ್ ಹಾಗೂ ಬಿ.ಮಂಜುನಾಥ್ ಎಂಬುವವರು ಅರಣ್ಯ ಸಚಿವ ಈಶ್ವರ ಖಂಡ್ರೆ ಅವರಿಗೆ ಮನವಿ ಮಾಡಿದ್ದರು. ಇವರ ಮನವಿಗೆ ಸ್ಪಂದಿಸಿರುವ ಅರಣ್ಯ ಸಚಿವ ಈಶ್ವರ ಬಿ.ಖಂಡ್ರೆ ಅವರು ಗಜೇಂದ್ರ ಆನೆಯ ಬಗ್ಗೆ ಪರಿಶೀಲಿಸಿ ಅದರ ಸ್ಥಳಾಂತರ ಸಂಬಂಧ ಮುಂದಿನ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ವನ್ಯಜೀವಿ ವಿಭಾಗದ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗೆ ಸೂಚನೆ ನೀಡಿದ್ದಾರೆ.

ಗಜೇಂದ್ರ ಆನೆಯು ದಶಕಗಳ ಕಾಲ ಮೈಸೂರು ದಸರಾ ಮಹೋತ್ಸವದಲ್ಲಿ ಪಾಲ್ಗೊಂಡು ಸೇವೆ ಸಲ್ಲಿಸಿದೆ ಎಂಬುದನ್ನು ಸ್ಮರಿಸಬಹುದು.

ಲೋಕ ಅದಾಲತ್‌ನಲ್ಲಿ 85 ಸಾವಿರ ಪ್ರಕರಣ ಇತ್ಯರ್ಥ



ಚಾಮರಾಜನಗರ, ಮಾ.28– ಜಿಲ್ಲೆಯ ನ್ಯಾಯಾಲಯಗಳಲ್ಲಿ ಮಾ.14 ರಂದು ನಡೆದ ಲೋಕ ಅದಾಲತ್‌ನಲ್ಲಿ 85,907 ಪ್ರಕರಣಗಳನ್ನು ಇತ್ಯರ್ಥ ಪಡಿಸಲಾಗಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಜಿ. ಪ್ರಭಾವತಿ ತಿಳಿಸಿದರು.

ನಗರದ ಜಿಲ್ಲಾ ನ್ಯಾಯಾಲಯದ ಆವರಣದಲ್ಲಿರುವ ವ್ಯಾಜ್ಯ ಪೂರ್ವ ಪರಿಹಾರ ಕೇಂದ್ರದಲ್ಲಿ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಚಾಮರಾಜನಗರ, ಯಳಂದೂರು, ಗುಂಡ್ಲುಪೇಟೆ, ಕೊಳ್ಳೇಗಾಲ ನ್ಯಾಯಾಲಯಗಳಲ್ಲಿ ಬಾಕಿ ಇದ್ದ 2,950 ಪ್ರಕರಣಗಳು ಹಾಗೂ 82,957 ವ್ಯಾಜ್ಯ ಪೂರ್ವ ಪ್ರಕರಣಗಳು ಸೇರಿ ಒಟ್ಟು 85,907 ಪ್ರಕರಣಗಳನ್ನು ಇತ್ಯರ್ಥ ಪಡಿಸಲಾಗಿದೆ ಎಂದು ಮಾಹಿತಿ ನೀಡಿದರು.

ನ್ಯಾಯಾಲಯದ ಇತ್ಯರ್ಥ ಪ್ರಕರಣಗಳಲ್ಲಿ 12,89,52,857 ರೂ., ಹಾಗೂ ವ್ಯಾಜ್ಯ ಪೂರ್ವ ಪ್ರಕರಣಗಳಲ್ಲಿ 7,79,30,857 ರೂ. ಸೇರಿ ಒಟ್ಟು 20,68,83,714 ರೂ. ಗಳನ್ನು ರಿಕವರಿ ಮಾಡಲಾಗಿದೆ. ಚಾಮರಾಜನಗರ ನ್ಯಾಯಾಲಯದಲ್ಲಿ 44,358, ಯಳಂದೂರಿನಲ್ಲಿ 8,469, ಕೊಳ್ಳೇಗಾಲದಲ್ಲಿ 21,700, ಗುಂಡ್ಲುಪೇಟೆಯಲ್ಲಿ 11,380 ಪ್ರಕರಣಗಳು ಇತ್ಯರ್ಥವಾಗಿದೆ ಎಂದು ತಿಳಿಸಿದರು.

ನ್ಯಾಯಾಧೀಶರು, ವಕೀಲರು ಹಾಗೂ ಕಕ್ಷಿದಾರರ ಸಹಕಾರದಿಂದ ಕಳೆದ 10 ರಿಂದ 15 ವರ್ಷಗಳಿಂದ ನ್ಯಾಯಾಲಯಗಳಲ್ಲಿ ಬಾಕಿ ಇದ್ದ ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಇತ್ಯರ್ಥಪಡಿಸಲಾಗಿದೆ. ಇದರಿಂದ ಜನರಿಗೆ ಸಮಯ, ಹಣ ಉಳಿತಾಯದೊಂದಿಗೆ ನ್ಯಾಯಾಲಯದ ಮೇಲಿದ್ದ ಹೊರೆಯು ಕಡಿಮೆಯಾಗಿದೆ ಎಂದು ಹೇಳಿದರು.

ಅಲ್ಲದೇ ಕೌಟುಂಬಿಕ ಪ್ರಕರಣ ಸಂಬಂಧ ನಾಲ್ಕು ಜೋಡಿಗಳು ಪರಸ್ಪರ ರಾಜಿ ಸಂಧಾನದ ಮೂಲಕ ಮತ್ತೆ ಒಂದಾಗಿದ್ದಾರೆ. ಕಳೆದ ಬಾರಿಗಿಂತಲೂ ಈ ಸಲ ಹೆಚ್ಚಿನ ಪ್ರಮಾಣದಲ್ಲಿ ಹಣ ರಿಕವರಿಯಾಗಿದೆ. ಮುಂದಿನ ಲೋಕ ಅದಾಲತ್‌ನಲ್ಲಿ ಹೆಚ್ಚಿನ ಪ್ರಕರಣಗಳನ್ನು ಇತ್ಯರ್ಥಪಡಿಸಲು ಶ್ರಮಿಸಲಾಗುವುದು. ಜನರು ಲೋಕ ಅದಾಲತ್ ಅನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಈಶ್ವರ್, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ರಾಮಸಮುದ್ರ ಪುಟ್ಟಸ್ವಾಮಿ ಇದ್ದರು.

ರಾಘವಾಪುರ ಡೇರಿಗೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಬೇಗೂರು: ಸಮೀಪದ ರಾಘವಾಪುರ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಎಂ.ನಾಗೇಶ್, ಉಪಾಧ್ಯಕ್ಷರಾಗಿ ಶಿವಣ್ಣ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಸಂಘದ ಕಚೇರಿಯಲ್ಲಿ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಎಂ.ನಾಗೇಶ್, ಶಿವಣ್ಣ ಬಿಟ್ಟರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಇಬ್ಬರೂ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ನೂತನ ಅಧ್ಯಕ್ಷ, ಉಪಾಧ್ಯಕ್ಷರನ್ನು ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷರಾದ ಎಚ್.ಎಸ್. ನಂಜುಂಡ ಪ್ರಸಾದ್ ಅಭಿನಂದಿಸಿದರು. ಸಂಘದ ಸಭಾ ಭವನಕ್ಕೆ 3 ಲಕ್ಷ ರೂ. ಅನುದಾನ ನೀಡುವುದಾಗಿ ಭರವಸೆ ನೀಡಿದ್ದಾರೆ. ನೂತನ ಅಧ್ಯಕ್ಷ ಎಂ. ನಾಗೇಶ್, ಸಂಘದ ಪ್ರಗತಿಗೆ ಶ್ರಮಿಸುವುದಾಗಿ ಹೇಳಿದ್ದಾರೆ.

ಹಾಪ್ ಕಾಮ್ಸ್ ಅಧ್ಯಕ್ಷ ಎಂ.ನಾಗೇಶ್ ರಾಘವಾಪುರ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಇವರ ತಂದೆ ಎಂ. ಮಹದೇವಪ್ಪ ಕೂಡ ಸಹಕಾರ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸಿ ಹಾಪ್ ಕಾಮ್ಸ್ ಅಧ್ಯಕ್ಷರಾಗಿದ್ದರು.

ಆಸ್ತಿ ತೆರಿಗೆ ಪಾವತಿಗೆ ಶೇ.5ರಷ್ಟು ರಿಯಾಯಿತಿ

ಚಾಮರಾಜನಗರ, ಮಾ.28– ಗುಂಡ್ಲುಪೇಟೆ ಪುರಸಭೆ ವ್ಯಾಪ್ತಿಯಲ್ಲಿ 2026–27ನೇ ಸಾಲಿನ ಆಸ್ತಿ ತೆರಿಗೆಯನ್ನು ಇದೇ ಏಪ್ರಿಲ್ ತಿಂಗಳಲ್ಲಿ ಪಾವತಿಸಿದಲ್ಲಿ ಶೇ. 5ರಷ್ಟು ರಿಯಾಯಿತಿ ನೀಡಲಾಗುವುದು. ಮೇ ಮತ್ತು ಜೂನ್ ತಿಂಗಳಲ್ಲಿ ಪಾವತಿಸಿದಲ್ಲಿ ರಿಯಾಯಿತಿ ಇರುವುದಿಲ್ಲ ಎಂದು ಪುರಸಭೆ ತಿಳಿಸಿದೆ.

ಜುಲೈ ತಿಂಗಳಿನಿಂದ ಪ್ರತಿ ತಿಂಗಳು ಶೇ. 2ರಷ್ಟು ದಂಡವನ್ನು ವಿಧಿಸಲಾಗುವುದು. 2026–27ನೇ ಸಾಲಿನ ಆಸ್ತಿ ತೆರಿಗೆಯನ್ನು ಪಾವತಿಸಿ ದಂಡದಿಂದ ತಪ್ಪಿಸಿಕೊಳ್ಳಬಹುದು. ನೀರಿನ ತೆರಿಗೆ ಜಾಹೀರಾತು ತೆರಿಗೆ ಹಾಗೂ ಉದ್ದಿಮೆ ತೆರಿಗೆಯನ್ನು ಸಕಾಲದಲ್ಲಿ ಪಾವತಿಸುವಂತೆ ಕೋರಲಾಗಿದೆ.

ಗುಂಡ್ಲುಪೇಟೆ ಪುರಸಭಾ ವ್ಯಾಪ್ತಿಯಲ್ಲಿರುವ ಕಟ್ಟಡ/ ನಿವೇಶನಗಳಿಗೆ ಕರ್ನಾಟಕ ಸ್ಟಾಂಪ್ ಅಧಿನಿಯಮ 1957ರಂತೆ 2025–26ನೇ ಸಾಲಿಗೆ, ಮಾರುಕಟ್ಟೆ ದರಗಳು ಪರಿಷ್ಕರಣೆಯಾಗದೇ ಇರುವುದರಿಂದ 2023–24ನೇ ಸಾಲಿನ ಮಾರುಕಟ್ಟೆ ಮೌಲ್ಯದ ಮಾರ್ಗಸೂಚಿ ಬೆಲೆಗಳ ಮೇಲೆ 2026–27ನೇ ಸಾಲಿಗೆ ಪ್ರಸ್ತುತ ಇರುವ ವಸತಿ, ವಾಣಿಜ್ಯ, ನಿವೇಶನಗಳ ಆಸ್ತಿಗೆ ತೆರಿಗೆ ದರಗಳ ಮೇಲೆ ಶೇ.3ರಷ್ಟು ಆಸ್ತಿ ತೆರಿಗೆ ದರ ಪರಿಷ್ಕರಣೆ ಮಾಡಲಾಗಿದೆ. ಸಾರ್ವಜನಿಕರು ಸಹಕರಿಸಬೇಕು ಎಂದು ಪುರಸಭೆಯ ಆಡಳಿತಾಧಿಕಾರಿಗಳು ಹಾಗೂ ಮುಖ್ಯಾಧಿಕಾರಿ ಪ್ರಕಟಣೆಯಲ್ಲಿ ಕೋರಿದ್ದಾರೆ.

ಒಳ ಮೀಸಲಾತಿಯಿಂದ ಬಲಗೈ ಸಮುದಾಯ ವಿದ್ಯಾರ್ಥಿಗಳಿಗೆ ಅನ್ಯಾಯ



ಚಾಮರಾಜನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಡಾ.ಎಚ್.ಸಿ.ಮಹದೇವಪ್ಪ ಅಭಿಮಾನಿ ಬಳಗದ ಅಧ್ಯಕ್ಷ ಡಾ.ಮಹದೇವಯ್ಯ ಮಾತನಾಡಿದರು.

ಚಾಮರಾಜನಗರ: ಒಳ ಮೀಸಲಾತಿ ಜಾರಿಯಿಂದಾಗಿ ಸಿಇಟಿ, ನೀಟ್, ಮೊರಾರ್ಜಿ, ನವೋದಯ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಬಲಗೈ ಸಮುದಾಯ ವಿದ್ಯಾರ್ಥಿಗಳಿಗೆ ತೊಡಕಾಗುತ್ತಿದೆ ಎಂದು ಡಾ.ಎಚ್.ಸಿ.ಮಹದೇವಪ್ಪ ಅಭಿಮಾನಿ ಬಳಗದ ಅಧ್ಯಕ್ಷ ಡಾ.ಮಹದೇವಯ್ಯ ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಒಳ ಮೀಸಲಾತಿ ಜಾರಿಯಿಂದಾಗಿ ಎ.ಬಿ.ಸಿ, ವರ್ಗಗಳನ್ನು ಮಾಡಲಾಗಿದ್ದು. ಇದರಲ್ಲಿ ಬಲಗೈ ಸಮುದಾಯದವರು ಬಿ ವರ್ಗವನ್ನು ಕೊಟ್ಟರೆ ಅವರಿಗೆ ಸೀಟ್ ಸಿಗುತ್ತಿಲ್ಲ. ಹಳೇ ಮೀಸಲಾತಿಯನ್ನು ಆಯ್ಕೆ ಮಾಡಿದರೆ ಸಾಮಾನ್ಯ ವರ್ಗಕ್ಕೆ ಆಯ್ಕೆಯಾಗುತ್ತಿದ್ದಾರೆ. ಇದರಿಂದಾಗಿ ವಿದ್ಯಾರ್ಥಿಗಳಲ್ಲಿ ಗೊಂದಲದ ವಾತಾವರಣ ಸೃಷ್ಟಿಯಾಗಿದ್ದು, ಇದನ್ನು ನಿವಾರಿಸಲು ಸರ್ಕಾರ ಮುಂದಾಗಬೇಕು ಎಂದು ಒತ್ತಾಯಿಸಿದರು.

ಅಲ್ಲದೇ ಪರಿಶಿಷ್ಟ ಜಾತಿಯಲ್ಲಿ ಸ್ಪೃಶ್ಯ ಜಾತಿಯ ಕೊಲಂಗಳು ಸೇರಿಕೊಂಡಿದ್ದು, ಅವರನ್ನು ನಮ್ಮ ಜಾತಿಯಿಂದ ಹೊರಗಿಡಲು ಬಲಗೈ ಹಾಗೂ ಎಡಗೈ ಸಮುದಾಯದ ಎಲ್ಲಾ ಬಂಧುಗಳು ಒಗ್ಗಟ್ಟಾಗಿ ಹೋರಾಟ ನಡೆಸಬೇಕು. ಈ ನಿಟ್ಟಿನಲ್ಲಿ ಪ್ರತಿಯೊಬ್ಬರು ಕೈ ಜೋಡಿಸಬೇಕು ಎಂದರು.

2024–25ನೇ ಸಾಲಿನಲ್ಲಿ ನಡೆದ ಸಿಇಟಿ ಪರೀಕ್ಷೆಯಲ್ಲಿ ಇಂಜಿನಿಯರಿಂಗ್, ವೈದ್ಯಕೀಯ, ಕೃಷಿ ಹಾಗೂ ಪಶು ವೈದ್ಯಕೀಯ ವಿಭಾಗದಲ್ಲಿ ಬಲಗೈ ಸಮುದಾಯದಿಂದ 687, ಎಡಗೈ ಸಮುದಾಯದಿಂದ 573, ಬಂಜಾರು ಸಮುದಾಯದಿಂದ 1456 ಹಾಗೂ ಭೋವಿ ಜನಾಂಗದಿಂದ 919 ಮಂದಿ ಆಯ್ಕೆಯಾಗಿದ್ದಾರೆ. ಈ ಅಂಕಿ ಅಂಶವನ್ನು ನೋಡಿದರೆ ನಮ್ಮ ಬಲಗೈ ಹಾಗೂ ಎಡಗೈ ಸಮುದಾಯದವರಿಗಿಂತ ಇತರರೇ ಹೆಚ್ಚು ಮಂದಿ ಆಯ್ಕೆಯಾಗಿದ್ದಾರೆ. ಆದ್ದರಿಂದ ಮೊದಲು ಅವರನ್ನು ಪರಿಶಿಷ್ಟ ಜಾತಿಯಿಂದ ಹೊರಗೆ ಹಾಕಲು ನಾವೆಲ್ಲರೂ ಒಂದಾಗಬೇಕು ಎಂದು ಹೇಳಿದರು.

ಬೆಂಗಳೂರಿನ ಹೋರಾಟ ಯಶಸ್ವಿ– ಅಭಿನಂದನೆ: ಮಾ.25 ರಂದು ಬೆಂಗಳೂರಿನಲ್ಲಿ ಒಳಮೀಸಲಾತಿ ವಿರುದ್ಧ ನಡೆದ ಹೋರಾಟಕ್ಕೆ ಚಾಮರಾಜನಗರದಿಂದ ಬೀದರ್‌ವರೆಗೆ ಪ್ರತಿಯೊಂದು ಗ್ರಾಮದಿಂದಲೂ ಬಲಗೈ ಸಮುದಾಯದವರು ಅಪಾರ ಸಂಖ್ಯೆಯಲ್ಲಿ ಬಂದು ಪ್ರೋತ್ಸಾಹ ನೀಡಿದ್ದಾರೆ. ಅವರಿಗೆ ಸಂಘಟನೆ ವತಿಯಿಂದ ಕೃತಜ್ಞತೆ ಸಲ್ಲಿಸುವುದಾಗಿ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಬಳಗದ ಗೌರವಾಧ್ಯಕ್ಷ ಸಂಘಸೇನಾ, ಮುಖಂಡರಾದ ಎಂ ಶಿವಾಗಣ್ಣ ಕುದೇರು, ರಾಜೇಂದ್ರ ಹೊನ್ನೂರು, ನಟ ಶೇಖರ್‌ಮೂರ್ತಿ, ವಿ.ಕೃಷ್ಣರಾಜು, ಮರಿಸ್ವಾಮಿ ಚಾಟೀಪುರ ಹಾಜರಿದ್ದರು.

ಸ್ವಾವಲಂಬಿ ಮಹಿಳೆಯರ ಬದುಕಿನ ಬಂಡಿ 'ಆಟೋ'


ಹಿರಿಯ ಆಟೋ ಚಾಲಕಿ ಎಂ.ಗೀತಾ.

ಎಂ.ಟಿ.ಯೋಗೇಶ್ ಕುಮಾರ್

ಮಹಿಳಾ ಪೈಲಟ್, ಲೋಕೋಪೈಲಟ್ ಹಾಗೂ ಭಾರೀ ವಾಹನಗಳ ಚಾಲಕಿಯರು ಸಾಕಷ್ಟು ಮಂದಿ ಇದ್ದಾರೆ. ಹೀಗೆಯೇ ದಿನವಿಡೀ ಗಲ್ಲಿ ಗಲ್ಲಿಯಲ್ಲೂ ಆಟೋ ಓಡಿಸುತ್ತಾ ಜೀವನ ಬಂಡಿ ಸಾಗಿಸುವ ಮಹಿಳೆಯರು ನಿಜಕ್ಕೂ ಮಾದರಿಯಾಗಿದ್ದಾರೆ.

ಕುಟುಂಬ ನಿರ್ವಹಣೆ, ಮಕ್ಕಳ ಭವಿಷ್ಯ ರೂಪಿಸುವ ಹೊಣೆ ಹೊತ್ತ ಮಹಿಳಾ ಮಣಿಗಳು ಅದಕ್ಕಾಗಿ 'ಕಾಯಕವೇ ಕೈಲಾಸ' ದೀಕ್ಷೆ ತೊಟ್ಟು, ಆಟೋರಿಕ್ಷಾ ಚಾಲನೆ ಸವಾಲಿನಲ್ಲೂ ಸೈ ಎನಿಸಿ ಕೊಂಡಿದ್ದಾರೆ. ಸ್ವಾವಲಂಬಿ ಜೀವನಕ್ಕೆ ಕಟಿಬದ್ಧರಾಗಿ ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿದ್ದವರು ಇದೀಗ ಆಟೋ ಚಾಲನೆಯತ್ತ ಮುಖ ಮಾಡುತ್ತಿದ್ದಾರೆ. ಮೈಸೂರಿನಲ್ಲಿ ಸದ್ಯ 58 ಮಹಿಳೆಯರು ಆಟೋ ಚಾಲನೆಯನ್ನೇ ವೃತ್ತಿಯಾಗಿಸಿಕೊಂಡಿದ್ದಾರೆ.

ಹಿರಿಯ ಚಾಲಕಿ ಎಂ.ಗೀತಾ: ಮೂಲತಃ ಬಳ್ಳಾರಿ ಮೂಲದ ಎಂ.ಗೀತಾರಿಗೆ ಈಗ 54 ವರ್ಷ. ಇವರು ಇವಿ ಆಟೋರಿಕ್ಷಾ ಚಾಲನೆ ಮೂಲಕ ಜೀವನ ಸಾಗಿಸುತ್ತಿದ್ದಾರೆ. ಕಳೆದ ಐದು ವರ್ಷಗಳಿಂದ ಮೈಸೂರಿನ ಹಿನಕಲ್‌ನಲ್ಲಿ ವಾಸವಿರುವ ಇವರು, ಈ ಹಿಂದೆ ಅಡುಗೆ, ಪುಟ್ಟ ಮಕ್ಕಳನ್ನು ನೋಡಿಕೊಳ್ಳುವ ಕೆಲಸದ ಜೊತೆಗೆ ಶನಿವಾರ ಮತ್ತು ಭಾನುವಾರ ಖಾಸಗಿ ಕಾರ್‌ಗೆ ಸ್ಪೇರ್ ಡ್ರೈವರ್ ಆಗಿ ಕೆಲಸ ಮಾಡುತ್ತಿದ್ದರು. ಪತಿ ಅನಾರೋಗ್ಯದಿಂದ ಹಾಸಿಗೆ ಹಿಡಿದಿರುವುದರಿಂದ ಅವರ ಆರೈಕೆ ಜೊತೆಗೆ ಕುಟುಂಬ ನಿರ್ವಹಣೆಯ ಜವಾಬ್ದಾರಿ ಹೆಗಲೇರಿರುವುದರಿಂದ ಅನಿವಾರ್ಯವಾಗಿ ಆಟೋ ಚಾಲನಾ ವೃತ್ತಿಯಲ್ಲಿ ತೊಡಗಿಸಿಕೊಂಡಿದ್ದಾರೆ.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಗೀತಾ, ಈ ಹಿಂದೆ ಎಷ್ಟೇ ಕೆಲಸ ಮಾಡಿದರೂ ಬರುತ್ತಿದ್ದ ಸಂಬಳ ಕುಟುಂಬ ನಿರ್ವಹಣೆಗೆ ಸಾಕಾಗುತ್ತಿರಲಿಲ್ಲ. ಈ ನಡುವೆ ಪತಿಗೆ ಬೈಪಾಸ್ ಸರ್ಜರಿ ಆಯಿತು. ಅದು ವಿಫಲವಾಗಿ ಸ್ಟಂಟ್ ಹಾಕಲಾಯಿತು. ಇದರಿಂದ ಚೇತರಿಸಿಕೊಳ್ಳುತ್ತಿರುವಾಗಲೇ ಕಾರು ಅಪಘಾತದಿಂದ ಸ್ಪೈನಲ್ ಕಾರ್ಡ್ ಕಂಪ್ರೆಸ್ ಆಗಿ ಕಳೆದ ಮೂರು ವರ್ಷಗಳಿಂದ ಹಾಸಿಗೆ ಹಿಡಿದಿದ್ದಾರೆ. ಮನೆ ನಿರ್ವಹಣೆ ಜವಾಬ್ದಾರಿಯನ್ನು ನಾನೇ ನಿರ್ವಹಿಸುತ್ತಿದ್ದೇನೆ ಎಂದರು.

ಬೇರೆಯವರ ಬಳಿ ಕೆಲಸ ಮಾಡುವಾಗ ಆಸ್ಪತ್ರೆಗೆ ಹೋಗುವುದಕ್ಕೂ ರಜೆ ಸಿಗುತ್ತಿರಲಿಲ್ಲ. ನನಗೆ ಮೊದಲಿನಿಂದಲೂ ಡ್ರೈವಿಂಗ್ ಬಗ್ಗೆ ಆಸಕ್ತಿ ಇತ್ತಾದರೂ ನಮ್ಮ ಕುಟುಂಬದವರು ಭಯದಿಂದ ವಾಹನ ಚಲಾಯಿಸಲು ಬಿಡುತ್ತಿರಲಿಲ್ಲ. ಆದರೂ ನಾನು ಡ್ರೈವಿಂಗ್ ಕಲಿತಿದ್ದೆ. ಈಗ ಅದೇ ನನ್ನ ಜೀವನಕ್ಕೆ ಆಧಾರವಾಗಿದೆ.


ಎಕ್ಸಿಕ್ಯೂಟಿವ್ ಕೆಲಸ ಬಿಟ್ಟು ಆಟೋ ಚಾಲನಾ ವೃತ್ತಿಯಲ್ಲಿ ಬದುಕು ಕಂಡ ಅನಿತಾ.

> ಮೈಸೂರಲ್ಲಿ 12 ರಿಂದ 13 ಸಾವಿರ ಆಟೋ ರಿಕ್ಷಾ ಚಾಲಕರಿದ್ದು, ಅವರಲ್ಲಿ 58 ಮಂದಿ ಮಹಿಳೆಯರಿದ್ದಾರೆ. 20 ವರ್ಷದ ಹಿಂದೆ ಸಾಕಮ್ಮ, ಛಾಯಾ, ಆಟೋ ರಾಣಿ ಎಸ್.ಸೌಮ್ಯ, ಮೇರಿಯಮ್ಮ ಸೇರಿದಂತೆ ಬೆರಳೆಣಿಕೆಯಷ್ಟು ಆಟೋ ಚಾಲಕಿಯರಿದ್ದರು. ಆದರೆ ಇತ್ತೀಚೆಗೆ ಸ್ವಾವಲಂಬಿ ಬದುಕು, ಕುಟುಂಬ ನಿರ್ವಹಣೆ ಕಾರಣಕ್ಕೆ ಹೆಚ್ಚು ಮಹಿಳೆಯರು ಧೈರ್ಯದಿಂದ ಆಟೋ ಓಡಿಸುವ ವೃತ್ತಿಯನ್ನು ಅರಸಿ ಬರುತ್ತಿದ್ದಾರೆ.


ಟೈಲರಿಂಗ್ ಬಿಟ್ಟು ಆಟೋ ಡ್ರೈವರ್ ಆದ ಎನ್.ಶೋಭಾ.

ಆಟೋ ಚಾಲಕಿ ಸೌಮ್ಯ ಅವರನ್ನು ಸಂಪರ್ಕಿಸಿ, ನನಗೆ 54 ವರ್ಷ, ಆಟೋ ಚಾಲನೆ ಕಲಿಸಿಕೊಡುತ್ತೀರಾ ಎಂದು ಕೇಳಿಕೊಂಡೆ. ಅವರು ನನ್ನ ಪರಿಸ್ಥಿತಿಯನ್ನು ಅರಿತು, ತರಬೇತಿ ನೀಡಿದರು. ಬಳಿಕ ಸಾಲ ಮಾಡಿ ಎಲೆಕ್ಟ್ರಿಕಲ್ ಆಟೋರಿಕ್ಷಾ ಖರೀದಿಸಿ, ದುಡಿಮೆ ಆರಂಭಿಸಿದೆ. ತಿಂಗಳಿಗೆ 5600 ರೂ. ಇಎಂಐ ಪಾವತಿಸುತ್ತಿದ್ದೇನೆ. ದಿನಕ್ಕೆ ಕನಿಷ್ಠ 120 ಕಿ.ಮೀ. ಆಟೋ ಓಡಿಸುತ್ತೇನೆ. ಎರಡು ತಿಂಗಳಲ್ಲಿ ಸುಮಾರು 7 ಸಾವಿರ ಕಿ.ಮೀ. ಚಾಲನೆ ಮಾಡಿದ್ದೇನೆ ಎಂದು ತಿಳಿಸಿದರು.

ಪ್ರತಿದಿನ ಸಾವಿರ ರೂಪಾಯಿ ಸಂಪಾದಿಸಬೇಕೆಂದು ನಿರ್ಧರಿಸಿಕೊಂಡೇ ಆಟೋ ಹತ್ತುತ್ತೇನೆ. ಆದರೆ ಎಲ್ಲಾ ದಿನವೂ ನಾನು ಅಂದುಕೊಂಡಂತೆ ಆಗುವುದಿಲ್ಲ. ದಿನದ ದುಡಿಮೆಯಲ್ಲಿ ವಿದ್ಯುತ್ ಬಿಲ್, ಇಎಂಐ ಹಾಗೂ ಉಳಿತಾಯ ಎಂದು ಮೂರು ಭಾಗವಾಗಿ ವಿಂಗಡಿಸುತ್ತೇನೆ. ಹೆಚ್ಚು ಸಂಪಾದನೆಯಾದರೆ ಅದನ್ನು ಮನೆ ಖರ್ಚಿಗೆ ಬಳಸುತ್ತೇನೆ. ಕೆಲವು ಪ್ರಯಾಣಿಕರು ಪ್ರಯಾಣ ದರಕ್ಕಿಂತ 10–20 ರೂ. ಹೆಚ್ಚಿಗೆ ಕೊಡುವುದರಿಂದ ದಿನಕ್ಕೆ 100 ರಿಂದ 150 ರೂ. ಸಿಗುತ್ತದೆ. ಅದನ್ನೂ ಉಳಿತಾಯದ ಮೊತ್ತಕ್ಕೆ ಸೇರಿಸುತ್ತೇನೆ. ಹೇಗೋ ಆಟೋರಿಕ್ಷಾದಿಂದ ನಮ್ಮ ಜೀವನ ನಿರ್ವಹಣೆ ಆಗುತ್ತಿದೆ. ಪುರುಷ ಆಟೋ ಚಾಲಕರು, ಪ್ರಯಾಣಿಕರು ನನ್ನನ್ನು ಬೆಂಬಲಿಸುತ್ತಾರೆ. ಹೊಸ ಜಾಗಗಳಲ್ಲಿ ವಿಳಾಸ ಗೊತ್ತಿಲ್ಲದಿದ್ದರೆ ಪ್ರಯಾಣಿಕರೇ ದಾರಿ ತೋರಿಸುತ್ತಾರೆ. ಮಗಳು ಬಿಕಾಂ ಓದಿದ್ದು, ಎಂಬಿಎಗೆ ಸೇರಿಸಬೇಕು ಎಂದುಕೊಂಡಿದ್ದೇನೆ. ಒಟ್ಟಾರೆ ಆಟೋ ನನ್ನ ಜೀವನದ ಸಾರಥಿಯಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಸ್ಟೀವರ್ಡ್‌ನಿಂದ ಆಟೋ ಚಾಲನೆಗೆ: ಮೈಸೂರಿನ ಕುಂಬಾರಕೊಪ್ಪಲು ನಿವಾಸಿ ಎಸ್.ನಾಗವೇಣಿ, ಎರಡು ವರ್ಷಗಳಿಂದ ಆಟೋ ಚಾಲಕಿಯಾಗಿ ಮೂವರು ಮಕ್ಕಳನ್ನು ಸಲಹುತ್ತಿದ್ದಾರೆ. ಇವರು, 3 ತಿಂಗಳ ಹಿಂದೆ ಇವಿ ಆಟೋರಿಕ್ಷಾ ಖರೀದಿಸಿ, ಈಗಾಗಲೇ 8,800 ಕಿ.ಮೀ. ಚಾಲನೆ ಮಾಡಿದ್ದಾರೆ.

ಈ ಬಗ್ಗೆ ಅಭಿಪ್ರಾಯ ಹಂಚಿಕೊಂಡ ನಾಗವೇಣಿ, ಈ ಹಿಂದೆ ಹೋಟೆಲ್‌ನಲ್ಲಿ ಸ್ಟೀವರ್ಡ್ ಆಗಿದ್ದೆ. ಮಕ್ಕಳನ್ನು ಶಾಲೆಗೆ ಕಳುಹಿಸಿ, ಹೋಟೆಲ್‌ಗೆ ಹೋಗುವಷ್ಟರಲ್ಲಿ ತಡವಾಗುತ್ತಿತ್ತು. ಇದರಿಂದ ಸಂಬಳವೂ ಕಡಿತವಾಗುತ್ತಿತ್ತು. ಹೋಟೆಲ್ ಕೆಲಸ ಮುಗಿಯುವುದು ರಾತ್ರಿ 10.30 ಆಗುತ್ತಿದ್ದ ಕಾರಣ ಮನೆಗೆ ಹೋಗಲು ತೊಂದರೆಯಾಗುತ್ತಿತ್ತು. ಮಕ್ಕಳ ವಿದ್ಯಾಭ್ಯಾಸದ ಕಡೆಗೂ ಗಮನ ಕೊಡಲು ಆಗುತ್ತಿರಲಿಲ್ಲ. ಈ ಕಾರಣದಿಂದ ಹೋಟೆಲ್ ಕೆಲಸ ಬಿಟ್ಟು, ಆಟೋ ಚಾಲನೆ ಮಾಡುತ್ತಿದ್ದೇನೆ ಎಂದರು.

ನಾನೂ ಕೂಡ ಸೌಮ್ಯ ಅವರಿಂದ ಆಟೋ ಚಾಲನೆ ಕಲಿತೆ. ಇದೀಗ ಇದೇ ನನ್ನ ಕೈಹಿಡಿದಿದೆ. ಹೋಟೆಲ್‌ನಿಂದ ಪಿಜಿಗೆ ಆಹಾರ ಸರಬರಾಜು ಮಾಡುವುದರಿಂದ ಬರುವ ತಿಂಗಳ ಬಾಡಿಗೆ ಹೊರತಾಗಿ ದಿನಕ್ಕೆ 400–500 ರೂ. ಸಂಪಾದನೆ ಮಾಡುತ್ತೇನೆ. 8,726 ರೂ. ಇಎಂಐ ಕಟ್ಟುತ್ತೇನೆ. ಈ ಹಿಂದೆ ಮಾಡಿದ್ದ ಸಾಲ ತೀರಿಸಿ, ಮನೆ ಬಾಡಿಗೆ, ಮಕ್ಕಳ ಶಾಲಾ ಶುಲ್ಕ, ಮನೆ ನಿರ್ವಹಣೆ ಎಲ್ಲವನ್ನೂ ಸರಿದೂಗಿಸಿಕೊಂಡು ಹೋಗುತ್ತಿದ್ದೇನೆ ಎಂದರು.

ಪತಿ ತೊರೆದು ಹೋದಾಗ ಮಕ್ಕಳನ್ನು ಕಟ್ಟಿಕೊಂಡು ಹೇಗೆ ಜೀವನ ನಡೆಸಲಿ ಎಂಬ ಭಯದಿಂದ ಆತ್ಮಹತ್ಯೆಗೆ ಯತ್ನಿಸಿದ್ದೆ. ಆಗ ಆಟೋ ಟೀಮ್ ಸ್ಯಾವಿಯೋ ಟ್ರಸ್ಟ್ ನನಗೆ ಸಹಾಯ ಮಾಡಿತು. ನಾನು ಮತ್ತು ಮಕ್ಕಳು ಜೀವನ ನಡೆಸಲು ಟ್ರಸ್ಟ್‌ನ ಸಹಾಯವೇ ಕಾರಣ. ಈವರೆಗೆ ಒಬ್ಬರು ಪ್ರಯಾಣಿಕರು ಮಾತ್ರ ಗಲಾಟೆ ಮಾಡಿದರು. ಸಬರ್ಬನ್ ಬಸ್‌ನಿಲ್ದಾಣದ ಬಳಿಯ ಸ್ಪಾಗೆ ಹೋಗಬೇಕು ಎಂದಾಗ ಅದರ ವಿಳಾಸ ಗೊತ್ತಿಲ್ಲ ಎಂದಿದ್ದಕ್ಕೆ ಜಗಳ ಮಾಡಿದರು. ಆಗ ಅಲ್ಲಿದ್ದ ಸ್ಥಳೀಯರು, ಅಂಗಡಿಯಲ್ಲಿದ್ದವರು ನನ್ನ ಬೆಂಬಲಕ್ಕೆ ನಿಂತು, ಆ ಪ್ರಯಾಣಿಕರನ್ನು ಆಟೋದಿಂದ ಕೆಳಗಿಳಿಸಿ ಅಲ್ಲಿಂದ ನನ್ನನ್ನು ಕಳುಹಿಸಿದರು. ಅದೊಂದು ಕಹಿ ಘಟನೆ ಬಿಟ್ಟರೆ ಆಟೋ ಚಾಲನೆಯಿಂದ ನಾನು ನೆಮ್ಮದಿಯಾಗಿದ್ದೇನೆ ಎಂದರು.

ಜೀವನ ಕಟ್ಟಿಕೊಳ್ಳಬಹುದು: ಮಂಚೇಗೌಡನ ಕೊಪ್ಪಲು ಬಡಾವಣೆ ನಿವಾಸಿ ಎನ್.ಶೋಭಾ, ಟೈಲರಿಂಗ್ ವೃತ್ತಿ ಬಿಟ್ಟು ಆಟೋರಿಕ್ಷಾ ಮೂಲಕ ಬದುಕು ಕಟ್ಟಿಕೊಂಡಿದ್ದಾರೆ. ಸ್ವತಂತ್ರವಾಗಿ ಬದುಕಬೇಕೆಂಬ ಹಂಬಲ, ಛಲದೊಂದಿಗೆ ಈ ವೃತ್ತಿಯನ್ನು ನೆಚ್ಚಿಕೊಂಡಿದ್ದಾರೆ.

ಈ ಬಗ್ಗೆ ಮಾತನಾಡಿದ ಅವರು, ಬೇರೆಯವರ ಬಳಿ ಎಷ್ಟೇ ಚೆನ್ನಾಗಿ ಕೆಲಸ ಮಾಡಿದರೂ ಅವರ ಬೈಗುಳದಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಬೇರೆಯವರ ಕೈಕೆಳಗೆ ಕೆಲಸ ಮಾಡುವುದಕ್ಕಿಂತ 'ನಮ್ ಕೆಲಸ, ನಮ್ ಗಾಡಿ, ನಮ್ ಟೈಮ್' ಸೂತ್ರದೊಂದಿಗೆ ಆಟೋ ಚಾಲನೆ ಮಾಡುತ್ತಿದ್ದೇನೆ. ನಾವು ಸ್ವತಂತ್ರವಾಗಿ ದುಡಿಯಬೇಕೆಂಬ ಹಂಬಲದಿಂದ ಟೈಲರಿಂಗ್ ಬಿಟ್ಟು ಈ ವೃತ್ತಿ ಆರಿಸಿಕೊಂಡಿದ್ದೇನೆ. ಪತಿಯೂ ಕೆಲಸ ಮಾಡುತ್ತಿದ್ದು, ಇಬ್ಬರ ದುಡಿಮೆಯಿಂದ ಜೀವನ ಸಾಗಿಸುತ್ತಿದ್ದೇವೆ. ಮೊದಲು ಬಾಡಿಗೆ ಆಟೋ ಓಡಿಸುತ್ತಿದ್ದೆ. ನಾಲ್ಕು ತಿಂಗಳ ಹಿಂದೆ ಇವಿ ಆಟೋರಿಕ್ಷಾ ಖರೀದಿಸಿ, ತಿಂಗಳಿಗೆ 5,600 ರೂ. ಇಎಂಐ ಕಟ್ಟುತ್ತಿದ್ದೇನೆ. ಪ್ರತಿದಿನ 100 ಕಿ.ಮೀ. ಆಟೋ ಚಾಲನೆ ಮಾಡುತ್ತೇನೆ. ಈ ವೃತ್ತಿ ಸಮಾಧಾನ ತಂದಿದೆ ಎಂದು ಹೇಳಿದರು.

ಆಟೋ ಹಿಡಿದ ಖಾಸಗಿ ಕಂಪನಿ ಉದ್ಯೋಗಿ: ಖಾಸಗಿ ಕಂಪನಿಯಲ್ಲಿ ಎಕ್ಸಿಕ್ಯೂಟಿವ್ ಆಗಿದ್ದ ಹೆಬ್ಬಾಳು ನಿವಾಸಿ ಅನಿತಾ, ಆ ಕೆಲಸಕ್ಕೆ ರಾಜೀನಾಮೆ ನೀಡಿ ಆಟೋ ಚಾಲನೆಯನ್ನು ವೃತ್ತಿಯಾಗಿಸಿಕೊಂಡಿದ್ದಾರೆ. ಈ ಬಗ್ಗೆ ತಮ್ಮ ಅನಿಸಿಕೆ ಹಂಚಿಕೊಂಡ ಅವರು, ಎರಡು ವರ್ಷಗಳಿಂದ ಆಟೋ ಚಾಲನೆಯೇ ನನ್ನ ವೃತ್ತಿ. ಮೊದಲು ಕಚೇರಿಯೊಂದರಲ್ಲಿ ಎಕ್ಸಿಕ್ಯೂಟಿವ್ ಆಗಿ ಕೆಲಸ ಮಾಡುತ್ತಿದ್ದೆ. ಎಷ್ಟೇ ಪ್ರಾಮಾಣಿಕವಾಗಿ ಕೆಲಸ ಮಾಡಿದರೂ ಸರಿ ಸೈ ಎನಿಸಿಕೊಳ್ಳಲು ಆಗುತ್ತಿರಲಿಲ್ಲ. ದಿನೇ ದಿನೆ ಕೆಲಸದ ಒತ್ತಡ ಹೆಚ್ಚಾಯಿತು. ಈ ಕೆಲಸ ಬಿಟ್ಟು ಏನಾದರೂ ಸ್ವಂತ ಉದ್ಯೋಗ ಮಾಡಬೇಕೆಂಬ ಆಲೋಚನೆ ಬಂತು. ಒಂದು ದಿನ ಕೆಲಸ ಬಿಟ್ಟು, ಆಟೋ ಚಾಲಕರಾಗಿರುವ ನಮ್ಮ ಮನೆಯವರನ್ನು ಒಪ್ಪಿಸಿ ನಾನೂ ಇದೇ ವೃತ್ತಿ ಆಯ್ಕೆ ಮಾಡಿಕೊಂಡೆ. ಸೌಮ್ಯ ಅವರಿಂದ ತರಬೇತಿ ಪಡೆದು, ಬಾಡಿಗೆ ಆಟೋ ಓಡಿಸುತ್ತಿದ್ದೇನೆ. ದಿನಕ್ಕೆ 200 ರೂ. ಆಟೋ ಮಾಲೀಕರಿಗೆ ಕೊಡಬೇಕು. ಗ್ಯಾಸ್‌ಗೆ 300 ರೂ. ಖರ್ಚಾಗುತ್ತದೆ. ಇದೆಲ್ಲವನ್ನು ಕಳೆದು 500 ರೂ. ಸಂಪಾದಿಸುತ್ತಿದ್ದೇನೆ. ಎಲ್ಲಾ ಕಡೆಯೂ ಮಹಿಳೆಯರಿಗೆ ಸವಾಲು ಇದ್ದೇ ಇರುತ್ತದೆ. ಆದರೆ ಈವರೆಗೂ ನನಗೆ ಯಾವುದೇ ಕಹಿ ಅನುಭವ ಆಗಿಲ್ಲ. ಮೈಸೂರಿನ ಜನ, ಪ್ರಯಾಣಿಕರು, ಆಟೋ ಚಾಲಕರು ಸಹೋದರಿಯಂತೆ ಕಾಣುತ್ತಾರೆ. ಬೆಳಗ್ಗೆ 9 ಗಂಟೆಯಿಂದ ಸಂಜೆ 7 ಗಂಟೆವರೆಗೆ ಆಟೋ ಓಡಿಸುತ್ತೇನೆ. ಮಗಳು ಈಗ ಬಿಕಾಂಗೆ ಸೇರಿದ್ದಾಳೆ. ಆಟೋ ಚಾಲನೆ ವೃತ್ತಿಯಲ್ಲಿ ನನಗೆ ತೃಪ್ತಿ ಇದೆ ಎಂದರು.


ಹೋಟೆಲ್ ಸ್ಟೀವಾರ್ಡ್‌ನಿಂದ ಆಟೋ ಚಾಲನೆಗಿಳಿದ ಎಸ್.ನಾಗವೇಣಿ.

> ಹೆಚ್.ಡಿ.ಕೋಟೆ ರಸ್ತೆಯಲ್ಲಿರುವ ಕಳಲವಾಡಿಯ ಸ್ಯಾವಿಯೋ(ಎಸ್‌ಎವಿಐಒ) ಟ್ರಸ್ಟ್‌ನಿಂದ 10 ಮಹಿಳೆಯರಿಗೆ ಆಟೋ ರಿಕ್ಷಾ ಕೊಡಿಸಲಾಗಿದೆ. ತಲಾ 83 ಸಾವಿರ ರೂ. ಡೌನ್‌ಪೇಮೆಂಟ್ ಮಾಡಿ, ಇವಿ ಆಟೋರಿಕ್ಷಾ ಖರೀದಿಸಿದ್ದಾರೆ. ಈವರೆಗೆ ನಾನು 70 ಮಹಿಳೆಯರಿಗೆ ಆಟೋ ಚಾಲನೆ ಹೇಳಿಕೊಟ್ಟಿದ್ದೇನೆ. 24 ವರ್ಷದ ಆಟೋ ಚಾಲನೆ ಅನುಭವದ ಆಧಾರದಲ್ಲಿ ಮಹಿಳೆಯರ ಸ್ವಾವಲಂಬಿ ಜೀವನಕ್ಕೆ ಸಾಧ್ಯವಾದ ರೀತಿಯಲ್ಲಿ ಬೆಂಬಲ ನೀಡುತ್ತಿದ್ದೇನೆ. ಕಷ್ಟದಲ್ಲಿರುವವರಿಗೆ ಉಚಿತವಾಗಿ ತರಬೇತಿ ನೀಡಿದ್ದೇನೆ. ಇಂತಹವರಿಗೆ ನಾವು ಒಂದು ಹೊತ್ತು ಊಟ ಕೊಡುವುದರಿಂದ ಅವರ ಜೀವನ ಸುಧಾರಿಸುವುದಿಲ್ಲ. ಅನುಕಂಪದ ಜೊತೆಗೆ ಅವರಿಗೆ ವೃತ್ತಿಯ ಹಾದಿ ತೋರಿಸಿ ಕೊಡಬೇಕು. ಅವರು ಸ್ವಾವಲಂಬಿಯಾಗಿ ಬದುಕಲು ಒತ್ತಾಸೆಯಾಗಬೇಕು ಎಂಬುದು ನನ್ನ ಆಶಯ.
>
> 
>
> -ಆಟೋ ರಾಣಿ ಎಸ್.ಸೌಮ್ಯ,
> ಮೈಸೂರು ಜಿಲ್ಲಾಧ್ಯಕ್ಷೆ ಫೀಸ್ ಆಟೋ ಮತ್ತು ಟ್ಯಾಕ್ಸಿ ಅಸೋಸಿಯೇಷನ್



ವಾರಭವಿಷ್ಯ

29.03.2026 ರಿಂದ 4.04.2026

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ: ರವಿ–ಮೀನ, ಚಂದ್ರ–ಕಟಕ, ಸಿಂಹ, ಕನ್ಯಾ, ತುಲಾ, ಕುಜ–ಕುಂಭ, ಮೀನ, ಬುಧ–ಕುಂಭ, ಗುರು–ಮಿಥುನ, ಶುಕ್ರ–ಮೇಷ, ಶನಿ–ಮೀನ, ರಾಹು–ಕುಂಭ ಮತ್ತು ಕೇತು–ಸಿಂಹ

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ್ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
'ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ'
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ: 9740973224, 9739548720



ಮೇಷ (ಚು,ಚೆ,ಲ,ಲಿ,ಲು,ಲೆ,ಲೋ,ಅ)
ಈ ವಾರ ಆರ್ಥಿಕ ಪರಿಸ್ಥಿತಿ ಹಿಂದಿನ ವಾರಕ್ಕಿಂತ ಉತ್ತಮವಾಗಿರುತ್ತದೆ. ಹಳೆಯ ಮಿತ್ರರ ಭೇಟಿ, ಔತಣ ಕೂಟಗಳು ನಡೆಯಲಿವೆ. ಆರೋಗ್ಯ ವಿಷಯದಲ್ಲಿ ವೈದ್ಯಕೀಯ ಸಮಾಲೋಚನೆಯ ಅಗತ್ಯವಿದೆ. ಮಕ್ಕಳಿಗೆ ಸಂಬಂಧಿಸಿದ ವಿಷಯಗಳಿಂದ ಮಾನಸಿಕ ಕಿರಿಕಿರಿ. ವೃತ್ತಿ ಸ್ಥಳದಲ್ಲಿ ಸಹೋದ್ಯೋಗಿಗಳೊಂದಿಗೆ ವಿವಾದಗಳು ನಡೆಯುತ್ತವೆ. ಭೂ ಸಂಬಂಧಿತ ವ್ಯವಹಾರಗಳು ನಿಮ್ಮ ಪರ ಇರುತ್ತವೆ.
ಓಂ ಗಂ ಗಣಪತಯೇ ನಮಃ ಮಂತ್ರ ಜಪಿಸಿ. ಶುಭ ಸಂಖ್ಯೆ–2

ವೃಷಭ (ಇ,ಉ,ಎ,ಒ,ವ,ವಿ,ವು,ವೆ,ವೊ)
ವಾರದಾರಂಭಕ್ಕೆ ಹಲವು ಮೂಲಗಳಿಂದ ಧನ ಸಂಚಯ ಪ್ರಯತ್ನಕ್ಕೆ ತಕ್ಕುದಾದ ಫಲ ದೊರೆಯುವುದು. ಕೃಷಿ ಹಾಗೂ ಪಶು ಸಂಗೋಪನೆಯಿಂದ ಹಣ ಸಂಪಾದನೆ. ಪ್ರಮುಖ ವಿಷಯಗಳಲ್ಲಿ ದೃಢ ಸಂಕಲ್ಪದ ಅಗತ್ಯವಿದೆ. ಹೊಸ ಸಂಬಂಧವನ್ನು ಬೆಳೆಸುವಾಗ ಹಿರಿಯರೊಂದಿಗೆ ಸಮಾಲೋಚಿಸಿ ನಿರ್ಧಾರ ತೆಗೆದುಕೊಳ್ಳುವುದು ಒಳ್ಳೆಯದು. ಆರೋಗ್ಯ ಸುಧಾರಿಸಲಿದೆ. ಅನ್ನ, ಪಾನೀಯಗಳಲ್ಲಿ ನಿಯಂತ್ರಣವಿರಲಿ.
ಶ್ರೀ ಅಪರಾಜಿತ ಸ್ತೋತ್ರ ಪಠಿಸಿ. ಶುಭ ಸಂಖ್ಯೆ–6

ಮಿಥುನ (ಕ,ಕಿ,ಕು,ಘ,ಜ,ಛ,ಕೆ,ಕೊ,ಹ)
ದೈವ ಸಹಾಯವಿಲ್ಲದೆ ಜಯ ದೊರಕದು. ಸ್ವಪ್ರಯತ್ನವಿಲ್ಲದೆ ದೈವ ಸಹಾಯವೂ ದೊರಕದು. ಹೋಟೆಲ್ ಹಾಗೂ ಕೆಟರಿಂಗ್ ವ್ಯವಹಾರಿಗಳಿಗೆ ಉತ್ತಮ ಆದಾಯವಾಗುತ್ತದೆ. ಟೂರಿಸ್ಟ್ ಸಂಸ್ಥೆಗಳಿಗೆ ಇದು ಸುಸಮಯವಾಗಿದೆ. ಕುಟುಂಬ ಸದಸ್ಯರೊಂದಿಗೆ ಭಿನ್ನಾಭಿಪ್ರಾಯಗಳು ಉಂಟಾಗುತ್ತವೆ. ವಾರದ ಕಡೆಗೆ ಮನೆಗೆ ಆದರಣೀಯ ಬಂಧುಗಳ ಆಗಮನದಿಂದ ಹರುಷದ ವಾತಾವರಣ.
ಶ್ರೀ ವಿಷ್ಣು ಸಹಸ್ರನಾಮ ಪಠಿಸಿ. ಶುಭ ಸಂಖ್ಯೆ–7

ಕಟಕ (ಹೊ,ಹು,ಹೆ,ಡ,ಡಿ,ಡು)
ಜಗದಲ್ಲಿ ನಡೆಯುವುದೆಲ್ಲ ಜಗದೀಶನ ಇಚ್ಛೆ. ನಿಮ್ಮ ಅನಿರೀಕ್ಷಿತ ಪರಿಸ್ಥಿತಿಗಳಿಗೆ ರಾಹು–ಕೇತುಗಳು ಕಾರಣಕರ್ತರಾಗುತ್ತಾರೆ. ಕುಟುಂಬ ಸದಸ್ಯರಲ್ಲಿ ಸಹಮತ ಮೂಡಿ ಮನಸ್ಸಿಗೆ ಕಳವಳ ನಿವಾರಣೆ ಆಗುತ್ತದೆ. ಆಡಿಟರ್‌ಗಳಿಗೆ ದೊಡ್ಡ ಕಂಪನಿ ಫೈಲುಗಳು ದೊರೆಯುವ ಸಾಧ್ಯತೆ ಇದೆ. ಕೆಟ್ಟ ಅಭ್ಯಾಸಗಳಿಗೆ ದಾಸರಾಗುವ ಸಾಧ್ಯತೆ ಇರುತ್ತದೆ. ಸ್ವ ನಿಯಂತ್ರಣ ಮುಖ್ಯ. ವಾಯು ಪ್ರಕೋಪ ಕಾಡುತ್ತದೆ.
ಶ್ರೀ ದೇವಿ ಸ್ತುತಿ. ಶುಭ ಸಂಖ್ಯೆ–1

ಸಿಂಹ (ಮ,ಮಿ,ಮು,ಮೊ,ಮೆ,ಟ,ಟಿ,ಟು,ಟೆ)
ವಾರದ ಆದಿಗೆ ಕೈಗೆತ್ತಿಕೊಂಡ ಕೆಲಸಗಳಲ್ಲಿ ಉಂಟಾಗಿದ್ದ ಅಡೆತಡೆಗಳು ನಿವಾರಣೆ ಆಗುತ್ತವೆ. ಪ್ರತಿಷ್ಠಿತ ವ್ಯಕ್ತಿಗಳ ಪರಿಚಯವಾಗುತ್ತದೆ. ಮನೆಯಲ್ಲಿ ಮಂಗಳ ಕಾರ್ಯಗಳು ನಡೆಯುತ್ತವೆ. ಬೃಹತ್ ಕೈಗಾರಿಕೆ ಉದ್ಯಮಿಗಳಿಗೆ ಅನುಕೂಲಕರ ಸನ್ನಿವೇಶವಿದೆ. ವಿವಾಹ ಸಂಬಂಧಿ ಮಾತುಗಳು ನಡೆಯುವುದು. ರಾಹು–ಕೇತುಗಳು ಅಶುಭರಿದ್ದು, ಅಗ್ನಿ, ವಾಹನಪಘಾತಗಳಿಂದ ಜಾಗೃತರಾಗಿರಿ.
ಶ್ರೀ ಸೂರ್ಯ ನಮಸ್ಕಾರ. ಶುಭ ಸಂಖ್ಯೆ–7

ಕನ್ಯಾ (ಟೊ,ಪ,ಪಿ,ಪು,ಷ,ಣ,ಠ,ಪೆ,ಪೊ)
ಹೊಸ ಜವಾಬ್ದಾರಿ ವಹಿಸಿಕೊಳ್ಳಲು ಸಿದ್ಧವಾಗಿರಿ. ಸಮಾಜ ಸೇವಾ ಕಾರ್ಯಗಳಿಂದ ಪ್ರಶಂಸೆಗೆ ಪಾತ್ರರಾಗುವಿರಿ. ಕೃಷಿಕರಿಗೆ ಹಸಿರು ಹಾಗೂ ಕಪ್ಪು ಧಾನ್ಯಗಳು ಉತ್ತಮ ಲಾಭವನ್ನು ತಂದುಕೊಡುವುದು. ಎಲೆಕ್ಟ್ರಿಕಲ್ ವಸ್ತು ಮಾರಾಟಗಾರರಿಗೆ ಹೆಚ್ಚಿನ ವ್ಯಾಪಾರ ಹಾಗೂ ಹೆಚ್ಚಿನ ಧನಲಾಭವಾಗುವುದು. ಸರ್ಕಾರಿ ನೌಕರರು ಅಪಮಾರ್ಗದಲ್ಲಿ ಹಣದಾಸೆಗೆ ಬಿದ್ದು ತೊಂದರೆ ಅನುಭವಿಸುವರು.
ಶ್ರೀ ಅಷ್ಟಾಕ್ಷರಿ ಮಂತ್ರ ಜಪಿಸಿ. ಶುಭ ಸಂಖ್ಯೆ–4

ತುಲಾ (ರ,ರಿ,ರು,ರೆ,ರೊ,ತ,ತಿ,ತು,ತೆ)
ಸಪ್ತಾಹದ ಆದಿಭಾಗಕ್ಕೆ ಶುಭ ಕಾರ್ಯಗಳಿಗೆ ಪ್ರೇರಣೆ. ವಿಶ್ವಾಸಪಾತ್ರರೊಂದಿಗೆ ಸಮಾಗಮ. ಸಮಾಲೋಚನೆಗಳು ಉತ್ತಮ ಫಲವನ್ನು ನೀಡಲಿವೆ. ನಿಮ್ಮ ರಾಶಿ ಸ್ವಾಮಿ ಶುಭನಿದ್ದು, ಕೈ ಹಾಕಿದ ಮಹತ್ವದ ಕೆಲಸ ಕಾರ್ಯಗಳು ದಡ ಸೇರುವುದು. ಮನೆಯಲ್ಲಿ ಮಂಗಳ ಕಾರ್ಯಗಳು ನಡೆಯುವುವು. ಜೊತೆಗೆ ಆರ್ಥಿಕ ಮುನ್ನಡೆಯನ್ನು ಸಾಧಿಸುವಿರಿ. ಉಷ್ಣಜನಿತ ಕಾಯಿಲೆ ಕಾಡಬಹುದು.
ಶ್ರೀ ರಾಜರಾಜೇಶ್ವರಿ ಸ್ತುತಿ. ಶುಭ ಸಂಖ್ಯೆ–5

ವೃಶ್ಚಿಕ (ತೊ,ನ,ನಿ,ನು,ನೆ,ನೊ,ಯು,ಯಿ,ಯ)
ಈ ವಾರದಲ್ಲಿ ಮನೆಯಲ್ಲೂ ಆಫೀಸಿನಲ್ಲೂ ಉಂಟಾಗುವ ಬದಲಾವಣೆಗಳಿಗೆ ಸಿದ್ಧರಾಗಿರಿ. ಹಣಕಾಸಿನ ಪರಿಸ್ಥಿತಿ ಸುಧಾರಿಸುತ್ತದೆ. ಸಾಲಗಾರರ ಒತ್ತಡವೂ ಇರುತ್ತದೆ. ನಿಮ್ಮವರೆ ನಿಮ್ಮನ್ನು ಅನುಮಾನಿಸಿ ನೋಡುವರು. ವಾಹನ ರಿಪೇರಿಗೆ ಹಣ ವ್ಯಯವಾಗುವುದು. ಉದ್ಯಮಪತಿಗಳಿಗೆ ನೌಕರರ ಅಸಹಕಾರದಿಂದ ನಷ್ಟ ಉಂಟಾಗುತ್ತದೆ. ಆರೋಗ್ಯ ತೃಪ್ತಿಕರವಾಗಿರುವುದಿಲ್ಲ.
ಶ್ರೀ ಸಿದ್ಧಿವಿನಾಯಕ ದರ್ಶನ. ಶುಭ ಸಂಖ್ಯೆ–8

ಧನುಸ್ಸು (ಯೆ,ಯೊ,ಬ,ಬಿ,ಬು,ಧ,ಭ,ಢ,ಬೆ)
ವಾರದ ಆರಂಭಕ್ಕೆ ಲಾಭ ತರುವಂತಹ ವ್ಯಾಪಾರ, ವ್ಯವಹಾರಗಳು ಹುಡುಕಿಕೊಂಡು ಬರಲಿವೆ. ಸ್ಪರ್ಧಾತ್ಮಕ ಪರೀಕ್ಷೆ ಬರೆದವರಿಗೆ ದೈವಾನುಕೂಲದಿಂದ ಯಶಸ್ಸು. ಬಾಳ ಸಂಗಾತಿಯ ಅನ್ವೇಷಣೆ ಸಫಲವಾಗಲಿದೆ. ಬಂಧು–ಮಿತ್ರರ ಸಹಾಯದಿಂದ ಕೌಟುಂಬಿಕ ಸಮಸ್ಯೆಗೆ ಪರಿಹಾರ. ಸರ್ಕಾರಿ ನೌಕರರಿಗೆ ತನಿಖಾ ಸಂಸ್ಥೆಗಳ ಬಿಸಿ ತಟ್ಟುವುದು ಹಾಗೂ ಗೌರವ ಪ್ರತಿಷ್ಠೆಗಳಿಗೆ ಕುಂದುಂಟಾಗುವುದು.
ಓಂ ಗುರುಭ್ಯೋ ನಮಃ ಮಂತ್ರ ಜಪಿಸಿ. ಶುಭ ಸಂಖ್ಯೆ–3

ಮಕರ (ಬೊ,ಜ,ಜೆ,ಶಿ,ಶು,ಶೆ,ಶೊ,ಗ,ಗಿ)
ಸ್ಥಿರಾಸ್ತಿ ಖರೀದಿಸುವ ಉಮೇದು ಇದ್ದರೆ ದಾಖಲೆಗಳನ್ನು ಸರಿಯಾಗಿ ಪರಿಶೀಲಿಸಿ ಮುಂದುವರೆಯಿರಿ. ಹಿಂದೆ ಸ್ಟಾಕ್ ಮಾಡಿಕೊಂಡು ಇಟ್ಟಿದ್ದ ಸರಕುಗಳಿಂದ ನಷ್ಟ, ವಾರ ಮಧ್ಯೆ ಆದಾಯದಲ್ಲಿ ಹೆಚ್ಚಳ. ಅದಕ್ಕೆ ತಕ್ಕಂತೆ ಖರ್ಚುಗಳೂ ಎದುರಾಗುವುದು. ಮಾರಕ–ಬಾಧಕ ಸ್ಥಾನಗಳಲ್ಲಿ ರಾಹು–ಕೇತುಗಳು ಸ್ಥಿತರಿದ್ದು ದುಡುಕು ಬುದ್ಧಿ ಹಾಗೂ ಅಡ್ಡ ದಾರಿಯಲ್ಲಿ ನಡೆದು ಗೌರವಕ್ಕೆ ಹಾನಿ.
ಓಂ ಹನುಮಂತೇ ನಮಃ ಮಂತ್ರ ಜಪಿಸಿ. ಶುಭ ಸಂಖ್ಯೆ–9

ಕುಂಭ (ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ)
ಈ ವಾರ ಗುರುಗ್ರಹ, ಚಂದ್ರ ಗ್ರಹದ ಬಲದಿಂದ ಆದಾಯ ಚೆನ್ನಾಗಿರುತ್ತದೆ. ಅರಸಿ ಬಂದವರನ್ನು ತಿರಸ್ಕರಿಸಿದರೆ ಪಶ್ಚಾತ್ತಾಪ ಪಡಬೇಕಾದೀತು. ಜನ್ಮಸ್ಥ ರಾಹುವಿನಿಂದ ನಿಮ್ಮ ತೀಕ್ಷ್ಣ ಸ್ವಭಾವದಿಂದ ಕಾರ್ಯಗೇಡು. ಭೂ, ನಿವೇಶನ ಸಂಬಂಧಿ ವಿವಾದಗಳು ನ್ಯಾಯಾಲಯಕ್ಕೆ ಹೋಗಬಹುದು. ಯಾರಲ್ಲೂ ಶತ್ರುತ್ವ ಸಾಧಿಸಬೇಡಿ. ಜಂಕ್ ಫುಡ್ ತಿಂದು ಆರೋಗ್ಯ ಕೆಡುವುದು.
ಓಂ ರುದ್ರಾಯ ನಮಃ ಮಂತ್ರ ಜಪಿಸಿ. ಶುಭ ಸಂಖ್ಯೆ–4

ಮೀನ (ದಿ,ದು,ಖ,ಝ,ಥ,ತೆ,ದೊ,ಚ,ಚಿ)
ಸಜ್ಜನರ ಸಂಗ ಹೆಜ್ಜೇನು ಸವಿದಂತೆ ಎಂಬ ಗಾದೆ ಮಾತಿದೆ. ಜೊತೆಗೆ ಮಹತ್ವದ ಕೆಲಸಗಳಿಗೆ ಕಾಲಮಿತಿ ಹಾಕಿಕೊಂಡು ಮುಂದುವರೆದಲ್ಲಿ ಗುರಿ ಮುಟ್ಟುವಿರಿ. ಅವರಿವರ ಮಾತು ಕೇಳದೆ ಸ್ವಂತ ನಿರ್ಧಾರಗಳನ್ನು ತೆಗೆದುಕೊಳ್ಳಿ. ವಾರ ಮಧ್ಯೆ ತೃಪ್ತಿಕರ ಜೀವನ ನಡೆಯುವುದು. ಅನಗತ್ಯ ದುಂದುವೆಚ್ಚಗಳಿಗೆ ಕಡಿವಾಣ ಹಾಕಿ. ಹಣಕಾಸು, ಬ್ಯಾಂಕಿನ ಮಾಹಿತಿಗಳನ್ನು ಅನ್ಯರಲ್ಲಿ ಹಂಚಿಕೊಳ್ಳಬೇಡಿ.
ಓಂ ಶ್ರೀ ಹ್ರೀಂ ಕ್ಲೀಂಕ್ ನಮಃ ಮಂತ್ರ ಜಪಿಸಿ. ಶುಭ ಸಂಖ್ಯೆ–6

ನಾಳೆ ನಂಜನಗೂಡಿನಲ್ಲಿ ವಿಶ್ವವಿಖ್ಯಾತ ಶ್ರೀಕಂಠೇಶ್ವರಸ್ವಾಮಿಯ ದೊಡ್ಡ ಜಾತ್ರೆ

ನಂಜನಗೂಡು: ದಕ್ಷಿಣಕಾಶಿ ಎಂದೇ ಪ್ರಸಿದ್ಧಿ ಪಡೆದಿರುವ ಶ್ರೀ ಶ್ರೀ ಕಂಠೇಶ್ವರ ಸ್ವಾಮಿಯ ವೈಭವಯುತ ಪಂಚ ಮಹಾ ರಥೋತ್ಸವವು ಮಾ.30ರಂದು ನಡೆಯಲಿದ್ದು, ಜಾತ್ರಾ ಮಹೋತ್ಸವಕ್ಕೆ ಈಗಾಗಲೇ ಸಕಲ ಸಿದ್ಧತೆಯನ್ನು ಕೈಗೊಳ್ಳಲಾಗಿದೆ.

ಇಡೀ ದಕ್ಷಿಣ ಭಾರತದಲ್ಲೇ ಒಂದೇ ಬಾರಿಗೆ 5 ರಥಗಳನ್ನು ಏಕ ಕಾಲದಲ್ಲಿ ಎಳೆಯುವ ಏಕೈಕ ಕ್ಷೇತ್ರ ನಂಜನಗೂಡಿನ ಶ್ರೀಕಂಠೇಶ್ವರ ಸ್ವಾಮಿಯ ದೊಡ್ಡ ಜಾತ್ರೆಯಲ್ಲಿ ಮಾತ್ರ. ಗೌತಮ ಮಹಾರಥವು ಜಾತ್ರೆಯ ಪ್ರಮುಖ ಆಕರ್ಷಣಗಳಲ್ಲಿ ಒಂದಾಗಿದೆ, ಮೊದಲು ಗಣಪತಿ, ಪಾರ್ವತಿ ಸಮೇತ ಶ್ರೀಕಂಠೇಶ್ವರ, ಪಾರ್ವತಿ, ಸುಬ್ರಮಣ್ಯಸ್ವಾಮಿ, ಚಂಡಿಕೇಶ್ವರಸ್ವಾಮಿಯವರ ರಥಗಳು ರಥ ಬೀದಿಯಲ್ಲಿ 1.5 ಕಿ.ಮೀ ಚಲಿಸಲಿವೆ. ದೇವಾಲಯದಲ್ಲಿ ಈಗಾಗಲೇ ರಥೋತ್ಸವದ ಅಂಗವಾಗಿ ಸಕಲ ಸಿದ್ದತೆಯನ್ನು ಕೈಗೊಳ್ಳಲಾಗಿದ್ದು ರಥಗಳ ಚಕ್ರವನ್ನು ಸರಿಪಡಿಸಿ ಹೊಸ ಹಗ್ಗ ಕಟ್ಟುವ ಕಾರ್ಯ ಪ್ರಗತಿಯಲ್ಲಿದೆ. ಅಲ್ಲದೆ ಬಣ್ಣ ಬಣ್ಣದ ಬಾವುಟಗಳನ್ನು ಕಟ್ಟಿ, ರಥವನ್ನು ವಿಶೇಷವಾಗಿ ಕಂಗೊಳಿಸುವಂತೆ ಮಾಡುವ ಸಲುವಾಗಿ ಕಾರ್ಮಿಕರು ಕಳೆದ ಹಲವಾರು ದಿನಗಳಿಂದ ಸಿದ್ದತೆ ಕಾರ್ಯದಲ್ಲಿ ನಿರತರಾಗಿದ್ದಾರೆ, ಅಲ್ಲದೆ ಪಾರ್ವತಿ ರಥ, ಗಣಪತಿ, ಸುಬ್ರಮಣ್ಯೇಶ್ವರ, ಚಂಡಿಕೇಶ್ವರ ರಥಗಳನ್ನು ಸಿದ್ದಪಡಿಸಲಾಗುತ್ತಿದೆ. ದೇವಾಲಯದ ಸುತ್ತಲೂ ಕೂಡ ತಳಿರು ತೋರಣಗಳನ್ನು ಕಟ್ಟುವ ಮೂಲಕ



ಜಾತ್ರೆಯ ಸಿದ್ದತೆ ಪರಿಶೀಲಿಸುತ್ತಿರುವ ಶಾಸಕ ದರ್ಶನ್ ಧ್ರುವನಾರಾಯಣ್

ಜಾತ್ರೆಗೆ ಸಿದ್ದತೆ ನಡೆಸಲಾಗಿದೆ.

ವಿಶೇಷ ವಿದ್ಯುತ್‌ದೀಪ ಅಲಂಕಾರ: ಜಾತ್ರಾ ಮಹೋತ್ಸವದ ಅಂಗವಾಗಿ ದೇವಾಲಯದ ಆವರಣದ ಸುತ್ತಲೂ ಕೂಡ ಬಣ್ಣ ಬಣ್ಣದ ವಿದ್ಯುತ್ ದೀಪಗಳಿಂದ ಸಿಂಗರಿಸಲಾಗಿದೆ. ಅಲ್ಲದೆ ನಗರದ ಪ್ರಮುಖ ಬೀದಿಗಳಲ್ಲಿ ಹಾಗೂ ಕಟ್ಟಡಗಳಲ್ಲಿ ವಿದ್ಯುತ್ ದೀಪಗಳಿಂದ ಅಲಂಕೃತಗೊಳಿಸಲಾಗಿದೆ.

ರಾಜ್ಯದ ವಿವಿಧ ಮೂಲೆಗಳಿಂದ ಬರುವ ಭಕ್ತಾಧಿಗಳ ಅನುಕೂಲಕ್ಕಾಗಿ ಮೂಲ ಸೌಕರ್ಯ ಕಲ್ಪಿಸುವ ಸಲುವಾಗಿ ತಾತ್ಕಾಲಿಕ ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆ ಸೇರಿದಂತೆ, ಆರೋಗ್ಯ ಸೇವೆ, ಸೇರಿದಂತೆ ಸಕಲ ಮೂಲಸೌಕರ್ಯಗಳಿಗೆ ಆದ್ಯತೆ ನೀಡಲಾಗಿದೆ, ಸಾರಿಗೆ ಸಂಸ್ಥೆಯ ವತಿಯಿಂದ ಹೆಚ್ಚುವರಿ ವಿಶೇಷ ಬಸ್ ಸೌಲಭ್ಯವನ್ನು ಕಲ್ಪಿಸಲಾಗಿದೆ ಅಲ್ಲದೆ ಹೆಚ್ಚುವರಿ ರೈಲುಗಳನ್ನು ಹಾಗೂ ರೈಲುಗಳಲ್ಲಿ ಹೆಚ್ಚುವರಿ ಭೋಗಿಗಳನ್ನು ಅಳವಡಿಸುವಂತೆ ರೈಲ್ವೆ ಇಲಾಖೆಗೆ ಪತ್ರ ಬರೆಯಲಾಗಿದೆ.

ಮಾ.30ರ ಸೋಮವಾರ ಉದಯಾತ್ಪೂರ್ವ 5.50 ರಿಂದ 6.30 ಗಂಟೆಯೊಳಗೆ ಸಲ್ಲುವ ಶುಭ ಮೀನ ಲಗ್ನದಲ್ಲಿ ಶ್ರೀ ಮನ್ಮಹಾಗೌತಮ ರಥಾರೋಹಣ ಜರುಗಲಿದ್ದು ಇದನ್ನೇ ಲಕ್ಷಾಂತರ ಭಕ್ತಾಧಿಗಳು ಕಣ್ತುಂಬಿಕೊಳ್ಳಲು ಕಾತುರದಿಂದ ಕಾಯುತ್ತಿದ್ದಾರೆ. ರಥದಲ್ಲಿ ವಜ್ರ ವೈಡೂರ್ಯ ಖಚಿತ ಶ್ರೀಕಂಠೇಶ್ವರಸ್ವಾಮಿಯ ಮೂರ್ತಿಯನ್ನು ಇರಿಸಿ ಹೂವಿನ ಅಲಂಕಾರದಿಂದ ವಿಶೇಷವಾಗಿ ಅಲಂಕರಿಸಲಾಗುತ್ತದೆ. ನಿಗದಿತ ಸಮಯದಲ್ಲಿ ಅರ್ಚಕ ವೃಂದ ಧಾರ್ಮಿಕ ವಿಧಿವಿಧಾನ, ವೇದಘೋಷಗಳು ಮೊಳಗಿಸಿದ ನಂತರ ಮಹಾಮಂಗಳಾರತಿ ಈಡುಗಾಯಿ ಒಡೆದು ರಥೋತ್ಸವಕ್ಕೆ ಚಾಲನೆ ಸಿಗಲಿದೆ.

ಈ ಅಮೃತಘಳಿಗೆಯನ್ನೇ ಲಕ್ಷಾಂತರ ಭಕ್ತಾದಿಗಳು ಭಾರೀ ಗಾತ್ರದ ಹಗ್ಗವನ್ನು ಹಿಡಿದು ಜಯ ಘೋಷ, ಉದ್ಘೋಷಗಳನ್ನು ಮುಗಿಲು ಮುಟ್ಟುವಂತೆ ಕೂಗುತ್ತಾ ರಥವನ್ನು ಎಳೆಯುತ್ತಾರೆ. ರಥವು ರಾಜಗಾಂಭೀರ್ಯತೆಯಿಂದ ಚಲಿಸುವುದನ್ನು ನೋಡಿ ಭಕ್ತರು ಭಾವಪರವಶರಾಗಿ ಪುಳಕಿತರಾಗುತ್ತಾರೆ.

ಏ.1 ರಂದು ಅವಭೃತ ತೀರ್ಥಸ್ನಾನ ಮಾಡಿದರೆ ಮಾಡಿದ ಪಾಪಗಳೆಲ್ಲವೂ ನಶಿಸಿ ಹೋಗುತ್ತದೆ ಎಂಬ ನಂಬಿಕೆ ಇದ್ದು ಭಕ್ತರು ಪುಣ್ಯಸ್ನಾನದಲ್ಲಿ ಪಾಲುಗೊಳ್ಳಲಿದ್ದಾರೆ. ಅಲ್ಲದೆ ಅದೇ ದಿನ ಸಂಜೆ 7 ಗಂಟೆಗೆ ಕಪಿಲಾ ನದಿಯ ತೇಲುವ ದೇವಾಲಯದಲ್ಲಿ ತೆಪ್ಪೋತ್ಸವ ನಡೆಯಲಿದ್ದು ಲಕ್ಷಾಂತರ ಭಕ್ತರು ಇದಕ್ಕೆ ಸಾಕ್ಷಿಯಾಗಲಿದ್ದಾರೆ.

ಜಾತ್ರಾ ಮಹೋತ್ಸವದ ಅಂಗವಾಗಿ ಈಗಾಗಲೇ ದೇವಾಲಯದಲ್ಲಿ ಮಾ 23 ರಿಂದಲೇ ವಿವಿಧ ರೀತಿಯ ಧಾರ್ಮಿಕ ಕೈಂಕರ್ಯಗಳನ್ನು ಆರಂಭಿಸಲಾಗಿದೆ. ಜಾತ್ರಾ ಮಹೋತ್ಸವದಂದು ಬೆಳಿಗ್ಗೆಯಿಂದಲೇ ಪೂಜಾ ಕಾರ್ಯಗಳು ಜರುಗಲಿವೆ. ಅಂದು ಸಂಜೆ ಹಂಸಾರೋಹಣ ನಂತರ ನಟೇಶೋತ್ಸವ ಮಾ31 ರಂದು ಮಹಾಭೂತಾರೋಹಣೋತ್ಸವ. ದೇವಿ ಪ್ರಣಯಕಲಹ ಸಂಧಾನೋತ್ಸವ. ಏ.1ರಂದು ಚೂರ್ಣೋತ್ಸವ ಅವಭೃತ ತೀರ್ಥಸ್ನಾನ ರಾತ್ರಿ 7 ಗಂಟೆಗೆ ತೆಪ್ಪೋತ್ಸವ ನಂತರ ನರಾಂ ಧೂಳಿಕಾರೋಹಣೋತ್ಸವ. ಧ್ವಜಾವರೋ ಹಣ ಏ.2 ರಂದು ಪುಷ್ಪಯಾಗ ಪೂರ್ವಕ ಪಂಚೋಪಾರಪೂರ್ವಕ ಕೈಲಾಸಯಾನಾ ರೋಹಣೋತ್ಸವ ಏ.3 ರಂದು ಮಹಾಸಂಪ್ರೋಕ್ಷಣೆ ಪೂರ್ವಕ ನಂದಿವಾಹನೋತ್ಸವದೊಂದಿಗೆ ಜಾತ್ರಾ ಮಹೋತ್ಸವಕ್ಕೆ ತೆರೆ ಬೀಳಲಿದೆ.

ಕಪಿಲ ನದಿತೀರದ ಶ್ರೀ ಬಳ್ಳೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಭಗವಾಧ್ವಜ ಲೋಕಾರ್ಪಣೆ

ತಿ.ನರಸೀಪುರ, ಮಾ.28–ಪಟ್ಟಣದ ಹೋಟೆಲ್ ಉದ್ಯಮಿಯೊಬ್ಬರು ತಮ್ಮ ಪುತ್ರಿಯ ಸವಿನೆನಪಿಗಾಗಿ ಹಾಗೂ ಲೋಕ ಕಲ್ಯಾಣಾರ್ಥವಾಗಿ ಸ್ಥಾಪಿಸಿದ್ದ ಭಗವಾಧ್ವಜವನ್ನು ಲೋಕಾರ್ಪಣೆ ಮಾಡಿದರು.

ಪಟ್ಟಣದ ಖಾಸಗೀ ಬಸ್ ನಿಲ್ದಾಣದ ಬಳಿ ಇರುವ ಹರೀಶ್ ಮಿಲ್ಟ್ರಿ ಹೋಟೆಲ್ ಮಾಲೀಕರಾದ ಸದಾಶಿವ ಹಾಗು ದಾಕ್ಷಾಯಣಿ ದಂಪತಿಗಳು ಪಟ್ಟಣದ ಕಪಿಲಾ ನದಿತೀರದಲ್ಲಿರುವ ಶ್ರೀ ಬಳ್ಳೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಭಗವಾಧ್ವಜ ನಿರ್ಮಾಣ ಮಾಡುವ ಮೂಲಕ ಅಗಲಿದ ಪುತ್ರಿ ರಮ್ಯ ಹೆಸರನ್ನು ಜೀವಂತವಾಗಿಡುವ ಪ್ರಯತ್ನ ಮಾಡಿದ್ದಾರೆ.

ಅರೆ ಬೊಮ್ಮನಹಳ್ಳಿ ಪಾರಮಾರ್ಥಿಕ ಮಠದ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಶ್ರೀರಾಮ ನವಮಿಯಂದು ಭಗವಾಧ್ವಜವನ್ನು ಹಾರಿಸುವ ಮೂಲಕ ಲೋಕಾರ್ಪಣೆ ಮಾಡಿದರು.

ಈ ವೇಳೆ ಮಾತನಾಡಿದ ಅವರು ಭಗವದ್ವಜವು ಭಾರತೀಯ ಧಾರ್ಮಿಕ–ಸಾಂಸ್ಕೃತಿಕ ಪರಂಪರೆಯಲ್ಲಿ ಅತ್ಯಂತ ಪವಿತ್ರವಾದ ಧ್ವಜವಾಗಿದೆ. "ಭಗವ" ಎಂದರೆ ಭಗವಂತ, "ಧ್ವಜ" ಎಂದರೆ ಧರ್ಮ, ಶಕ್ತಿ ಮತ್ತು ಗುರುತಿನ ಸಂಕೇತ. ಆದ್ದರಿಂದ ಭಗವದ್ಧ್ವಜವು ಭಗವಂತನ ಸಾನ್ನಿಧ್ಯ, ಧರ್ಮದ ವಿಜಯ ಮತ್ತು ಸನಾತನ ಮೌಲ್ಯಗಳ ಪ್ರತೀಕವಾಗಿ ಪರಿಗಣಿಸಲ್ಪ ಡುತ್ತದೆ ಎಂದರು.

ಬಿಜೆಪಿ ಮುಖಂಡ ತೋಟದಪ್ಪ ಬಸವರಾಜು ಮಾತನಾಡಿ ಭಗವದ್ಧ್ವಜವು ಹಿಂದೂ ಧರ್ಮದಲ್ಲಿ ಏಕತೆ ಮತ್ತು ಶಿಸ್ತುಗಳ ಸಂಕೇತವೂ ಹೌದು. ಪುರಾಣಗಳಲ್ಲಿ ಹಾಗೂ ಇತಿಹಾಸದಲ್ಲಿ ಅನೇಕ ಋಷಿಗಳು, ಸಂತರು ಮತ್ತು ವೀರರು ಭಗವದ್ಧ್ವಜದ ಅಡಿಯಲ್ಲಿ ಧರ್ಮರಕ್ಷಣೆಗೆ ನಿಂತಿದ್ದಾರೆ ಎಂಬ ಉಲ್ಲೇಖಗಳಿವೆ. ರಾಮಾಯಣ–ಮಹಾಭಾರತ ಕಾಲದಿಂದಲೇ ಧ್ವಜವು ಯುದ್ಧಭೂಮಿಯಲ್ಲಿ ಧರ್ಮದ ಧ್ವನಿಯಾಗಿ ಹಾರಿದುದನ್ನು ನಾವು ಕಾಣುತ್ತೇವೆ.

ಭಗವಾಧ್ವಜ ನಿರ್ಮಾತೃ ಸದಾಶಿವ ಮಾತನಾಡಿದರು. ಅಘೋರಿ ಗುರುಗಳಾದ ಧನಂಜಯ್, ಬಳ್ಳೇಶ್ವರ ಸ್ವಾಮಿ ದೇವಸ್ಥಾನದ ಅರ್ಚಕ ಅರುಣ್ ಕುಮಾರ್, ದಾಕ್ಷಾಯಣಿ ಸದಾಶಿವ, ಬಂಕ್ ಮಾಲೀಕ ಇಂದ್ರೇಶ್, ರೈತ ಮುಖಂಡ ಶಿವಕುಮಾರ್, ಪರಶಿವಮೂರ್ತಿ, ಕುರುಬೂರು ಶಿವು ಇದ್ದರು.



ಶ್ರೀ ಬಳ್ಳೇಶ್ವರ ದೇವಸ್ಥಾನದ ಮುಂಭಾಗ ನಿರ್ಮಿಸಲಾಗಿರುವ ಭಗವಾಧ್ವಜದ ಲೋಕಾರ್ಪಣೆ ಮಾಡಲಾಯಿತು.

ಗರಳಪುರಿ ಉತ್ಸವದಲ್ಲಿ ಸ್ಪರ್ಧೆ

ರಂಗೋಲಿ ಭಾರತೀಯ ಸಂಸ್ಕೃತಿಯ ಪ್ರತೀಕ

ನಂಜನಗೂಡು: ರಂಗೋಲಿ ಭಾರತೀಯ ಸಂಸ್ಕೃತಿಯ ಪ್ರತೀಕ, ಸಾಂಪ್ರದಾಯಿಕ ಮೌಲ್ಯಗಳನ್ನು ಪ್ರತಿಬಿಂಬಿಸುವ ಈ ರಂಗೋಲಿ ಸ್ಪರ್ಧೆ ನಮ್ಮ ಸಂಸ್ಕೃತಿ ಮತ್ತು ಪರಂಪರೆಯನ್ನು ಉಳಿಸಿ ಬೆಳೆಸುವಲ್ಲಿ ಮಹತ್ವದ ಪಾತ್ರವಹಿಸುತ್ತವೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ ಹೇಳಿದರು.

ನಗರದ ಹೊಸ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಗರಳಪುರಿ ಉತ್ಸವದ ಅಂಗವಾಗಿ ತಾಲೂಕು ಪಂಚ ಗ್ಯಾರಂಟಿ ಅನುಷ್ಠಾನ ಸಮಿತಿಯ ವತಿಯಿಂದ ಏರ್ಪಡಿಸಲಾಗಿದ್ದ ರಂಗೋಲಿ ಸ್ಪರ್ಧೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ರಂಗೋಲಿ ಸ್ಪರ್ಧೆಗಳು ಭಾರತೀಯ ಸಂಸ್ಕೃತಿಯನ್ನು ಎತ್ತಿ ಹಿಡಿಯುವುದರ ಜೊತೆಗೆ, ಮಹಿಳೆಯರ ಸೃಜನಶೀಲತೆಯನ್ನು ಪ್ರೋತ್ಸಾಹಿಸುವ ಮತ್ತು ಸಮುದಾಯದ ಬಾಂಧವ್ಯವನ್ನು ವೃದ್ಧಿಸಿ ಸೌಹಾರ್ದತೆಯನ್ನು ಮೂಡಿಸುವಂತಹ ಒಂದು ಸುಂದರ ಕಲಾತ್ಮಕತೆಯ ಆಚರಣೆಯಾಗಿದೆ ಎಂದರು.

ಗ್ಯಾರಂಟಿ ಅನುಷ್ಠಾನ ಸಮಿತಿ ರಾಜ್ಯ ಉಪಾಧ್ಯಕ್ಷೆ ಪುಷ್ಪ ಅಮರನಾಥ್, ಅಪರ ಜಿಲ್ಲಾಧಿಕಾರಿ ಶಿವರಾಜು, ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಕೆ.ಮಾರುತಿ ಮಾತನಾಡಿದರು.



ಸಮಾರಂಭದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕುರಹಟ್ಟಿ ಕೆ.ಜಿ.ಮಹೇಶ್, ಸಿ.ಎಂ. ಶಂಕರ್, ಶ್ರೀಕಂಠ ನಾಯಕ, ಕೆ.ಮಾರುತಿ, ಪ್ರದೀಪ್ ಕುಮಾರ್, ಶ್ರೀಕಂಠಸ್ವಾಮಿ, ಹಾಡ್ಯ ಜಯರಾಮ್, ಹರೀಶ್ ಇದ್ದರು.

ನಿವೃತ್ತ ಮುಖ್ಯೋಪಾಧ್ಯಾಯಿನಿ ಕಾತ್ಯಾಯಿನಿ ನಿಧನ



ಸರಗೂರು: ಪಟ್ಟಣದ ನಿವೃತ್ತ ಮುಖ್ಯೋಪಾಧ್ಯಾಯರಾದ ಕಾತ್ಯಾಯಿನಿ (74) ಶುಕ್ರವಾರ ತಡರಾತ್ರಿ ಮೈಸೂರಿನ ತಮ್ಮ ನಿವಾಸದಲ್ಲಿ ನಿಧನರಾಗಿದ್ದಾರೆ. ಸರಗೂರು ಪಟ್ಟಣದ ಸರ್ಕಾರಿ ಹಿರಿಯ ಪ್ರಾಥಮಿಕ ಬಾಲಕರ ಶಾಲೆಯಲ್ಲಿ ಮುಖ್ಯೋಪಾಧ್ಯಾಯರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದರು ಮೃತರು ತಮ್ಮಂದಿರು, ತಂಗಿ, ಸೇರಿದಂತೆ ಅಪಾರ ಬಂದು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ಮೈಸೂರಿನ ವಿದ್ಯಾರಣ್ಯಪುರಂ ವೀರಶೈವ ಲಿಂಗಾಯಿತ ರುದ್ರಭೂಮಿಯಲ್ಲಿ ಶನಿವಾರ ನೆರ ವೇರಿಸಲಾಯಿತು ಎಂದು ಕುಟುಂಬ ಮೂಲಗಳು ತಿಳಿಸಿವೆ.

ಪಂಚ ಗ್ಯಾರಂಟಿ ಜಾರಿಗೆ ತಂದ ಸಿದ್ದರಾಮಯ್ಯ ಜನನಾಯಕ



ತಿ.ನರಸೀಪುರ ಮಾ 28– ರಾಜ್ಯದಲ್ಲಿ ಪಂಚ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸುವ ಮೂಲಕ ಸಿದ್ದರಾಮಯ್ಯ ಅವರು ಕರ್ನಾಟಕ ರಾಜಕಾರಣದ ಇತಿಹಾಸದಲ್ಲಿ ಅತ್ಯಂತ ಜನಪ್ರಿಯ ಜನನಾಯಕ ಎಂಬ ಕೀರ್ತಿಗೆ ಪಾತ್ರರಾಗಿದ್ದಾರೆ ಎಂದು ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯೆ ಎಂ ಸುಧಾ ಮಹದೇವಯ್ಯ ಬಣ್ಣಿಸಿದ್ದಾರೆ.

ಪಟ್ಟಣದಲ್ಲಿ ಸುದ್ದಿಗಾರೊಂದಿಗೆ ಮಾತನಾಡಿದ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯನವರು ತಮ್ಮ ಸ್ವಂತ ಪರಿ ಶ್ರಮದಿಂದ ಎತ್ತರಕ್ಕೆ ಏರಿದವರು, ಮೈಸೂರು ಜಿಲ್ಲೆಯ ಸಿದ್ದರಾಮನ ಹುಂಡಿಯ ಕುಗ್ರಾಮದಲ್ಲಿ ಜನಿಸಿ, ರೈತ ಕುಟುಂಬದ, ಹಳ್ಳಿಗಾಡಿನ ಬದುಕಿನ ಎಲ್ಲಾ ಅಡೆ–ತಡೆಗಳನ್ನು ಸವಲಾಗಿ ಸ್ವೀಕರಿಸಿ ಮೆಟ್ಟಿನಿಂತು ಸಾಧನೆಯ ಶಿಖರ ಏರಿದ ಸಿದ್ದರಾಮಯ್ಯನವರು ಶೋಷಿತ ಸಮುದಾಯದ ನಾಯಕ ಮಾಜಿ ಸಿಎಂ ಡಿ ದೇವರಾಜ ಅರಸು ಅವರ ನಂತರ ಸುದೀರ್ಘ ಅವಧಿ ಮುಖ್ಯಮಂತ್ರಿಗಳ ದಾಖಲೆಯನ್ನು ಮಾಡಿ ಮುನ್ನಡೆ ಯುತ್ತಿದ್ದಾರೆ ಎಂದರು.

ಅವರ ಜೀವನದಲ್ಲಿ ಸಾಕಷ್ಟು ಕಷ್ಟಗಳನ್ನು ಹಾಗೂ ಹಳ್ಳಿಯ ಜೀವನವನ್ನು ಅರಿತಿದ್ದರಿಂದಲೇ ಶೋಷಿತ ವರ್ಗಗಳ ಪರ ಅವರ ಮನ ಸದಾ ಮಿಡಿಯುತ್ತಿದೆ, ಹಾಗಾಗಿಯೇ ಅವರು ಸಮಾಜವಾದಿ ಚಿಂತಕ ಡಾಕ್ಟರ್ ರಾಮ ಮನೋಹರ ಲೋಹಿಯಾ ಅವರ ಪ್ರಭಾವಕ್ಕೆ ಒಳಗಾಗಿದ್ದರು ಹಾಗೂ ಕಷ್ಟದ ದಿನಗಳನ್ನು ಅನುಭವಿಸಿದ್ದರಿಂದ ಮುಖ್ಯಮಂತ್ರಿಯಾದಾಗ ಬಡವರ ಪರವಾದ ಹಲವಾರು ಯೋಜನೆಗಳನ್ನು ಇಂದು ಜಾರಿಗೆ ಸಾಧ್ಯವಾಗಿದೆ ಎಂದರು,

ಈ ಬಾರಿ ಬಜೆಟ್‌ನಲ್ಲಿ ರಾಜಧಾನಿ ಮೈಸೂರನ್ನು ಎರಡನೇ ಐಟಿ–ಸಿಟಿ ನಗರವನ್ನಾಗಿ ನಿರ್ಮಿಸಲು ಪಣತೊಟ್ಟಿದ್ದಾರೆ, 17 ಬಾರಿ ಬಜೆಟ್ ಮಂಡಿಸಿದ ದಾಖಲೆಗೆ ಪಾತ್ರರಾಗಿ ಬಜೆಟ್‌ನಲ್ಲಿ ತವರು ಜಿಲ್ಲೆಗೆ ಬರಪೂರ ಕೊಡುಗೆಗಳನ್ನು ನೀಡಿದ್ದಾರೆ, ಮೈಸೂರು ಜಿಲ್ಲೆಯ ಜನ ಮಾನಸದಲ್ಲಿ ಶಾಶ್ವತವಾಗಿ ನೆಲೆಯಾಗಿದ್ದಾರೆ, ಶ್ರೀ ಸಾಮಾನ್ಯರ ಅಭಿವೃದ್ಧಿಗಾಗಿ ಏನೆಲ್ಲಾ ಯೋಜನೆಗಳನ್ನ ತರಬಹುದು ಎಂಬುದಕ್ಕೆ ಜನಸಾಮಾನ್ಯರ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಾದರಿಯಾಗಿದ್ದಾರೆ ಎಂದರು,

ಗ್ಯಾರಂಟಿ ಯೋಜನೆಗಳನ್ನು ಪಡೆಯುತ್ತಿರುವ ರಾಜ್ಯದ ಜನತೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಇನ್ನೂ ಎರಡು ವರ್ಷ ಪೂರೈಸಿ ಪೂರ್ಣಾವಧಿ ಮುಖ್ಯಮಂತ್ರಿ ಆಗಬೇಕೆಂಬುದು ರಾಜ್ಯದ ಜನರ ಆಶ್ರಯವಾಗಿದೆ, ಸಿದ್ದರಾಮಯ್ಯನವರು ಮುಖ್ಯಮಂತ್ರಿ ಆಗಿ ಮುಂದುವರೆದರೆ ಮೈಸೂರು ಜಿಲ್ಲೆಯಲ್ಲಿ ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ. ಮಹದೇವಪ್ಪನವರಿಗೆ ಹೆಚ್ಚಿನ ಶಕ್ತಿ ಬರುತ್ತದೆ ಎಂದರು,

ಐದನೇ ಪುಟದಿಂದ

48 ಕೆ.ಜಿ. ಸಿಂಥೆಟಿಕ್ ಡ್ರಗ್ಸ್ ವಶ

ವೊಂದನ್ನು ಕೂಡ ಬಳಕೆ ಮಾಡಿಕೊಂಡಿದ್ದರು ಎಂದು ಹೇಳಿದರು.

ಕೆಲವು ಡ್ರಗ್ಸ್ ಅನ್ನು ಪ್ಯಾಕ್ ಮಾಡಿದ್ದರೆ, ಮತ್ತೆ ಕೆಲವು ಡ್ರಗ್ಸ್ ಹಾಗೂ ಡ್ರಗ್ಸ್‌ನ ಕಚ್ಚಾ ವಸ್ತುಗಳನ್ನು ಒಣ ಹಾಕಿದ್ದರು. ಮಾದಕ ವಸ್ತುಗಳನ್ನು ವಶಪಡಿಸಿಕೊಂಡ ನಂತರ ಇಬ್ಬರು ಆರೋಪಿಗಳನ್ನು ಠಾಣೆಗೆ ಕರೆ ತಂದು ಹೋಗಿ ವಿಚಾ ರಣೆಗೊಳಪಡಿಸಿದಾಗ ಬಹಳಷ್ಟು ಮಾಹಿತಿ ನೀಡಿದ್ದಾರೆ ಎಂದರು. ಡ್ರಗ್ಸ್ ತಯಾರಿಕೆ ಮಾಡುತ್ತಿದ್ದ ಈ ಶೆಡ್ ಅನ್ನು ಫೆಬ್ರವರಿ 27 ರಂದು ಬಾಡಿಗೆ ಪಡೆದಿದ್ದೆವು. ಡ್ರಗ್ಸ್‌ಗೆ ಬೇಕಾಗಿರುವ ಕಚ್ಚಾ ವಸ್ತುಗಳನ್ನು ಮುಂಬೈನಿಂದ ತಂದಿದ್ದೇವೆ. ಈ ಪ್ರಕರಣದಲ್ಲಿ ಮುಂಬೈನ ಹಲವರು ಭಾಗಿಯಾಗಿದ್ದಾರೆ ಎಂಬ ಸಂಗತಿಯನ್ನು ಬಾಯ್ಬಿಟ್ಟಿದ್ದಾರೆ ಎಂದು ತಿಳಿಸಿದರು.

ಡ್ರಗ್ಸ್ ಜಾಲ ಭೇದಿಸಲು ಡಿವೈಎಸ್ಪಿ ನೇತೃತ್ವದಲ್ಲಿ ಮೂರು ತಂಡ ರಚನೆ

ಹುಣಸೂರಿನ ಡ್ರಗ್ಸ್ ಪ್ರಕರಣದಲ್ಲಿ ಭಾಗಿಯಾಗಿರುವ ಇನ್ನು ಹಲವರನ್ನು ಬಂಧಿಸಲು ಹುಣಸೂರು ಡಿವೈಎಸ್ಪಿ ರವಿಕುಮಾರ್ ನೇತೃತ್ವದಲ್ಲಿ ಮೂರು ತಂಡ ಗಳನ್ನು ರಚನೆ ಮಾಡಿದ್ದೇವೆ ಎಂದು ಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದರು. ಈ ಪ್ರಕರಣ ಮುಂಬೈಗೂ ಸಂಪರ್ಕ ವಿರುವ ಹಿನ್ನೆಲೆಯಲ್ಲಿ ಪೊಲೀಸರ ಒಂದು ತಂಡ ಮುಂಬೈಗೆ ತೆರಳಲಿದೆ. ಈ ಪ್ರಕರಣದಲ್ಲಿ ಭಾಗಿಯಾಗಿರುವ ಇನ್ನು ಹಲವರ ಬಂಧನಕ್ಕೆ ಕಾರ್ಯಾಚರಣೆ ನಡೆಸಲಿದ್ದಾರೆ ಎಂದರು. ಈ ಪ್ರಕರಣದಲ್ಲಿ ಸ್ಥಳಿಯರು ಕೂಡ ಭಾಗಿಯಾಗಿರುವ ಬಗ್ಗೆ ಮಾಹಿತಿ ದೊರೆತಿದ್ದು, ಅವರನ್ನು ಕೂಡ ಶೀಘ್ರವೇ ಬಂಧಿಸಲಾಗುವುದು ಎಂದರು.

ಈ ಪ್ರಕರಣದ ಆರೋಪಿಗಳನ್ನು ಮತ್ತಷ್ಟು ವಿಚಾರಣೆಗೊಳಪಡಿಸ ಬೇಕಾಗಿದೆ. ತರುವಾಯ ಅನೇಕ ವಿಷಯ ಬಯಲಾಗ ಲಿದೆ. ಇಷ್ಟು ಪ್ರಮಾಣದ ಡ್ರಗ್ಸ್ ಎಲ್ಲಿಗೆ ಸಾಗಾಟ ಮಾಡುತ್ತಿದ್ದರು, ಇದರ ಗ್ರಾಹಕರು ಯಾರು, ಈ ಜಾಲದಲ್ಲಿರುವ ಬೇರೆ ವ್ಯಕ್ತಿಗಳು ಯಾರು ಎಂಬುದು ಸೇರಿದಂತೆ ಹಲವು ಮಾಹಿತಿಗಳನ್ನು ಕಲೆ ಹಾಕಬೇಕಿದೆ ಎಂದು ಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದರು.

ಯಾವ ನಿರ್ಬಂಧ ಇಲ್ಲ

ಸಿಎಂ ಸ್ಥಾನದ ವಿಚಾರಕ್ಕೂ, ಉಪಚುನಾವಣೆ ಫಲಿತಾಂಶಕ್ಕೂ ಸಂಬಂಧವೇ ಇಲ್ಲ: ಉಪಚುನಾವಣೆ ಫಲಿತಾಂಶ ಎರಡೂವರೆ ವರ್ಷಗಳ ರಾಜ್ಯ ಕಾಂಗ್ರೆಸ್ ಸರ್ಕಾರಕ್ಕೆ ಜನ ನೀಡುವ ತೀರ್ಪಾ ಎಂಬುದಕ್ಕೆ ಪ್ರತಿಕ್ರಿಯಿಸಿ, ಈ ಹಿಂದೆ ಉಪಚುನಾವಣೆಯಲ್ಲಿ ಮೂರು ಕಡೆ ಸೋತರಲ್ಲ, ಎರಡು ಸ್ಥಾನ ಅವರದೇ ಇತ್ತು. ಅದು ದಿಕ್ಸೂಚಿಯಲ್ಲವೇ? ಆಗ ಜನ ನಮ್ಮ ಪರವಾಗಿ ಆಶೀರ್ವಾದ ಮಾಡಿದರು. ಯಾವ ಚುನಾವಣೆಯಾದರೂ ನಾವೇ ಗೆಲ್ಲುತ್ತೇವೆ. ರಾಜ್ಯದಲ್ಲಿ 2028ಕ್ಕೂ ನಾವೇ ಗೆಲ್ಲುತ್ತೇವೆ ಎಂದರು.

ಸಿಎಂ ಸ್ಥಾನದ ಚರ್ಚೆಗೆ ಈ ಉಪಚುನಾವಣೆ ಫಲಿತಾಂಶ ತೆರೆ ಎಳೆಯಲಿದೆಯೇ? ಎಂಬುದಕ್ಕೆ ಪ್ರತಿಕ್ರಿಯಿಸಿ, ಅದಕ್ಕೂ ಇದಕ್ಕೂ ಸಂಬಂಧವೇ ಇಲ್ಲ. ನಮ್ಮದು ಹೈಕಮಾಂಡ್ ಪಾರ್ಟಿ, ಹೈಕಮಾಂಡ್ ಹೇಳಿದಂತೆ ಕೇಳಬೇಕಾಗುತ್ತದೆ. ಪಕ್ಷದ ಹೈಕಮಾಂಡ್ ಅನುಮತಿಸಿದರೆ, ಇನ್ನೆರೆಡು ವರ್ಷವೂ ನಾನೇ ಬಜೆಟ್ ಮಂಡಿಸುತ್ತೇನೆ. ಹೈಕಮಾಂಡ್ ಸೂಚನೆಯ ಮೇರೆಗೆ ನಾವು ನಡೆಯುತ್ತೇವೆ ಎಂದರು.

ಡ್ರಗ್ಸ್ ಮುಕ್ತ ರಾಜ್ಯ: ಜಿಲ್ಲಾ ಪೊಲೀಸ್‌ನಿಂದ ನಡೆಸಿರುವ ಡ್ರಗ್ಸ್ ಕಾರ್ಯಾಚರಣೆ ಸಂಬಂಧ ಪ್ರತಿಕ್ರಿಯಿಸಿ, ನಾವು ಡ್ರಗ್ಸ್ ಮಾಫಿಯಾ ವಿರುದ್ಧ ಹೋರಾಟ ಮಾಡುತ್ತಿದ್ದೇವೆ. ಡ್ರಗ್ಸ್ ಮುಕ್ತ ರಾಜ್ಯ ಮಾಡಬೇಕೆಂಬುದು ನಮ್ಮ ಉದ್ದೇಶ. ಆ ದಿಕ್ಕಿನಲ್ಲಿ ಪ್ರಯತ್ನ ಮಾಡುತ್ತಿದ್ದೇವೆ. ಜಿಲ್ಲಾ ಪೊಲೀಸ್ ಕಾರ್ಯಾಚರಣೆ ಕುರಿತು ವಿವರ ಪಡೆಯುತ್ತೇನೆ ಎಂದರು. ಮುಂಬೈ ಲಿಂಕ್ ಇದೆ ಎನ್ನಲಾಗುತ್ತಿದೆ ಎಂಬುದಕ್ಕೆ ಪ್ರತಿಕ್ರಿಯಿಸಿ, ಎಲ್ಲಿಯಾದರೂ ಲಿಂಕ್ ಇರಲಿ. ತನಿಖೆ ಮಾಡಿ ತಪ್ಪಿತಸ್ಥರಿಗೆ ಶಿಕ್ಷೆ ಕೊಡುವ ಕೆಲಸ ಮಾಡುತ್ತೇವೆ ಎಂದರು.

ಸಿಗ್ನಲ್ ತೊಂದರೆ ಇದ್ದಲ್ಲಿ ಸರಿಪಡಿಸೋಣ: ಮೈಸೂರು ನಗರದಲ್ಲಿ ಸಿಗ್ನಲ್ ಲೈಟ್‌ಗಳು ಹೆಚ್ಚಳಗೊಂಡಿವೆ ಎಂದು ನಾಗರಿಕರು ದೂರುತ್ತಿದ್ದಾರೆ ಎಂಬುದಕ್ಕೆ ಪ್ರತಿಕ್ರಿಯಿಸಿ, ಟ್ರಾಫಿಕ್ ನಿಯಂತ್ರಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡುವ ನಿಟ್ಟಿನಲ್ಲಿ ಸಿಗ್ನಲ್ ಲೈಟ್‌ಗಳನ್ನು ಹೆಚ್ಚುವರಿಯಾಗಿ ಅಳವಡಿಸಲಾಗಿದೆ. ಈ ಸಂಬಂಧ ಮಾಹಿತಿ ಪಡೆಯುತ್ತೇನೆ. ವೈಜ್ಞಾನಿಕವಾಗಿ ಹೆಚ್ಚುವರಿ ಸಿಗ್ನಲ್ ಅಳವಡಿಸಿದ್ದಾರೆ. ಏನಾದರೂ ತೊಂದರೆಗಳಿದ್ದರೆ ಸರಿಪಡಿಸೋಣ ಎಂದರು.

ಐಪಿಎಲ್ ಪಂದ್ಯಾವಳಿ ಬಗ್ಗೆ ಪ್ರತಿಕ್ರಿಯಿಸಿ, ಕ್ರಿಕೆಟ್ ಬಗ್ಗೆ ಆಸಕ್ತಿ ಇದೆ. ಆದರೆ ಮೈಸೂರಿಗೆ ಬಂದಿರುವ ಕಾರಣ ಅಲ್ಲಿಗೆ ಹೋಗಲು ಸಾಧ್ಯವಿಲ್ಲ ಎಂದರು. ಐಪಿಎಲ್ ಪಂದ್ಯಾವಳಿ ವೀಕ್ಷಣೆಗೆ ತಮಗೆ ಮತ್ತು ತಮ್ಮ ಕುಟುಂಬಕ್ಕೆ ಟಿಕೆಟ್ ನೀಡಬೇಕೆಂದು ವಿಧಾನಸಭೆಯಲ್ಲಿ ಒತ್ತಾಯಿಸಿದ ಹಾಗೂ ಕೆಲವರು ಟಿಕೆಟ್ ತಮಗೆ ಬೇಡ ಎಂದಿರುವ ಬಗ್ಗೆ ಪ್ರತಿಕ್ರಿಯಿಸಿ, ಮೊದಲಿನಿಂದ ಶಾಸಕರು, ಎಂಎಲ್‌ಸಿಗಳಿಗೆ ಟಿಕೆಟ್ ಕೊಡುತ್ತಿದ್ದಾರೆ. ಅದೇ ರೀತಿ ಈಗಲೂ ಕೊಡುತ್ತಿದ್ದಾರೆ. ಒಂದು ಟಿಕೆಟ್ ಕೊಡುತ್ತಿದ್ದರು. ಹಾಗಾಗಿ ಎರಡು ಟಿಕೆಟ್ ಕೊಡಿ ಎಂದು ಕೇಳಿದ್ದಾರೆ ಅಷ್ಟೆ, ಉಪಚುನಾವಣೆ ಪ್ರಚಾರ ಇರುವ ಹಿನ್ನೆಲೆಯಲ್ಲಿ ಏ.9ರವರೆಗೆ ಕ್ರಿಕೆಟ್ ನೋಡಲು ಸಾಧ್ಯವಿಲ್ಲ. ಕೆಲಸ ಇದ್ದರೆ ಹೋಗಲ್ಲ. ಕೆಲಸ ಇಲ್ಲವಾದರೆ ಹೋಗಿ ನೋಡುತ್ತೇನೆ ಎಂದರು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಶಾಸಕರಾದ ಕೆ.ಹರೀಶ್‌ಗೌಡ, ಡಿ.ರವಿಶಂಕರ್, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಎಂಎಲ್‌ಸಿ ಡಾ.ಡಿ.ತಿಮ್ಮಯ್ಯ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ ಮತ್ತಿತರರು ಹಾಜರಿದ್ದರು.

ಆರ್‌ಸಿಬಿ ಗೆಲುವಿನ ಶುಭಾರಂಭ



ವಿಕೆಟ್ ಕಿತ್ತ ಜಾಕೋಬ್ ಡಫಿಯನ್ನು ಸಹ ಆಟಗಾರರು ಅಭಿನಂದಿಸಿದರು.

ವಿರಾಟ್ ಮೈಲಿಗಲ್ಲು

ಆರ್‌ಸಿಬಿ ತಂಡ ವಿರಾಟ್ ಕೊಹ್ಲಿ ಒಂದೇ ದಿನ ಎರಡೆರಡು ದಾಖಲೆ ಬರೆದರು. ಐಪಿಎಲ್‌ನಲ್ಲಿ ಚೇಸಿಂಗ್ ವೇಳೆ ವೈಯಕ್ತಿಕ 4000 ರನ್ ಗಳಿಸಿದ ಏಕೈಕ ಆಟಗಾರ ಎಂಬ ಹೆಗ್ಗಳಿಕೆಗೆ ವಿರಾಟ್ ಕೊಹ್ಲಿ ಭಾಜನರಾದರು. ಜೊತೆಗೆ ಐಪಿಎಲ್‌ನಲ್ಲಿ ತಮ್ಮ 64ನೇ ಅರ್ಧಶತಕ ದಾಖಲಿಸಿ ಅತೀಹೆಚ್ಚು ಅರ್ಧಶತಕ ದಾಖಲಿಸಿದ ಆಟಗಾರ ಎಂಬ ದಾಖಲೆಯನ್ನು ವಿರಾಟ್ ಕೊಹ್ಲಿ ತಮ್ಮದಾಗಿಸಿಕೊಂಡರು.

ಉಳಿದಂತೆ ಫಿಲ್ ಸಾಲ್ಟ್ 8ರನ್, ಜಿತೇಶ್ ಶರ್ಮಾ ಗೋಲ್ಡನ್ ಡಕ್‌ಔಟ್, ಟಿಮ್ ಡೇವಿಡ್ ಅಜೇಯ 16 ರನ್ ಗಳಿಸಿ ಕ್ರೀಜ್‌ನಲ್ಲಿದ್ದರು. ಎಸ್‌ಆರ್‌ಹೆಚ್ ಪರ ಡೇವಿಡ್ ಪೈನ್ 2 ವಿಕೆಟ್, ಹರ್ಷ ದುಬೆ ಮತ್ತು ಜೈದೇವ್ ಉನಾದ್ಕಟ್ ತಲಾ ಒಂದೊಂದು ವಿಕೆಟ್ ಪಡೆದರು.

ಇದಕ್ಕೂ ಮೊದಲು ಬ್ಯಾಟಿಂಗ್ ಮಾಡಿದ ಹೈದರಾಬಾದ್, ನಾಯಕ ಇಶಾನ್ ಕಿಶನ್ ಹಾಗೂ ಹೆನ್ರಿಚ್ ಕ್ಲಾಸೆನ್ ಅವರ 97 ರನ್‌ಗಳ ಜತೆಯಾಟದ ನೆರವಿನಿಂದ ಸ್ಪರ್ಧಾತ್ಮಕ ಮೊತ್ತ ಕಲೆಹಾಕಿತು. ಕ್ಲಾಸೆನ್ 31 ರನ್‌ಗಳಿಸಿ ಔಟಾದರೆ, ಇಶಾನ್ ಕಿಶನ್ 38 ಎಸೆತಗಳಲ್ಲಿ 8 ಬೌಂಡರಿ ಹಾಗೂ 5 ಸಿಕ್ಸರ್ ಸಹಿತ 80 ರನ್ ಚಚ್ಚಿದರು. ಕೊನೆಯಲ್ಲಿ ಅಬ್ಬರಿಸಿದ ಅನಿಕೇತ್ ವರ್ಮಾ 18 ಎಸೆತಗಳಲ್ಲಿ 3 ಬೌಂಡರಿ ಹಾಗೂ 4 ಸಿಕ್ಸರ್ ಸಹಿತ 43 ರನ್ ಬಾರಿಸಿ ತಂಡದ ಮೊತ್ತ 200ರ ಗಡಿ ದಾಟಿಸಿದರು. ಉಳಿದಂತೆ ಅಭಿಷೇಕ್ ಶರ್ಮಾ 7 ರನ್, ಟ್ರಾವಿಸ್ ಹೆಡ್ 11 ರನ್, ನಿತಿಶ್ ಕುಮಾರ್ ರೆಡ್ಡಿ ಕೇವಲ 1 ರನ್, ಸಲಿಲ್ ಅರೋರ 9 ರನ್, ಹರ್ಷ ದುಬೆ 3, ಹರ್ಷಲ್ ಪಟೇಲ್ ಡಕ್‌ಔಟ್, ಡೇವಿಡ್ ಪೇನ್ ಅಜೇಯ 5, ಜಯದೇವ್ ಉನಾದ್ಕಟ್ ಅಜೇಯ 3 ರನ್ ಗಳಿಸಿದರು. ಆರ್‌ಸಿಬಿ ಪರ ಜೇಕಬ್ ಡಫಿ ಹಾಗೂ ರೊಮಾರಿಯೊ ಶೆಫರ್ಡ್ ತಲಾ 3 ವಿಕೆಟ್ ಪಡೆದರೆ, ಭುವನೇಶ್ವರ್ ಕುಮಾರ್, ಅಭಿನಂದನ್ ಸಿಂಗ್ ಹಾಗೂ ಸುಯಶ್ ಶರ್ಮಾ ತಲಾ ಒಂದೊಂದು ವಿಕೆಟ್ ಪಡೆದರು.

ಪೊಲೀಸರಿಂದ ಮೈಸೂರು ನಿವಾಸಿ ಬಂಧನ

ಎರಡನೇ ಹಂತದ 6ನೇ ಕ್ರಾಸ್‌ನಲ್ಲಿನ ಮನೆಯಲ್ಲಿರುವುದು ತಿಳಿಯಿತು. ಸ್ಥಳೀಯ ಹಾಗೂ ದೆಹಲಿ ಪೊಲೀಸರು ಆ ಮನೆ ಮೇಲೆ ದಾಳಿ ಮಾಡಿ ಶ್ರೀನಿವಾಸ್‌ನನ್ನು ವಶಕ್ಕೆ ಪಡೆದರು. ನೇರವಾಗಿ ವಿ.ವಿ.ಪುರಂ ಪೊಲೀಸ್ ಠಾಣೆಗೆ ಕರೆತಂದು ಪ್ರಾಥಮಿಕ ತನಿಖೆ ನಡೆಸಿದರು. ಶ್ರೀನಿವಾಸ್ ತಂದೆ ಮೃತಪಟ್ಟಿದ್ದು, ವಯಸ್ಸಾದ ತಾಯಿ ಜೊತೆ ಬಾಡಿಗೆ ಮನೆಯಲ್ಲಿ ವಾಸವಿದ್ದಾನೆ. ಈತನ ಸಹೋದರ ಬೇರೆಡೆ ವಾಸ ಮಾಡುತ್ತಿದ್ದು, ಅವಿವಾಹಿತನಾದ ಈತ ಬಾಂಬ್ ಬೆದರಿಕೆ ಹಾಕುವ ದುಷ್ಟ ಕೃತ್ಯ ಎಸಗುವುದನ್ನು ಕರಗತ ಮಾಡಿಕೊಂಡಿ ದ್ದನು. ಬಹಳಷ್ಟು ಮಾಹಿತಿ ಪಡೆದ ದೆಹಲಿ ಪೊಲೀಸರು ಹಿರಿಯ ಅಧಿಕಾರಿಗಳಿಗೆ ವಿವರಣೆ ನೀಡಿದರು. ನಿನ್ನೆ ರಾತ್ರಿಯಿಂದ ಮುಂಜಾನೆವರೆಗೆ ದೆಹಲಿ ಪೊಲೀಸರ ತಂಡ ಶ್ರೀನಿವಾಸ್ ಮನೆಯಲ್ಲಿ ನಿರಂತರ ಶೋಧ ಕಾರ್ಯ ನಡೆಸಿದೆ. ಈ ವೇಳೆ ಬಾಂಬ್ ಬೆದರಿಕೆ ಹಾಕಲು ಬಳಸುತ್ತಿದ್ದ ಲ್ಯಾಪ್ ಟಾಪ್, ಮೊಬೈಲ್ ಫೋನ್, ಹಲವು ಸಿಮ್ ಕಾರ್ಡ್, ಬ್ಯಾಂಕ್ ಪಾಸ್ ಬುಕ್, ಆಧಾರ್ ಕಾರ್ಡ್ ಸೇರಿದಂತೆ ಹಲವು ದಾಖಲಾತಿಯನ್ನು ವಶಪಡಿಸಿ ಕೊಂಡರು.

ಶನಿವಾರ ಬೆಳಿಗ್ಗೆ ನ್ಯಾಯಾಧೀಶರ ಮನೆಯಲ್ಲಿ ಹಾಜರುಪಡಿಸಿದ ದೆಹಲಿ ಪೊಲೀಸರು ಆರೋಪಿ ಶ್ರೀನಿವಾಸ್‌ನನ್ನು ಟ್ರಾನ್ಸಿಟ್ ವಾರೆಂಟ್ ಪಡೆದು ದೆಹಲಿಗೆ ಕರೆದೊಯ್ದಿದ್ದಾರೆ.

ಭಾರತ ವಿರೋಧಿ ಉಗ್ರರಿಗೆ ಪಾಕ್ ಸುರಕ್ಷಿತ ಸ್ವರ್ಗ

ಉಗ್ರ ಸಂಘಟನೆಗಳ ಪೋಷಿಸುವುದ ಪಾಕ್ ನಿಲ್ಲಿಸಿಲ್ಲ: ಅಮೆರಿಕ ಸ್ಫೋಟಕ ವರದಿ


ನವದೆಹಲಿ, ಮಾ.28–ಅಮೆರಿಕ ಕಾಂಗ್ರೆಸ್ಸಿನ ಸಂಶೋಧನಾ ಸೇವೆ(CRS) ಹೊಸ ವರದಿಯು ಪಾಕಿಸ್ತಾನದ ಬಗ್ಗೆ ರಹಸ್ಯ ವಿಷಯಗಳನ್ನು ಬಹಿರಂಗಪಡಿಸಿದೆ. ಪಾಕಿಸ್ತಾನ ಭಯೋತ್ಪಾದಕ ಸಂಘಟನೆಗಳಿಗೆ ಸುರಕ್ಷಿತ ಸ್ವರ್ಗವಾಗಿ ಮುಂದುವರೆದಿದೆ ಎಂಬುದು ಮತ್ತೆ ಬಹಿರಂಗವಾಗಿದೆ. ಈ ಭಯೋ ತ್ಪಾದಕರು ಭಾರತಕ್ಕೆ ಕಳವಳವನ್ನುಂಟು ಮಾಡುತ್ತಿದ್ದಾರೆ. ಉಗ್ರರು ಜಮ್ಮು ಮತ್ತು ಕಾಶ್ಮೀರ ಪ್ರದೇಶದಲ್ಲಿ ಪ್ರತಿದಿನ ಭಯೋತ್ಪಾದಕ ಚಟುವಟಿಕೆಗಳನ್ನು ನಡೆಸುತ್ತಾರೆ. ಕಳೆದ ಕೆಲವು ವರ್ಷಗಳಿಂದ ಭಾರತ ಈ ಭಯೋತ್ಪಾದಕ ಸಂಘಟನೆಗಳ ವಿರುದ್ಧ ಬಲವಾದ ಕ್ರಮ ಕೈಗೊಂಡಿದೆ. ಆದರೆ ಈ ಭಯೋತ್ಪಾದಕರು ಪಾಕಿಸ್ತಾನದ ನೆಲದಿಂದ ತಮ್ಮ ಭಯೋತ್ಪಾದಕ ಚಟುವಟಿಕೆಗಳನ್ನು ನಿರ್ಭಯವಾಗಿ ಮುಂದುವರೆಸುತ್ತಿದ್ದಾರೆ.

2026ರ ಮಾರ್ಚ್ 25ರ ಸಿಆರ್‌ಎಸ್ ಇನ್ ಫೋಕಸ್ ವರದಿಯು ಪಾಕಿಸ್ತಾನದಲ್ಲಿ ಆಶ್ರಯ ಪಡೆದಿರುವ 15 ಭಯೋತ್ಪಾದಕ ಸಂಘಟನೆಗಳನ್ನು ವಿವರಿಸುತ್ತದೆ. ಈ ಸಂಘಟನೆಗಳಲ್ಲಿ ಹಲವನ್ನು ಅಮೆರಿಕ ವಿದೇಶಿ ಭಯೋತ್ಪಾದಕ ಸಂಘಟನೆಗಳು (FTO) ಎಂದು ಗೊತ್ತುಪಡಿಸಿದೆ. ಲಷ್ಕರ್–ಎ–ತೈಬಾ (LeT), ಜೈಶ್–ಎ–ಮೊಹಮ್ಮದ್(JeM), ಹರ್ಕತ್–ಉಲ್–ಜಿಹಾದ್–ಅಲ್–ಇಸ್ಲಾಮಿ (HUJI), ಹರ್ಕತ್–ಉಲ್–ಮುಜಾಹಿದ್ದೀನ್(HUM) ಮತ್ತು ಹಿಜ್ಬುಲ್ ಮುಜಾಹಿದ್ದೀನ್ (HM) ನಂತಹ ಭಾರತ ಮತ್ತು ಕಾಶ್ಮೀರ ಕೇಂದ್ರಿತ ಭಯೋತ್ಪಾದಕ ಸಂಘಟನೆಗಳು ಒಡ್ಡುತ್ತಿರುವ ನಿರಂತರ ಬೆದರಿಕೆಗಳನ್ನು ವರದಿಯು ಬೆಟ್ಟು ಮಾಡುತ್ತದೆ.

ಪಾಕಿಸ್ತಾನದಲ್ಲಿ ಭಯೋತ್ಪಾದಕ ಸಂಘಟನೆಗಳು ಸಕ್ರಿಯ: ವಾಯುದಾಳಿಗಳು ಮತ್ತು ಲಕ್ಷಾಂತರ ಗುಪ್ತಚರ ಕಾರ್ಯಾಚರಣೆಗಳು ಸೇರಿದಂತೆ ಹಲವಾರು ಪ್ರಮುಖ ಮಿಲಿಟರಿ ಕಾರ್ಯಾಚರಣೆಗಳ ಹೊರತಾಗಿಯೂ, ಯುನೈಟೆಡ್ ಸ್ಟೇಟ್ಸ್ ಮತ್ತು ವಿಶ್ವಸಂಸ್ಥೆಯು ಪಾಕಿಸ್ತಾನಿ ನೆಲದಿಂದ

ಇನ್ನೂ ಕಾರ್ಯನಿರ್ವಹಿಸುತ್ತಿರುವ ಅನೇಕ ಭಯೋತ್ಪಾದಕ ಸಂಘಟನೆಗಳನ್ನು ನಿರ್ಮೂಲನೆ ಮಾಡುವಲ್ಲಿ ವಿಫಲವಾಗಿವೆ ಎಂದು ಸಿಆರ್‌ಎಸ್ ಹೇಳುತ್ತದೆ. ಸಶಸ್ತ್ರ ಭಯೋತ್ಪಾದಕ ಸಂಘಟನೆಗಳು ಮತ್ತು ಮಿಲಿಟಿಯಾಗಳನ್ನು ನಿರ್ಮೂಲನೆ ಮಾಡಲು 2014ರಲ್ಲಿ ರಾಷ್ಟ್ರೀಯ ಕ್ರಿಯಾ ಯೋಜನೆಯನ್ನು ರಚಿಸಲಾಯಿತು. ಇದರ ಹೊರತಾಗಿಯೂ, ಈ ಭಯೋತ್ಪಾದಕ ಸಂಘಟನೆಗಳು ಸಕ್ರಿಯವಾಗಿವೆ.

ಮದರಸಾಗಳು ಹಿಂಸಾತ್ಮಕ ಸಿದ್ಧಾಂತವನ್ನು ಕಲಿಸುತ್ತವೆ : ಯುಎಸ್ ಸ್ಟೇಟ್ ಡಿಪಾರ್ಟ್ಮೆಂಟ್ ಪ್ರಕಾರ, ಪಾಕಿಸ್ತಾನವು 2023ರ ವೇಳೆಗೆ ಭಯೋತ್ಪಾದಕ ಚಟುವಟಿಕೆಗಳನ್ನು ಕಡಿಮೆ ಮಾಡಲು ಕೆಲವು ಕ್ರಮಗಳನ್ನು ತೆಗೆದುಕೊಂಡಿತು. ಆದರೆ ಮದರಸಾಗಳು ಹಿಂಸಾತ್ಮಕ ಉಗ್ರಗಾಮಿ ಸಿದ್ಧಾಂತದ ಸ್ವೀಕಾರಕ್ಕೆ ಕೊಡುಗೆ ನೀಡುವ ಸಿದ್ಧಾಂತಗಳನ್ನು ಕಲಿಸುತ್ತಲೇ ಇವೆ.



ಇದು ಭಾರತಕ್ಕೆ ಗಂಭೀರ ಪರಿಣಾಮಗಳನ್ನು ಬೀರುತ್ತದೆ. 1989ರಲ್ಲಿ ರೂಪುಗೊಂಡ ಮತ್ತು 2017ರಲ್ಲಿ ಅಮೆರಿಕದಿಂದ ಭಯೋತ್ಪಾದಕ ಗುಂಪು ಎಂದು ಗುರುತಿಸಿದ ಹಿಜ್ಬುಲ್ ಮುಜಾಹಿದ್ದೀನ್ ನಂತಹ ಕಾಶ್ಮೀರ ಕೇಂದ್ರಿತ ಗುಂಪುಗಳು ಇನ್ನೂ ಸಕ್ರಿಯವಾಗಿವೆ. ಈ ಭಯೋತ್ಪಾದಕ ಸಂಘಟನೆಯು ಕಾಶ್ಮೀರಕ್ಕೆ ಸ್ವಾತಂತ್ರ್ಯ ಅಥವಾ ಜಮ್ಮು ಮತ್ತು ಕಾಶ್ಮೀರದ ಕೇಂದ್ರಾಡಳಿತ ಪ್ರದೇಶವನ್ನು ಪಾಕಿಸ್ತಾನದೊಂದಿಗೆ ವಿಲೀನಗೊಳಿಸಬೇಕೆಂದು ಒತ್ತಾಯಿಸುವ 1,500 ಸದಸ್ಯರ ತಂಡವನ್ನು ಹೊಂದಿದೆ.

ಪಾಕಿಸ್ತಾನ ಭಯೋತ್ಪಾದಕರಿಗೆ ಸುರಕ್ಷಿತ ಬಂದರು : ದಕ್ಷಿಣ ಏಷ್ಯಾ ತಜ್ಞ ಕೆ. ಅಲನ್ ಕ್ರೋನ್‌ಸ್ಟಾಡ್ಟ್ ಸಿದ್ಧಪಡಿಸಿದ ಸಿಆರ್‌ಎಸ್ ವರದಿಯು, ಪಾಕಿಸ್ತಾನವನ್ನು ಬಲಿಪಶು ಮತ್ತು ಪೋಷಕ ದೇಶ ಎಂದು ಚಿತ್ರಿಸುತ್ತದೆ. ಇಸ್ಲಾಮಾಬಾದ್ ಬಲೂಚಿಸ್ತಾನ್ ಪ್ರಾಂತ್ಯ ದಲ್ಲಿ ಪ್ರತ್ಯೇಕತಾವಾದ ಮತ್ತು ಖೈಬರ್ ಪಖ್ತುನ್ಖ್ವಾದಲ್ಲಿ ಹದಗೆಡುತ್ತಿರುವ ಪರಿಸ್ಥಿತಿ ಸೇರಿದಂತೆ ದೇಶೀಯ ಹಿಂಸಾಚಾರದಲ್ಲಿ ಹಠಾತ್ ಏರಿಕೆಯೊಂದಿಗೆ ಹೋರಾಡುತ್ತಿದ್ದರೂ, ಅದು ಭಾರತವನ್ನು ದೀರ್ಘಕಾಲದಿಂದ ಗುರಿಯಾಗಿಸಿಕೊಂಡಿರುವ ಭಯೋತ್ಪಾದಕ ಜಾಲಗಳನ್ನು ಆಶ್ರಯಿಸುವುದನ್ನು ಮುಂದುವರೆಸಿದೆ.

ಪಾಕಿಸ್ತಾನ ಈ ಸಂಘಟನೆಗಳನ್ನು ನಿರ್ಮೂಲನೆ ಮಾಡಲು ಬಯಸುವುದಿಲ್ಲ. ವರದಿಯು ಪಾಕಿಸ್ತಾನದಲ್ಲಿ ಕಾರ್ಯನಿರ್ವಹಿಸುತ್ತಿರುವ ಭಯೋತ್ಪಾದಕ ಮತ್ತು ಇತರ ಗುಂಪುಗಳನ್ನು ಐದು ವಿಶಾಲ ಮತ್ತು ಹೆಚ್ಚಾಗಿ ಪರಸ್ಪರ ಸಂಬಂಧ ಹೊಂದಿರುವ ವರ್ಗಗಳಾಗಿ ವರ್ಗೀಕರಿಸುತ್ತದೆ. ಜಾಗತಿಕವಾಗಿ ಸಕ್ರಿಯ, ಅಫ್ಘಾನಿಸ್ತಾನ–ಕೇಂದ್ರಿತ, ಭಾರತ ಮತ್ತು ಕಾಶ್ಮೀರ–ಕೇಂದ್ರಿತ, ದೇಶೀಯವಾಗಿ ಸಕ್ರಿಯ ಮತ್ತು ಪಂಥೀಯ (ಶಿಯಾ ವಿರೋಧಿ). ಈ ಸಂಘಟನೆಗಳನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲು ಪಾಕಿಸ್ತಾನದ ಇಚ್ಛಾಶಕ್ತಿ ಇಲ್ಲದಿರುವುದು ತನ್ನ ನೆರೆಹೊರೆಯವರೊಂದಿಗೆ ಉದ್ವಿಗ್ನತೆಯನ್ನು ಹೆಚ್ಚಿಸುತ್ತಿದೆ. ಶಾಶ್ವತ ಶಾಂತಿಗಾಗಿ ಗಡಿಯಾಚೆಗಿನ ಭಯೋತ್ಪಾದನೆಯನ್ನು ತಡೆಗಟ್ಟುವುದು ಅತ್ಯಗತ್ಯ ಎಂದು ಭಾರತ ನಂಬುತ್ತದೆ. ಪಾಕಿಸ್ತಾನದ ನೆಲದಲ್ಲಿ ನಿರಂತರ ಭಯೋತ್ಪಾದಕ ಮೂಲಸೌಕರ್ಯದ ಇತ್ತೀಚಿನ ಯುಎಸ್ ಮೌಲ್ಯಮಾಪನವು ಈ ನಿಲುವನ್ನು ಮತ್ತಷ್ಟು ಬಲಪಡಿಸಿದೆ.

ಧರೆಗುರುಳಿದ ಬೃಹತ್ ಮರ ; ಅದೃಷ್ಟವಶಾತ್ ಯಾವುದೇ ಅಪಾಯವಿಲ್ಲ

ಮೈಸೂರು,ಮಾ.28(ವಿವಿಹೆಚ್)– ಬೇರು ದುರ್ಬಲಗೊಂಡು ಬೃಹತ್ ಮರವೊಂದು ನಗರದ ಚಾಮರಾಜ ಜೋಡಿ ರಸ್ತೆಗೆ ಬುಡಸಮೇತ ಉರುಳಿ ಬಿದ್ದ ಘಟನೆ ಶನಿವಾರ ಮಧ್ಯಾಹ್ನ ಸಂಭವಿಸಿದ್ದು, ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ. ಮರ ಬಿದ್ದ ಪರಿಣಾಮ ಚಲಿಸುತ್ತಿದ್ದ ಬೈಕ್ ಮತ್ತು ಆಟೋ ಜಖಂಗೊಂಡಿದ್ದವು. ಸದ್ಯ ಸವಾರರು ಕೂದಲೆಳೆ ಅಂತರದಲ್ಲಿ ಅಪಾಯದಿಂದ ಪಾರಾಗಿದ್ದಾರೆ.

ಮಳೆ–ಗಾಳಿ ಏನೂ ಇಲ್ಲದ ಸಂದರ್ಭದಲ್ಲಿ ಇದ್ದಕ್ಕಿದ್ದಂತೆ ಈ ಬೃಹತ್ ಮರ ಉರುಳಿ ಬಿದ್ದಿದ್ದು, ಅದರ ಬುಡ ದುರ್ಬಲಗೊಂಡಿರುವುದು ಕಂಡುಬಂದಿದೆ. ಈ ರಸ್ತೆಯ ಪಾಠಶಾಲೆ ಕಾಂಪೌಂಡ್‌ಗೆ ಹೊಂದಿಕೊಂಡಂತೆ ರಸ್ತೆ ಬದಿಯಲ್ಲಿದ್ದ ಈ ಮರ ಸುಮಾರು ದಿನಗಳಿಂದಲೇ ರಸ್ತೆ ಕಡೆಗೆ ವಾಲಿತ್ತು. ಪೊಲೀಸ್ ಸಿಬ್ಬಂದಿ ಮತ್ತು ನಗರ ಪಾಲಿಕೆ ಅಧಿಕಾರಿಗಳು ಕೂಡಲೇ ಸ್ಥಳಕ್ಕಾಗಮಿಸಿ ಮರ ತೆರವಿಗೆ ಕ್ರಮ ವಹಿಸಿದರು. ಪಾಲಿಕೆಯ ಅಭಯ ತಂಡದ ಸಿಬ್ಬಂದಿ ಮರವನ್ನು ತುಂಡರಿಸಿ ತೆರವುಗೊಳಿಸಿದರು. ಹಾಗಾಗಿ ಕೆಲಕಾಲ ಸಂಚಾರಕ್ಕೆ ಅಡಚಣೆ ಉಂಟಾಗಿತ್ತು.

ಜನನಿಬಿಡ ರಸ್ತೆ: ಚಾಮರಾಜ ಜೋಡಿ ರಸ್ತೆ ಬೆಳಗ್ಗೆಯಿಂದ ತಡ ರಾತ್ರಿಯವರೆಗೆ ವಾಹನ ಸಂಚಾರ, ಜನದಟ್ಟಣೆ ಇರುವುದು ಸಹಜ. ಅಲ್ಲದೆ, ಮರ ಉರುಳಿ ಬಿದ್ದ ಜಾಗದ ಸಮೀಪದಲ್ಲೇ ಸಿಗ್ನಲ್ ಲೈಟ್ ಇದ್ದು, ನಿಲುಗಡೆ ಸಿಗ್ನಲ್ ಬಂದಾಗ, ಇಲ್ಲಿ ಸಾಲುಗಟ್ಟಿ ವಾಹನಗಳು ನಿಲ್ಲುತ್ತವೆ. ಅದಾಗ್ಯೂ ಅಪಾಯ ಆಗದಿರುವುದು ನಿರಾಳ ತಂದಿದೆ.

ಫುಟ್‌ಪಾತ್‌ಗಳನ್ನು ನಿರ್ಮಿಸುವ ವೇಳೆ ಮರದ ಬೇರಿಗೆ ನೀರು ಇಂಗಲು ಸ್ಥಳವಿಲ್ಲದಂತೆ ಕಾಂಕ್ರೀಟ್ ಹಾಕುವ ಪರಿಪಾಠದಿಂದ ಈ ಮರದ ಬೇರು ದುರ್ಬಲಗೊಂಡಿದೆ. ಇದೇ ರೀತಿ ನಗರದ ಎಷ್ಟೋ ಮರಗಳಿಗೆ ತೊಂದರೆಯಾಗುತ್ತಿದೆ ಎಂದು ನಾಗರಿಕರು ಬೇಸರ ವ್ಯಕ್ತಪಡಿಸಿ, ಕಾಂಕ್ರೀಟ್ ತೆರವುಗೊಳಿಸಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.



ಚಾಮರಾಜ ಜೋಡಿ ರಸ್ತೆಯಲ್ಲಿ ಮರ ಉರುಳಿ ಬಿದ್ದಿರುವುದು.

ಮೈಸೂರು ಮಿತ್ರ

ಭಾನುವಾರ 29 ಮಾರ್ಚ್ 2026

ಪಾಲಿಕೆ ಅಧಿಕಾರಿಗಳ ಪ್ರಮಾದ, ನಿರ್ಲಕ್ಷ್ಯ; ನಿವಾಸಿಗಳಿಗೆ ದುರ್ವಾಸನೆಯಲ್ಲಿ ದಿನ ದೂಡುವ ದುಸ್ಥಿತಿ

6 ತಿಂಗಳಿಂದ ಮಳೆ ನೀರು ಚರಂಡಿಯಲ್ಲಿ ಹರಿಯುತ್ತಿದೆ ಮಲ ಮಿಶ್ರಿತ ನೀರು!!!

●ಕೋಟ್ಯಾಂತರ ರೂ. ವೆಚ್ಚದಲ್ಲಿ ಮರುಜೀವ ಪಡೆದಿದ್ದ ಹೆಬ್ಬಾಳು ಕೆರೆ ಒಡಲು ಸೇರುತ್ತಿದೆ ಈ ಮಲೀನ ಜಲಧಾರೆ ●ಹೆಬ್ಬಾಳು, ಮಂಜೇಗೌಡನಕೊಪ್ಪಲು ನಿವಾಸಿಗಳ ನರಕಯಾತನೆ



ಹೆಬ್ಬಾಳ್ ಕೆರೆ ಸೇರುತ್ತಿರುವ ಯುಜಿಡಿ ನೀರು



ಯುಜಿಡಿ ನೀರು ನೇರವಾಗಿ ಮಳೆ ನೀರು ಚರಂಡಿಗೆ ಸೇರ್ಪಡೆಗೊಳ್ಳುತ್ತಿರುವುದು.

ಮೈಸೂರು, ಮಾ.28(ಜಿಎ)– ಮೈಸೂರು ಮಹಾನಗರ ಪಾಲಿಕೆ ಅಧಿಕಾರಿಗಳ ಪ್ರಮಾದ ಹಾಗೂ ನಿರ್ಲಕ್ಷ್ಯಕ್ಕೆ ಮಂಚೇಗೌಡನಕೊಪ್ಪಲು, ಹೆಬ್ಬಾಳು ಜನತೆ 6 ತಿಂಗಳಿಂದ ದುರ್ವಾಸನೆ ಜೊತೆಗೆ ರೋಗ ಭೀತಿಯಿಂದ ತತ್ತರಿಸಿದ್ದಾರೆ. ಮಳೆ ನೀರಿನ ಚರಂಡಿಯಲ್ಲಿ ಮಲ ಮಿಶ್ರಿತ ನೀರು ಹರಿಯುತ್ತಿದ್ದು, ಇದೇ ನೀರು ಕೋಟ್ಯಾಂತರ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗಿದ್ದ ಮೈಸೂರಿನ ಹೆಬ್ಬಾಳು ಕೆರೆ ಸೇರಿ, ಅದೂ ತೀವ್ರವಾಗಿ ಮಲೀನಗೊಂಡಿದೆ.

ಮೈಸೂರಿನ ವಿಜಯನಗರ ಎರಡನೇ ಹಂತದ ಸಂಗಮ್ ವೃತ್ತದಿಂದ ಆರಂಭವಾಗುವ ಈ ಮಳೆ ನೀರಿನ ಚರಂಡಿಗೆ ಉಕ್ಕಿ ಹರಿಯುವ ಯುಜಿಡಿ ಪೈಪ್‌ಲೈನ್‌ನ ಮಲ ಮಿಶ್ರಿತ ನೀರಿನ ಸಂಪರ್ಕ ಕಲ್ಪಿಸಿರುವುದರಿಂದ ಮಂಚೇಗೌಡನಕೊಪ್ಪಲಿನ ನಿವಾಸಿಗಳು ನರಕಯಾತನೆ ಅನುಭವಿಸುತ್ತಿದ್ದು, ನಗರ ಪಾಲಿಕೆ ಒಳಚರಂಡಿ ವಿಭಾಗದ ಅಧಿಕಾರಿಗಳಿಗೆ ಹಿಡಿಶಾಪ ಹಾಕುತ್ತಿದ್ದಾರೆ.

ವರ್ಷದ ಹಿಂದೆ 50 ಲಕ್ಷ ವೆಚ್ಚದಲ್ಲಿ ಮಾಡಿದ್ದ ಯುಜಿಡಿ ಕಾಮಗಾರಿ ಅಧಿಕಾರಿಗಳ ಬೇಜವಾಬ್ದಾರಿಯಿಂದ ವಿಫಲವಾಗಿದ್ದು, ಈಗ ಮ್ಯಾನ್‌ಹೋಲ್‌ಗಳು ಉಕ್ಕಿ ಹರಿಯಲಾರಂಭಿಸಿವೆ. ಇದನ್ನು ಗಮನಿಸಿದ ಪಾಲಿಕೆ ಒಳಚರಂಡಿ ಮಂಡಳಿ ಅಧಿಕಾರಿಗಳು ಸೂಕ್ತ ನಿರ್ವಹಣೆ ಮಾಡದೆ, ಮಲ ಮಿಶ್ರಿತ ಯುಜಿಡಿ ನೀರನ್ನು ನೇರವಾಗಿ ಮಳೆ ನೀರಿನ ಚರಂಡಿಗೆ ಹರಿಯಬಿಟ್ಟಿದ್ದಾರೆ.

ಹಾಗಾಗಿ ಈ ಚರಂಡಿ ಹಾದು ಹೋಗಿರುವಲ್ಲಿ, ಮಂಜೇಗೌಡನಕೊಪ್ಪಲು ಸೇರಿದಂತೆ ಹೆಬ್ಬಾಳು ಮೊದಲ ಹಂತದ ನಿವಾಸಿಗಳು ವರ್ಷದಿಂದ ದುರ್ವಾಸನೆ ಹಾಗೂ ಸೊಳ್ಳೆ ಹಾವಳಿಯಿಂದ ತತ್ತರಿಸಿದ್ದಾರೆ. ಇದರಿಂದ ನಾನಾ ಸಾಂಕ್ರಾಮಿಕ ರೋಗದಿಂದಲೂ ಬಳಲುತ್ತಿದ್ದಾರೆ. ಆದರೆ ಇದಾವುದರ ಪರಿವೆ ಅಧಿಕಾರಿಗಳಿಗಿಲ್ಲ. 6 ತಿಂಗಳಿಂದ ಈ ಮಳೆ ನೀರು, ಒಳ ಚರಂಡಿ ಮೂಲಕ ಯುಜಿಡಿ ನೀರು ಹೆಬ್ಬಾಳು ಕೆರೆ ಸೇರುತ್ತಿದೆ.

> “ಗುಂಡಿ ಕುಸಿದ ತಕ್ಷಣ ನಮ್ಮ ಸಿಬ್ಬಂದಿ ಬಳಿ ಮಾಹಿತಿ ಪಡೆದುಕೊಳ್ಳಲಾಯಿತು. ಅವರು ಹೇಳುವ ಪ್ರಕಾರ ಕೇಬಲ್ ಅಳವಡಿಸಲು ಕೇವಲ 4 ಅಡಿ ಗುಂಡಿ ತೆಗೆಯಲಾಯಿತು. ಆದರೆ, ಅಲ್ಲಿ ಮಣ್ಣು ಸಡಿಲವಾಗಿದ್ದರಿಂದ 10 ಅಡಿಗೆ ಕುಸಿದಿದ್ದು, ಈ ವೇಳೆ ಕಲ್ಲುಗಳು ಯುಜಿಡಿ ಪೈಪ್‌ಲೈನ್ ಮೇಲೆ ಬಿದ್ದಾಗ ಒಡೆದಿದೆ. ಈ ನಡುವೆ ಎಲ್ಲವನ್ನು ಸರಿಪಡಿಸಿ ಎಂದು ಸೂಚನೆ ನೀಡಲಾಗಿದೆ. ಪಾಲಿಕೆ ಅಧಿಕಾರಿಗಳೊಂದಿಗೆ ಚರ್ಚಿಸಿ ಕೂಡಲೇ ಸಮಸ್ಯೆ ಬಗೆಹರಿಸುತ್ತೇವೆ.
> -ದೊಡ್ಡಮನಿ, ಎಇಇ ಭೂಗತ ಕೇಬಲ್

ಈಗ ಮತ್ತೆ ಹೊಸದಾಗಿ ಯುಜಿಡಿ ಕಾಮಗಾರಿ ಆರಂಭಿಸಲು ಸಿದ್ಧತೆ ಮಾಡಿಕೊಳ್ಳುತ್ತಿರುವುದಾಗಿ ಅಧಿಕಾರಿಗಳು ಹೇಳುತ್ತಲೇ ಬಂದಿದ್ದಾರೆ.

ಎರಡು ಇಲಾಖೆಗಳ ನಿರ್ಲಕ್ಷ್ಯ: ವಾಣಿವಿಲಾಸ ನೀರು ಸರಬರಾಜು ಕಾರ್ಯಾಗಾರ ಹಾಗೂ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ(ಸೆಸ್ಕ್)ದ ಅಧಿಕಾರಿಗಳ ಪ್ರಮಾದದಿಂದ ಈ ಚರಂಡಿಗೆ ಮತ್ತಷ್ಟು ಯುಜಿಡಿ ನೀರು ಸೇರುತ್ತಿದೆ.

ಮೈಸೂರು ನಗರದಾದ್ಯಂತ ಭೂಗತ ಕೇಬಲ್ ಅಳವಡಿಕೆ ಕಾರ್ಯವನ್ನು ಸೆಸ್ಕ್ ಮಾಡುತ್ತಿದೆ. ಅದಕ್ಕೆ ನಗರದಲ್ಲಿರುವ ಅನೇಕ ಗುಂಡಿಗಳೇ ಸಾಕ್ಷಿ. ಅಂತೆಯೇ ಹೆಬ್ಬಾಳ್ ಮುಖ್ಯ ರಸ್ತೆ(ಅಂಬರೀಶ್ ರಸ್ತೆ)ಗೆ ಹೊಂದಿಕೊಂಡಂತೆ ಇರುವ ದೊಡ್ಡ ಮಳೆ ನೀರಿನ ಚರಂಡಿ ಮೇಲ್ಭಾಗದಲ್ಲಿ ಸೆಸ್ಕ್ ಭೂಗತ ಕೇಬಲ್ ಅಳವಡಿಕೆ ಕಾಮಗಾರಿ ಮಾಡಲು 4 ಅಡಿಗಳಷ್ಟು ಆಳದ ಗುಂಡಿ ತೆಗೆದು, ತಮ್ಮ ಕಾರ್ಯವನ್ನು ಪೂರ್ಣಗೊಳಿಸಿದ್ದಾರೆ.

ಆದರೆ, ಭೂಗತ ಕೇಬಲ್ ಕೆಲಸ ಮುಕ್ತಾಯಗೊಂಡ ನಂತರ ಮಳೆ ಸುರಿದ ಪರಿಣಾಮ ಗುಂಡಿ ತೆಗೆದ ಪಕ್ಕದಲ್ಲಿಯೇ 10 ಅಡಿಗಳಷ್ಟು ಹಳ್ಳ ಬಿದ್ದ ಹಿನ್ನೆಲೆಯಲ್ಲಿ ಯುಜಿಡಿಯ ಪೈಪ್‌ಲೈನ್ ಒಡೆದು ಹೋಗಿದೆ. ಇದರಿಂದ ಮಲಿನ ನೀರು ಉಕ್ಕಿ ಹರಿಯಲು ಆರಂಭಿಸಿದೆ. ಇದನ್ನು ತಡೆಯಲು ಪಾಲಿಕೆ ಸಿಬ್ಬಂದಿ ಕಂಡುಕೊಂಡ ಉಪಾಯ; ಮ್ಯಾನ್‌ಹೋಲ್ ಮೇಲ್ಭಾಗದ ಪಕ್ಕದಲ್ಲಿ ಸಣ್ಣದೊಂದು ಕಾಲುವೆ ಮಾಡಿ ಮಳೆ ನೀರಿನ ಚರಂಡಿಗೆ ಸಂಪರ್ಕ ಕಲ್ಪಿಸಿದ್ದಾರೆ.

ನಮಗೂ ಇದಕ್ಕೂ ಸಂಬಂಧವಿಲ್ಲ: ಮಳೆನೀರು ಚರಂಡಿಯಲ್ಲಿ ಹರಿದು ಯುಜಿಡಿ ನೀರು ನೇರವಾಗಿ ಹೆಬ್ಬಾಳ್ ಕೆರೆ ಸೇರುತ್ತಿರುವುದಕ್ಕೂ ಮೈಸೂರು ನಗರ ಪಾಲಿಕೆಯ ವಾಣಿವಿಲಾಸ ನೀರು ಸರಬರಾಜು ಕೇಂದ್ರ ಹಾಗೂ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ(ಸೆಸ್ಕ್)ಗೂ ಸಂಬಂಧವಿಲ್ಲ ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ.

ಸೆಸ್ಕ್‌ನವರು ಮಾಡುತ್ತಿರುವ ಭೂಗತ ಕೇಬಲ್ ಕಾಮಗಾರಿಯಿಂದ ಈ ಸಮಸ್ಯೆ ಉದ್ಭವವಾಗಿದೆ. ಯುಜಿಡಿ ಪೈಪ್‌ಲೈನ್ ಒಡೆದ ಪರಿಣಾಮ ಐದಾರು ರಸ್ತೆಯಲ್ಲಿರುವ ಮನೆಗಳಿಗೆ ಯುಜಿಡಿ ನೀರು ರಿವರ್ಸ್ ಆದ ಹಿನ್ನೆಲೆಯಲ್ಲಿ ನಿವಾಸಿಗಳೇ ಚರಂಡಿಯ ತಡೆಗೋಡೆ ಒಡೆದು ಹಾಕಿ ಯುಜಿಡಿ ನೀರು ಮಳೆ ನೀರು ಚರಂಡಿ ಸೇರುವಂತೆ ಮಾಡಿದ್ದಾರೆ ಎಂದು ವಾಣಿವಿಲಾಸ ನೀರು ಸರಬರಾಜು ಕೇಂದ್ರದ ಅಧಿಕಾರಿಯೊಬ್ಬರು ದೂರಿದ್ದಾರೆ.

ಮತ್ತೊಂದೆಡೆ ನಮ್ಮಿಂದ ಸಮಸ್ಯೆ ಆಗಿದೆ ಎಂದು ಪಾಲಿಕೆ ಅಧಿಕಾರಿಗಳು ಸೂಕ್ತ ಮಾಹಿತಿ ನೀಡಿದರೆ, ನಾವೇ ಮುಂದೆ ನಿಂತು ಸಮಸ್ಯೆ ಬಗೆಹರಿಸುತ್ತೇವೆ. ಈಗಾಗಲೇ ಅವರು ತಿಳಿಸಿದಂತೆ ಜೆಸಿಬಿ ಕರೆಸಿ ಸಹಾಯ ಮಾಡಿದ್ದೇವೆ ಎಂದು ಭೂಗತ ಕೇಬಲ್ ಗುತಿಗೆದಾರ ಕೆ.ಸಿ. ಅಶ್ವಿನ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಅಧಿಕಾರಿಗಳಿಗೆ ಹಿಡಿಶಾಪ: ಇಷ್ಟು ದಿನ ಹೆಬ್ಬಾಳ್ ಕೆರೆಗೆ ಕೈಗಾರಿಕೆಗಳ ಕಲುಷಿತ ನೀರು, ಪ್ಲಾಸ್ಟಿಕ್ ತ್ಯಾಜ್ಯ ಸೇರ್ಪಡೆಯಾಗುತ್ತಿತ್ತು. ಇದನ್ನು ತಡೆಗಟ್ಟಲು ಸಾಧ್ಯವಾಗದೇ ಕೆರೆ ವಿಷಕಾರಿ ಕೆರೆಯಾಗಿ ಮಾರ್ಪಟ್ಟಿದೆ. ಈಗ ಯುಜಿಡಿ ನೀರು ಸೇರಿ ಇಡೀ ಕೆರೆಯೇ ದುರ್ವಾಸನೆ ಬೀರುತ್ತಿದೆ. ಹಾಗಾಗಿ ವಾಯುವಿಹಾರಿಗಳು ಮೂಗು ಮುಚ್ಚಿಕೊಂಡು ವಾಕಿಂಗ್ ಮಾಡುವ ಪರಿಸ್ಥಿತಿ ನಿರ್ಮಾಣಗೊಂಡಿದೆ.

ಅದರಲ್ಲಿಯೂ ಮಳೆ ನೀರು ಹಾದು ಹೋಗುವ ಚರಂಡಿ ಮೇಲ್ಭಾಗದಲ್ಲಿ ವಾಕ್ ಮಾಡುವಾಗ ಪ್ಲಾಸಿಕ್ ರಾಶಿ, ಗಬ್ಬು ವಾಸನೆಗೆ ನಿತ್ಯವೂ ಅಧಿಕಾರಿಗಳ ವಿರುದ್ಧ ಹಿಡಿಶಾಪ ಹಾಕುತ್ತಿದ್ದಾರೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಉಸ್ತಾದ್ ಭಗತ್ ಸಿಂಗ್(ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಲವ್ ಮಾಕ್ಟೇಲ್–3 (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಓ ರೋಮಿಯೋ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಧುರಂದರ್–2 (ಕ)	3 ಪ್ರದರ್ಶನಗಳು
ಗಾಯಿತ್ರಿ	
ಧುರಂದರ್–2 (ಕ)	3 ಪ್ರದರ್ಶನಗಳು
ರಾಜಕಮಲ್	
ಯೂತ್ (ತ) + ಉಸ್ತಾದ್ ಭಗತ್ ಸಿಂಗ್ (ತೆ)	2+2 ಪ್ರದರ್ಶನಗಳು
ಸಂಗಂ	
ಧುರಂದರ್–2 (ಕ)	3 ಪ್ರದರ್ಶನಗಳು
ಲಿಡೋ	
ಧುರಂದರ್–2 (ಕ)	3 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಆಯುಧ (ಕ)	4 ಪ್ರದರ್ಶನಗಳು

ಗ್ಯಾಸ್ ಸಿಲಿಂಡರ್ ಅಭಾವದ ನೆಪದಲ್ಲಿ

ಕುಡಿಯಲು ಬಿಸಿ ನೀರು ಕೊಡದ ಹೋಟೆಲ್‌ಗಳ ಮೇಲೆ ಕ್ರಮಕ್ಕೆ ಸಾ.ರಾ.ನಂದೀಶ್ ಆಗ್ರಹ



ಭೇರ್ಯ: ಮೈಸೂರು ನಗರ ಮತ್ತು ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಲ್ಲಿರುವ ಹೋಟೇಲ್‌ಗಳಲ್ಲಿ ಗ್ಯಾಸ್ ಕೊರತೆ ಎಂಬ ನೆಪವೊಡ್ಡಿ ಗ್ರಾಹಕರಿಗೆ ಬಿಸಿ ನೀರು ಕೊಡುವುದನ್ನ ನಿಲ್ಲಿಸಿದ್ದಾರೆ. ಅಂತಹ ಹೊಟೇಲ್ ಗಳ ವಿರುದ್ದ ನಿರ್ದಾಕ್ಷಿಣ್ಯವಾಗಿ ಕ್ರಮ ಜರುಗಿಸಬೇಕು ಎಂದು ಜಿ.ಪಂ. ಮಾಜಿ ಸದಸ್ಯ ಹಾಗೂ ಉದ್ಯಮಿ ಸಾ.ರಾ. ನಂದೀಶ್ ಅಧಿಕಾರಿಗಳನ್ನು ಒತ್ತಾಯಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು ಮೈಸೂರು ನಗರ ಸೇರಿದಂತೆ ಜಿಲ್ಲೆಯಲ್ಲಿ ಈ ಬಾರಿ ಬಿಸಿಲು ತಾಪಕ್ಕೆ ಕಾದ ಕಬ್ಬಿಣದಂತಾಗಿದ್ದು ಈ ಹಿನ್ನೆಲೆಯಲ್ಲಿ ಗ್ರಾಹಕರಿಗೆ ಹೊಟೇಲ್‌ಗಳಲ್ಲಿ ಬೆಳಗಿನ ಉಪಹಾರ, ಮಧ್ಯಾಹ್ನ ಊಟ ಹಾಗೂ ಸಂಜೆ ವೇಳೆಯಲ್ಲಿ ಬಿಸಿ ನೀರು ಕೊಟ್ಟರೆ ಯಾವುದೇ ಸಾಂಕ್ರಾಮಿಕ ರೋಗ ಹರಡುವುದನ್ನು ತಡೆಗಟ್ಟಬಹುದು, ಹಾಗಾಗಿ ಈಗಲಾದರೂ ನಗರದ ಪಾಲಿಕೆ ಅಧಿಕಾರಿಗಳು ಹಾಗೂ ಜಿಲ್ಲೆಯ ಗ್ರಾಮಗಳಲ್ಲಿರುವ ಸ್ಥಳೀಯ ಗ್ರಾಮ ಪಂಚಾಯತಿ ಅಧಿಕಾರಿಗಳು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವಂತೆ ಮನವಿ ಮಾಡಿದ್ದಾರೆ.

> “ಪಕ್ಷಿಗಳು ಕುಡಿಯುವ ನೀರಿಗೆ ಹಾಹಾಕಾರ ಪಡುತ್ತಿರುತ್ತವೆ. ಹಾಗಾಗಿ ಸಾರ್ವಜನಿಕರು ಮನೆ ಅಂಗಳ ಅಥವಾ ಮನೆಯ ಮುಂದೆ ಇರುವ ಗಿಡಗಳಲ್ಲಿ ಚಿಕ್ಕಮಡಿಕೆ ಕಟ್ಟಿ ನೀರು ತುಂಬಿಸಿ ಪಕ್ಷಿಗಳಿಗೆ ಈ ಬೇಸಿಗೆಯಲ್ಲಿ ನೀರು ಒದಗಿಸಿ ಪಕ್ಷಿಗಳ ಸಂಕುಲ ಉಳಿಸದಂತಾಗುತ್ತದೆ.
> ಸಾ.ರಾ.ನಂದೀಶ್, ಜಿ.ಪಂ. ಮಾಜಿ ಸದಸ್ಯರು.

ಬೇಸಿಗೆ ಆರಂಭಗೊಂಡಿದ್ದು ನಗರ ಪಾಲಿಕೆ, ಪಟ್ಟಣ ಪಂಚಾಯತಿ ಹಾಗೂ ಗ್ರಾಮ ಪಂಚಾಯತಿ ಅಧಿಕಾರಿಗಳು ವಾಟರ್ ಟ್ಯಾಂಕ್‌ಗಳನ್ನು ಸ್ವಚ್ಛಗೊಳಿಸುವ ಮೂಲಕ ಶುದ್ದ ಕುಡಿಯುವ ನೀರು ಒದಗಿಸಿ ಎಂದರಲ್ಲದೆ ಕುಡಿಯುವ ನೀರು ಕಲುಷಿತಗೊಳ್ಳದಂತೆ ನೀರು ಸರಬರಾಜು ಮಾಡುವ ಪೈಪ್‌ಗಳು, ವಾಲ್ ಗಳ ಸುತ್ತ ಸ್ವಚ್ಚತೆ ಕಾಪಾಡಿ ಎಂದು ತಿಳಿಸಿದ್ದಾರೆ.

ಮೈಸೂರು ಜಿಲ್ಲೆಯಲ್ಲಿರುವ ಅರಣ್ಯಗಳ ಬಗ್ಗೆ ಅರಣ್ಯ ಇಲಾಖೆಯ ಅಧಿಕಾರಿಗಳು ತೀವ್ರ ನಿಗಾ ವಹಿಸಬೇಕಿದೆ ಹಾಗಾಗಿ ಅರಣ್ಯ ಇಲಾಖೆಯವರು ಕಾಡಂಚಿನ ಸ್ಥಳದ ರಸ್ತೆಗಳಲ್ಲಿ ಬೆಂಕಿ ರೇಖೆ ಹಾಕಿ ಕಾಡನ್ನು ಕಾಡ್ಗಿಚ್ಚಿನಿಂದ ತಪ್ಪಿಸಿ ಪ್ರಾಣಿ ಪಕ್ಷಿಗಳ ಸಂಕುಲವನ್ನು ಕಾಪಾಡಿ ಇದು ನಿಮ್ಮಗಳ ಜವಾಬ್ದಾರಿ ಆದರೆ ಅದೇ ರೀತಿ ಜನರಲ್ಲಿ ಈ ಬಗ್ಗೆ ಅರಿವು ಮತ್ತು ಜಾಗೃತಿ ಮೂಡಿಸುವ ಕಾರ್ಯವಾಗಲಿ ಎಂದಿದ್ದಾರೆ.

ಮೈಸೂರಿನ ಮೂವರು ಸೇರಿ ರಾಜ್ಯದ 153 ಪೊಲೀಸರಿಗೆ 'ಮುಖ್ಯಮಂತ್ರಿ ಪದಕ' ಘೋಷಣೆ



ಸುರೇಶ್‌ಕುಮಾರ್



ಎಸ್.ಶಿವಕುಮಾರ್



ಜಯಕುಮಾರ್

ಬೆಂಗಳೂರು, ಮಾ.28– ಮೈಸೂರಿನ ಮೂವರು ಸೇರಿದಂತೆ ರಾಜ್ಯ ಪೊಲೀಸ್ ಇಲಾಖೆಯಲ್ಲಿ ಉತ್ತಮ ಸೇವೆ ಸಲ್ಲಿಸಿದ 153 ಅಧಿಕಾರಿಗಳು ಮತ್ತು ಸಿಬ್ಬಂದಿಗೆ 2025ನೇ ಸಾಲಿನ 'ಮುಖ್ಯಮಂತ್ರಿ ಪದಕ' ಘೋಷಿಸಲಾಗಿದೆ.

ಈ ಕುರಿತು ರಾಜ್ಯ ಪೊಲೀಸ್ ಮಹಾನಿರ್ದೇಶಕರು ಮತ್ತು ಐಜಿಪಿ ಕಚೇರಿಯಿಂದ ಅಧಿಕೃತ ಆದೇಶ ಹೊರಡಿಸಲಾಗಿದ್ದು, ಈ ಗೌರವಕ್ಕೆ ಪಾತ್ರರಾದ ಅಧಿಕಾರಿ ಹಾಗೂ ಸಿಬ್ಬಂದಿಗೆ ಏಪ್ರಿಲ್ 2 ರಂದು ಬೆಂಗಳೂರಿನಲ್ಲಿ ನಡೆಯಲಿರುವ ವಿಶೇಷ ಸಮಾರಂಭದಲ್ಲಿ ಪದಕ ಪ್ರದಾನ ಮಾಡಲಾಗುವುದು.

ಮೈಸೂರಿನ ವಿಜಯನಗರ ಠಾಣೆಯ ಇನ್ಸ್‌ಪೆಕ್ಟರ್ ಸುರೇಶ್ ಕುಮಾರ್, ಪೊಲೀಸ್ ತರಬೇತಿ ಶಾಲೆಯ ಇನ್ಸ್‌ಪೆಕ್ಟರ್ ಕೆ.ಷಣ್ಮುಗ ವರ್ಮ, ಅಶೋಕಪುರಂ ಠಾಣೆ(ನಗರ ವಿಶೇಷ ವಿಭಾಗ) ಎಎಸ್‌ಐ ಎಸ್.ಶಿವಕುಮಾರ್ ಹಾಗೂ ಸಿಎಆರ್ ಹೆಡ್ ಕಾನ್ಸ್‌ಟೇಬಲ್ ಜಯಕುಮಾರ್ ಸೇರಿದಂತೆ ರಾಜ್ಯದ ವಿವಿಧೆಡೆಯ ಐಪಿಎಸ್ ಅಧಿಕಾರಿಗಳಿಂದ ಹಿಡಿದು ಕಾನ್‌ಸ್ಟೆಬಲ್‌ಗಳವರೆಗೆ ವಿವಿಧ ಶ್ರೇಣಿಯ ಒಟ್ಟು 153 ಪೊಲೀಸರು 'ಮುಖ್ಯಮಂತ್ರಿ ಪದಕ'ಕ್ಕೆ ಭಾಜನರಾಗಿದ್ದಾರೆ.

ದೇಶಕ್ಕೆ ಸೇವೆ ಮಾಡಿದವರು ಹೀಗೆ ತಲೆಬಾಗಲೇಬೇಕೆ?

ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಎಸ್‌ಸಿಎ ಅಧ್ಯಕ್ಷ ವೆಂಕಟೇಶ್ ಪ್ರಸಾದ್ ಭೇಟಿ ಚಿತ್ರ ಹಂಚಿಕೊಂಡು ಸಂಸದ ತೇಜಸ್ವಿಸೂರ್ಯ ವಾಗ್ದಾಳಿ



ಬೆಂಗಳೂರು: ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಅಧ್ಯಕ್ಷ ವೆಂಕಟೇಶ್ ಪ್ರಸಾದ್ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಫೋಟೋವನ್ನು ಸಂಸದ ತೇಜಸ್ವಿ ಸೂರ್ಯ ತಮ್ಮ ಸಾಮಾಜಿಕ ಮಾಧ್ಯಮ ಖಾತೆಯಲ್ಲಿ ಹಂಚಿಕೊಂಡು, ತೀವ್ರ ವಾಗ್ದಾಳಿ ನಡೆಸಿದ್ದಾರೆ.

ಈ ಒಂದು ಫೋಟೋ ಸಾವಿರ ಮಾತುಗಳನ್ನು ಹೇಳುತ್ತದೆ. ಇದು ನಮ್ಮ ರಾಜಕೀಯ ಸಂಸ್ಕೃತಿ ಎಷ್ಟು ಕೆಳಮಟ್ಟಕ್ಕೆ ಇಳಿದಿದೆ ಎನ್ನುವುದನ್ನು ತೋರಿಸುತ್ತದೆ. ಭಾರತಕ್ಕೆ ಹೆಮ್ಮೆ ತಂದ ಕ್ರಿಕೆಟಿಗ ವೆಂಕಟೇಶ್ ಪ್ರಸಾದ್ ಅವರು ಇಂದು ಒಬ್ಬ ಮುಖ್ಯಮಂತ್ರಿ ಮುಂದೆ ಕೈಮುಗಿದು ನಿಂತಿದ್ದಾರೆ ಏಕೆ ಎಂದು ಅವರು ಪ್ರಶ್ನೆ ಮಾಡಿದ್ದಾರೆ.

ಭಾರತಕ್ಕೆ ಹೆಮ್ಮೆ ತಂದ ರಾಷ್ಟ್ರೀಯ ನಾಯಕ ವೆಂಕಟೇಶ್ ಪ್ರಸಾದ್, ಪಾಕಿಸ್ತಾನ ವಿರುದ್ಧದ ಅವರ ಅದ್ಭುತ ಆಟ ಇಂದಿಗೂ ನಮ್ಮ ನೆನಪಿನಲ್ಲಿ ಇದೆ. ಅಂಥವರು ಇಂದು ಒಬ್ಬ ಮುಖ್ಯಮಂತ್ರಿ ಮುಂದೆ ಕೈಮುಗಿದು ನಿಂತಿದ್ದಾರೆ. ಅವರು ತಪ್ಪು ಮಾಡಿಲ್ಲ. ತಮ್ಮ ಕೆಲಸವನ್ನು ಸರಿಯಾಗಿ ಮಾಡಿದ್ದಕ್ಕೆ ಮಾತ್ರ ಈ ರೀತಿ ಆಗಿದೆ ಎಂದು ಸಂಸದ ತೇಜಸ್ವಿ ಸೂರ್ಯ ಅವರು ಹೇಳಿದ್ದಾರೆ.

ರಾಜಕಾರಣಿಗಳ ಅಹಂಕಾರಕ್ಕೆ ಧಕ್ಕೆ ಆಗಬಹುದು ಎಂದು ಊಹಿಸದೇ ಇದ್ದದ್ದಕ್ಕೆ ಉಚಿತ ಸೌಲಭ್ಯ, ವಿಶೇಷ ಸವಲತ್ತುಗಳಿಗೆ ತಲೆಬಾಗದೆ ಇದ್ದದ್ದಕ್ಕೆ ಇದು ದುಃಖಕರ ಸಂಗತಿ. ದೇಶಕ್ಕೆ ಸೇವೆ ಮಾಡಿದವರು ತಲೆಬಾಗಬೇಕಾದರೆ, ಅಧಿಕಾರದಲ್ಲಿರುವವರು ಹೊಣೆಗಾರಿಕೆಗೆ ಬದಲು ವಿಶೇಷ ಹಕ್ಕು ಕೇಳುತ್ತಿದ್ದರೆ, ವ್ಯವಸ್ಥೆಯಲ್ಲಿ ಏನೋ ತಪ್ಪಾಗಿದೆ. ಇದು ಒಂದು ಘಟನೆ ಮಾತ್ರ ಅಲ್ಲ, ಇದು ದೊಡ್ಡ ಸಮಸ್ಯೆಯ ಲಕ್ಷಣ. ಅಧಿಕಾರವನ್ನು ಜವಾಬ್ದಾರಿಯಂತೆ ನೋಡದ ರಾಜಕೀಯ ಹೋಗಬೇಕು. ಅಹಂಕಾರಕ್ಕೆ ಮಣಿಯುವ ವ್ಯವಸ್ಥೆ ಬದಲಾಗಬೇಕು. ಹೊಸ ರಾಜಕೀಯ ಪೀಳಿಗೆ ಅಗತ್ಯವಾಗಿದೆ.

ಅಲ್ಲದೆ ಈ ಪರಿಸ್ಥಿತಿಯಿಂದ ನಾವು ಕಳವಳಗೊಳ್ಳದಿದ್ದರೆ, ಇನ್ನೇನು ಕಳವಳಗೊಳಿಸಲು ಸಾಧ್ಯ. ಭಾರತ ಇನ್ನಷ್ಟು ಉತ್ತಮ ಸಮಾಜಕ್ಕೆ ಅರ್ಹವಾಗಿದೆ. ನಾನು ವೆಂಕಟೇಶ್ ಪ್ರಸಾದ್ ಅವರ ಜೊತೆ ಇದ್ದೇನೆ– ಲಕ್ಷಾಂತರ ಜನರೂ ಹಾಗೆಯೇ ಅವರ ಬೆಂಬಲಕ್ಕೆ ನಿಂತಿದ್ದಾರೆ ಎಂದು ಸಂಸದ ತೇಜಸ್ವಿ ಸೂರ್ಯ ಅಭಿಪ್ರಾಯಪಟ್ಟಿದ್ದಾರೆ.

ಆಟೋರಿಕ್ಷಾ ವ್ಹೀಲಿಂಗ್ ; ಚಾಲಕನ ವಿರುದ್ಧ ಪ್ರಕರಣ ದಾಖಲು

ವಾಟ್ಸಪ್ ಸ್ಟೇಟಸ್ ನೋಡಿ ಚಾಲಕನ ಜಾಡು ಹಿಡಿದ ದೇವರಾಜ ಸಂಚಾರ ಪೊಲೀಸರು



ಮೈಸೂರು,ಮಾ.28(ಪಿಎಂ)– ಮೈಸೂರಿನ ಹೃದಯ ಭಾಗವಾದ ಮೆಟ್ರೋಪೋಲ್ ವೃತ್ತ ಮತ್ತು ದಾಸಪ್ಪ ವೃತ್ತದ ನಡುವೆ ಜೆಎಲ್‌ಬಿ ರಸ್ತೆಯಲ್ಲಿ ಮಧ್ಯರಾತ್ರಿ ಆಟೋರಿಕ್ಷಾ ವ್ಹೀಲಿಂಗ್ ಮಾಡಿದ್ದ ಚಾಲಕನ ವಿರುದ್ಧ ದೇವರಾಜ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ಯಾಸೆಂಜರ್ ಆಟೋರಿಕ್ಷಾ (ಕೆಎ–02, ಡಿ–5313) ವ್ಹೀಲಿಂಗ್ ಮಾಡಿದ್ದ ಹರೀಶ್ ಎಂಬಾತನ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ಅತ್ಯಂತ ಅಪಾಯಕಾರಿಯಾಗಿ ಆಟೋ ವ್ಹೀಲಿಂಗ್ ಮಾಡುತ್ತಿದ್ದ ದೃಶ್ಯ ವಾಟ್ಸಪ್ ಸ್ಟೇಟಸ್‌ನಲ್ಲಿ ಕಂಡು ಬಂದ ಹಿನ್ನೆಲೆಯಲ್ಲಿ ದೇವರಾಜ ಸಂಚಾರ ಪೊಲೀಸರು, ಚಾಲಕನ ಪತ್ತೆಗೆ ಮುಂದಾಗಿದ್ದಾರೆ. ಮೈಸೂರಿನ ರಾಮಕೃಷ್ಣ ಪರಮಹಂಸ ವೃತ್ತದಲ್ಲಿ ಆಟೋ ಹಾಗೂ ಅದರ ಚಾಲಕ ಹರೀಶ್ ಪತ್ತೆಯಾಗಿದ್ದಾನೆ. ವಿಚಾರಣೆ ಮಾಡಿದಾಗ, ಮಾ.24ರಂದು ರಾತ್ರಿ 12.30ರ ವೇಳೆಯಲ್ಲಿ ವ್ಹೀಲಿಂಗ್ ಮಾಡಿದ್ದು, ಆಟೋರಿಕ್ಷಾ ನನ್ನದೇ ಚಾಲನೆ ಮಾಡುತ್ತಿದ್ದೂ ನಾನೇ ಎಂದು ಒಪ್ಪಿಕೊಂಡಿದ್ದಾನೆ.

ಸ್ವಾತಂತ್ರ್ಯ ಪೂರ್ವದಲ್ಲಿ ವಾಟ್ಸಾಪ್, ಫೇಸ್‌ಬುಕ್ ಇದ್ದಿದ್ದರೆ ನಮಗೆ ಸ್ವಾತಂತ್ರ್ಯ ಸಿಗುತ್ತಿರಲಿಲ್ಲ!

●ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ, ಹೃದ್ರೋಗ ತಜ್ಞರೂ ಆದ ಸಂಸದ ಡಾ. ಸಿ.ಎನ್.ಮಂಜುನಾಥ್ ವಿಷಾದ ●ಸಾಮಾಜಿಕ ಜಾಲತಾಣಗಳು ಯುವ ಜನರ ಹಾದಿ ತಪ್ಪಿಸುತ್ತಿವೆ ●ಮಹಾಜನ ಕಾಲೇಜಿನಲ್ಲಿ ಸ್ನಾತಕ, ಸ್ನಾತಕೋತ್ತರ ಪದವಿ ಪ್ರದಾನ



ಪೂಜಾ ಭಾಗವತ್ ಸ್ಮಾರಕ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ವಿಭಾಗದ ವಿವಿಧ ವಿಷಯಗಳಲ್ಲಿ ತೇರ್ಗಡೆ ಹೊಂದಿರುವ ಒಟ್ಟು 752 ವಿದ್ಯಾರ್ಥಿಗಳಿಗೆ ಪದ್ಮಶ್ರೀ ಪುರಸ್ಕೃತ, ಸಂಸದ ಡಾ.ಸಿ.ಎನ್.ಮಂಜುನಾಥ್, ಮೈಸೂರು ವಿವಿ ಉಪಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಸೇರಿದಂತೆ ಇತರೆ ಗಣ್ಯರ ಸಮ್ಮುಖದಲ್ಲಿ ಶನಿವಾರ ಪದವಿ ಪ್ರಧಾನ ಮಾಡಲಾಯಿತು.

ಮೈಸೂರು, ಮಾ.28(ಎಸ್‌ಪಿಎನ್)– ಮೈಸೂರು ಜಯಲಕ್ಷ್ಮೀಪುರಂನಲ್ಲಿರುವ ಮಹಾಜನ ಪ್ರಥಮ ದರ್ಜೆ ಕಾಲೇಜು ಆವರಣದ ಡಾ.ಎಪಿಜೆ ಅಬ್ದುಲ್ ಕಲಾಂ ಸಭಾಂಗಣದಲ್ಲಿ ಪೂಜಾ ಭಾಗವತ್ ಸ್ಮಾರಕ ಸ್ನಾತಕ ಪದವಿಯ 323 ಮತ್ತು ಸ್ನಾತಕೋತ್ತರ ಪದವಿ ವಿಭಾಗದ ವಿವಿಧ ವಿಷಯಗಳಲ್ಲಿ ತೇರ್ಗಡೆ ಹೊಂದಿರುವ 419 ಮಂದಿ ಸೇರಿದಂತೆ ಒಟ್ಟು 752 ವಿದ್ಯಾರ್ಥಿಗಳಿಗೆ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರೂ ಆದ ಸಂಸದ ಡಾ.ಸಿ.ಎನ್. ಮಂಜುನಾಥ್, ಮೈಸೂರು ವಿವಿ ಉಪಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಸೇರಿದಂತೆ ಇತರೆ ಗಣ್ಯರ ಸಮ್ಮುಖದಲ್ಲಿ ಶನಿವಾರ ಪದವಿ ಪ್ರಮಾಣ ಪತ್ರ ಪ್ರಧಾನ ಮಾಡಿದರು.

2024–25ನೇ ಶೈಕ್ಷಣಿಕ ವರ್ಷದ ಸ್ನಾತಕ ಪದವಿ ವಿಭಾಗದ ಬಿ.ಎ, ಬಿ.ಕಾಂ, ಬಿಬಿಎ, ಬಿಸಿಎ, ಬಿಎಸ್ಸಿ ಹಾಗೂ ಬಿಬಿಎ (ಹೋಟೆಲ್ ಅಂಡ್ ಹಾಸ್ಪಿಟಾಲಿಟಿ, ಎವಿಯೇಷನ್ ಅಂಡ್ ಇಂಟರ್ ನ್ಯಾಷನಲ್ ಟೂರಿಸಂ) ಪ್ರೋಗ್ರಾಂಗಳ ಒಟ್ಟು 323 ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರ ಪ್ರಧಾನ ಮಾಡಲಾಯಿತು. ಇದರಲ್ಲಿ 176 ವಿದ್ಯಾರ್ಥಿಗಳು ಉನ್ನತ ಶ್ರೇಣಿ, 122 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. 26 ವಿದ್ಯಾರ್ಥಿಗಳು ಪದಕದೊಂದಿಗೆ ನಗದು ಬಹುಮಾನವನ್ನು ಪಡೆದರು.

ಸ್ನಾತಕೋತ್ತರ ಪದವಿ ವಿಭಾಗದ ಎಂಬಿಎ, ಎಂಸಿಎ, ಎಂಕಾಂ, ಎಂಎಸ್‌ಡಬ್ಲ್ಯೂ, ಎಂಎಸ್ಸಿ, ಕೆಮಿಸ್ಟ್ರಿ, ಎಂಎಸ್ಸಿ ಬಯೋಕೆಮಿಸ್ಟ್ರಿ, ಎಂಎಸ್ಸಿ ಬಯೋಟೆಕ್ನಾಲಜಿ, ಎಂಎಸ್ಸಿ ಮೈಕ್ರೋಬಯಾಲಜಿ ಹಾಗೂ ಎಂಟಿಟಿಎಂ ಸೇರಿದಂತೆ 9 ಪ್ರೋಗ್ರಾಂಗಳ ಒಟ್ಟು 409 ವಿದ್ಯಾರ್ಥಿಗಳು ಪದವಿ ಪ್ರಮಾಣ ಪತ್ರ ಸ್ವೀಕರಿಸಿದರು. ಇದರಲ್ಲಿ 84 ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ, 314 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಹಾಗೂ 20 ವಿದ್ಯಾರ್ಥಿಗಳು ಪದಕದೊಂದಿಗೆ ನಗದು ಬಹುಮಾನ, 4 ವಿದ್ಯಾರ್ಥಿಗಳಿಗೆ ದತ್ತಿ ನಗದು ಬಹುಮಾನ ನೀಡಿ ಗೌರವಿಸಲಾಯಿತು.

> ಯುಜಿ ವಿಭಾಗದ ಪ್ರತಿಭಾವಂತ ವಿದ್ಯಾರ್ಥಿಗಳಾದ ಎಸ್.ಕೀರ್ತನಾ ಸಂಜನ ವಿ.ಸೋಮಶೇಖರ್, ಎಲೂಯಿ ಶರ್ಮಿಳಾ, ಎಚ್.ತೇಜಸ್, ಬಿ.ಎಸ್.ಸುಹಾಸ್, ಎಂ.ಎನ್. ಸಂಜನಾ, ಎನ್.ಆರ್.ತೇಜಸ್ವಿನಿ, ಖುಷಿ ಕೆ.ಸೋಮಾನಿ, ಅಭಯ್ ಮರುಳಿಧರ್, ಆರ್.ದೇವಿಕಾ, ಎಸ್.ಕೆ.ಕೀರ್ತನಾ, ಎಂ.ಕೆ.ಸಂಜನಾ, ಆದಿತಿ ಎನ್.ತೇಜಸ್ವಿನಿ, ಎಚ್.ಎನ್. ಸುದಿಥಿ ಹಾಗೂ ಪ್ರತಿಭಾವಂತ ಪಿಜಿ ವಿದ್ಯಾರ್ಥಿಗಳಾದ ಎಚ್.ಬಿ.ಸಂಧ್ಯಾ, ಜೆ.ಎಸ್. ಸಿಂಧೂ, ಅಖಿಲ ಕಣಿ, ಎಲ್.ಕಾವ್ಯಶ್ರೀ, ಎನ್.ವರುಣ್ ಕುಮಾರ್, ಕೆ.ಅನುಜಾ, ಅನರ್ಘ್ಯ ಟೆಂಡೂರ್, ಮೇಘ ಸೋನು, ವೈ.ಎಸ್.ಅಪ್ಪು ಪ್ರಸಾದ್ ಅವರಿಗೆ ಸ್ನಾತಕೋತ್ತರ ವಿಷಯಗಳಿಗೆ ಪದವಿ ಪ್ರಮಾಣ ಪತ್ರದ ಜೊತೆಗೆ ನಗದು ಬಹುಮಾನ ವಿತರಿಸಲಾಯಿತು.

ಬಳಿಕ ಸಂಸದ ಡಾ.ಸಿ.ಎನ್.ಮಂಜುನಾಥ್ ಮಾತನಾಡಿ, ಪ್ರಪಂಚದೆಲ್ಲೆಡೆ ಹಲವು ಹೆಸರಾಂತ ವಿವಿಗಳು ಕಾರ್ಯನಿರ್ವಹಿಸುತ್ತಿವೆ. ಆ ವಿಶ್ವವಿದ್ಯಾನಿಲಯಗಳು ಜಗತ್ತಿನ ಎಲ್ಲಾ ರಾಷ್ಟ್ರಗಳಿಗೂ ಪರಿಚಯವಿರುವುದಿಲ್ಲ. ಆದರೆ, ಇತ್ತೀಚಿಗೆ ಮೊಬೈಲ್‌ನಲ್ಲಿ ಉದ್ಭವಿಸಿರುವ ವಾಟ್ಸಾಪ್ ವಿವಿಯಿಂದ ಸಮಾಜ ದಾರಿತಪ್ಪುವಂತಾಗಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಸ್ವಾತಂತ್ರ್ಯ ಪೂರ್ವದಲ್ಲಿ ಸಾಮಾಜಿಕ ಜಾಲತಾಣಗಳಾದ ವಾಟ್ಸಾಪ್, ಫೇಸ್ ಬುಕ್ ಸೇರಿದಂತೆ ಇತರೆ ಸಾಮಾಜಿಕ ಜಾಲತಾಣಗಳ ಕಾರ್ಯಾಚರಣೆ ಇದ್ದಿದ್ದರೆ, ನಮಗೆ ಖಂಡಿತವಾಗಿಯೂ ಸ್ವಾತಂತ್ರ್ಯ ಲಭಿಸುತ್ತಿರಲಿಲ್ಲ. ಏಕೆಂದರೆ ಎಲ್ಲರೂ ಬ್ರಿಟಿಷರ ಆಳ್ವಿಕೆಯೇ ಸರಿಯಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದರು. ಸರ್ಕಾರ ಸಾಮಾಜಿಕ ಜಾಲತಾಣ ನಿಷೇಧದ ಜೊತೆಗೆ ಪೋಷಕರೂ ಮಕ್ಕಳನ್ನು ಸಾಮಾಜಿಕ ಜಾಲತಾಣದಿಂದ ಕಡ್ಡಾಯವಾಗಿ ದೂರವಿಡುವ ನಿರ್ಧಾರ ತೆಗೆದುಕೊಳ್ಳಬೇಕು ಎಂದು ಸಲಹೆ ನೀಡಿದರು.

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ಹೊಸದರಲ್ಲಿ ಶೇ.30 ಸಾಕ್ಷರತೆ ಸಮಾಜದಲ್ಲಿತ್ತು. ಆದರೆ, ಶೇ.100ರಷ್ಟು ಸಂಸ್ಕಾರಯುತ ಜನರು ಹೆಚ್ಚಾಗಿದ್ದರು. ಇದೀಗ ಶೇ.90ರಷ್ಟು ಶಿಕ್ಷಿತವರ್ಗವಿದೆ. ಆದರೆ, ಶೇ.30 ಸಂಸ್ಕಾರಯುತ ಜನರಿದ್ದಾರೆ. ಮೌಲ್ಯವಿಲ್ಲದ ಶಿಕ್ಷಣ ಪಡೆದರೆ, ಯಾವುದೇ ಕ್ಷೇತ್ರದಲ್ಲೂ ವಿದ್ಯಾರ್ಥಿಗಳ ಭವಿಷ್ಯ ರೂಪಿಸಲು ಸಾಧ್ಯವಿಲ್ಲ ಎಂದು ತಿಳಿಸಿದರು.

ವಿದ್ಯುತ್, ಕಬ್ಬಿಣ ಕೆಲಸ ಸೇರಿದಂತೆ ಇತರೆ ಕೌಶಲ್ಯಗಳನ್ನು ಕಲಿಯುತ್ತಿರುವ ಯುವಕರಿಗೆ ದಿನದ 24 ಗಂಟೆಯೂ ಕೆಲಸ ಸಿಗುತ್ತವೆ. ಸ್ನಾತಕೋತ್ತರ, ಸ್ನಾತಕ ವಿಷಯಗಳಲ್ಲಿ ಯುಜಿ–ಪಿಜಿ ಪದವಿ ಮುಗಿಸಿದವರಿಗೆ ಕೆಲಸ ಸಿಗದೇ ಉತ್ತಮ ದಾಯಕ ಜೀವನ ನಡೆಸಲು ಸಾಧ್ಯವಿಲ್ಲ. ಹಾಗಾಗಿ ಹೆಚ್ಚುಹೆಚ್ಚು ಕೌಶಲ ವಿಷಯಗಳನ್ನು ಅಭ್ಯಾಸ ಮಾಡುವಂತೆ ಸಲಹೆ ನೀಡಿದರು.

ಈ ವೇಳೆ ಸಂಸದ ಡಾ.ಸಿ.ಎನ್.ಮಂಜುನಾಥ್, ಉಪಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಅವರನ್ನು ಸನ್ಮಾನಿಸಲಾಯಿತು. ವೇದಿಕೆಯಲ್ಲಿ ಮಹಾಜನ ವಿದ್ಯಾಸಂಸ್ಥೆ ಅಧ್ಯಕ್ಷರಾದ ಟಿ.ಮುರುಳೀಧರ್, ಗೌರವ ಕಾರ್ಯದರ್ಶಿ ಡಾ.ಟಿ. ವಿಜಯಲಕ್ಷ್ಮಿ ಮುರುಳೀಧರ್, ಮಹಾಜನ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಡಾ.ಸಿ.ಕೆ.ಸಿ.ಕೆ.ರೇಣುಕಾರ್ಯ, ಪ್ರಾಂಶುಪಾಲೆ ಡಾ.ಬಿ.ಆರ್.ಜಯಕುಮಾರಿ, ಪರೀಕ್ಷಾ ನಿಯಂತ್ರಾಧಿಕಾರಿ ಶೃತಿ ಪೂಣಚ್ಚ ಡಾ.ಎಚ್.ಶ್ರೀಧರ್, ಹರೀಶ್, ಡಾ.ಬಿ.ಆರ್. ಜಯಕುಮಾರ್ ಉಪಸ್ಥಿತರಿದ್ದರು.

